# ವಿಕಾಸ

## ವಾರ್ಷಿಕ ಸಂಚಿಕೆ: 2023-24

**ತಿಳಿವು, ನಡತೆ, ಗಳಿಕೆಗಾಗಿ ಕಲಿಕೆ**




ಕಲ್ಪತರು ವಿದ್ಯಾ ಸಂಸ್ಥೆ (ರಿ)

**ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮದರ್ಜೆ ಕಾಲೇಜು, ತಿಪಟೂರು**

# ಪ್ರಾತಃಸ್ಮರಣೀಯರು



**ಲಿಂಗೈಕ್ಯ ಶ್ರೀ ಪಲ್ಲಾಗಟ್ಟಿ ಅಡವಪ್ಪನವರು**
ಕಲ್ಪತರು ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು



**ಲಿಂಗೈಕ್ಯ ಶ್ರೀ ಜೆ.ಆರ್. ಮಹಲಿಂಗಯ್ಯನವರು**
ಕಲ್ಪತರು ವಿದ್ಯಾಸಂಸ್ಥೆಯ ಸಂಸ್ಥಾಪಕ ಪ್ರಾಚಾರ್ಯರು



**ಲಿಂಗೈಕ್ಯ ಶ್ರೀ ಡಿ.ಎಂ. ಶಂಕರಪ್ಪನವರು**
ಕಲ್ಪತರು ವಿದ್ಯಾಸಂಸ್ಥೆಯ ಮಾಜಿ ಅಧ್ಯಕ್ಷರು



**ಲಿಂಗೈಕ್ಯ ಶ್ರೀ ಟಿ.ಎಂ. ಮಂಜುನಾಥ್‌ರವರು**
ಕಲ್ಪತರು ವಿದ್ಯಾಸಂಸ್ಥೆಯ ಮಾಜಿ ಅಧ್ಯಕ್ಷರು
ಕಲ್ಪತರು ತಾಂತ್ರಿಕ ಮಹಾವಿದ್ಯಾಲಯದ ಸಂಸ್ಥಾಪಕರು



**ಲಿಂಗೈಕ್ಯ ಶ್ರೀ ಜಿ.ಆರ್. ಕರಿಸಿದ್ಧಾರಾಧ್ಯರು**
ಕಲ್ಪತರು ವಿದ್ಯಾಸಂಸ್ಥೆಯ ಮಾಜಿ ಅಧ್ಯಕ್ಷರು

**ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮದರ್ಜೆ ಕಾಲೇಜು,**

ತಿಪಟೂರು.

# ವಿಕಾಸ

## ವಾರ್ಷಿಕ ಸಂಚಿಕೆ 2023–24

ಪ್ರಧಾನ ಸಂಪಾದಕರು

**ಡಾ. ಉಮೇಶ್,** ಎಂ.ಎ., ಪಿಹೆಚ್.ಡಿ.

ಪ್ರಾಂಶುಪಾಲರು

ಸಂಪಾದಕರು

**ಪ್ರೊ. ಸತೀಶ್ ಚಂದ್ರ ಎ.ಎಂ.** ಎಂ.ಎ., ಎಂ.ಫಿಲ್.

ಮನೋ ವಿಜ್ಞಾನ ವಿಭಾಗ

ಸಂಪಾದಕ ಮಂಡಳಿ

**ಪ್ರೊ. ಸಿ.ಎಂ.ಎಸ್. ಲೋಕೇಶ್ವರಯ್ಯ**

**ಪ್ರೊ. ಮಲ್ಲಿಕಾರ್ಜುನ ಪ್ರಸನ್ನ ಎಸ್.ಎಸ್.**

**ಪ್ರೊ. ಶ್ರೀನಿವಾಸ ಬಿ.**

**ಪ್ರೊ. ರೇಣುಕಾ ಡಿ.**

**ಪ್ರೊ. ಭರತ್ ಆರ್.ಆರ್.**

**ಪ್ರೊ. ಹರ್ಷಿತ ಜಿ.**

**ಪ್ರೊ. ನವೀನ ಕುಮಾರಿ ಜಿ.ಎಸ್.**

# MESSAGE FROM THE PRINCIPAL

*“A Vision is not just a picture of what could be; instead it is an appeal to our better selves and a call to become something more”.*

The website showcases the wealth of experiences we offer the students and gives them a wider appreciation for their wonderful work. We hope you enjoy your visit and return regularly to check out our latest news. .

Dear students and stakeholders, warm Greetings! It is with a profound sense of humility and privilege that I address this message as the newly designated Principal in this prestigious institute. I feel truly fumbled that I have been bestowed with the great responsibility of leading this institution to the dazzling and sparkling shores of renown and grandeur.

“KalpataruVidyaSamsthe” synonyms to instilling discipline and is a reflection aiming to groom, nurture and churnout the best in its potential knowledge seeker who are entrusted to our care. We firmly believe in gives our learners strong values along with a set a wings that may carry them far and wide. Hence we prepare and mould them first as social beings and then scholars. We leave no stone unturned to awaken the latent talents of our students and hone them to perfection. .

The pandemic caused by Covid-19 has inevitably brought in a word-wide unprecedented eruption in all walks of our life and has not spared any sector of the economy. Changing with the change and 'problem' well-handled could be an 'opportunity' in disguise is the novel lesion that this pandamie has taught to all of us. Despite all these challenges, our academic mentors are mindful of constantly making every effort to reach out the teaching – learning needs of the students. Though times do not last for long. Adversity will make you reaffirm to change your goals, remain optimistic and creatively thrive the situation. .

The Enlightened Management, well qualified mentors and adequate infrastructure that are conducive to learning will help you realize and unleash your potential. Whatever turn your life might take, I am confident that your ambitions will find their bearing at this temple of learning.

Along with the dedicated and experienced staff, I will strive hard to continue the long lasting legacy of accomplishment established by my worthy predecessors. We will focus on characters building, meaningful educational innovations and moral upbrining. Be rest assured that as we leap forward our students and their needs will always be at the center of the decisions we make.

Together with all, I look forward to take wholehearted cooperation and support from all the stakeholders to lead this institution to greater glory. .

*With Best Regards,*
Dr. G.N. Umesh
Principal

# ಸಂಪಾದಕೀಯ

ಅರಿವೇ ಗುರು, ಆಚಾರವೇ ಶಿಷ್ಯ, ಜ್ಞಾನವೇ ಲಿಂಗ,
ಪರಿಣಾಮವೇ ತಪ ಸಮತೆ ಯೆಂಬುದೇ ಯೋಗಾದಾಗು ನೋಡ. —ಹಾವಿನಾಳ ಕಲ್ಲಯ್ಯ

ಅರಿವು ಗುರುವಾದಾಗ ಅದನ್ನು ಆಚರಣೆ ತರುವ ಮನಸೇ ಶಿಷ್ಯನ ಸ್ಥಾನ ಪಡೆಯುತ್ತದೆ. ಈ ಅರಿವು ಮತ್ತು ಆಚರಣೆಗೆ ಲಿಂಗವು ಜ್ಞಾನ ರೂಪದಲ್ಲಿದೆ. ಸಮತೆ ಎಂಬುದು ಯೋಗದಿಂದ ಒದಗಿ ಬರುವಂಥದ್ದು. ಮನಸ್ಸು ಮತ್ತು ಇಂದ್ರಿಯಗಳನ್ನು ನಿಗ್ರಹಿಸಿ ತದೇಕ ಚಿತ್ತದಿಂದ ಧ್ಯಾನಸ್ಥನಾಗುವುದೇ ಯೋಗ. ಇದು ಸಕಲ ಜೀವಾತ್ಮರಿಗೆ ಒಳಿತನ್ನು ಮಾಡುವ ಮನಸ್ಥಿತಿಯನ್ನು ಸೃಷ್ಟಿಸುವುದು.

ಊರಿಗೆ ಒಂದು ಶಾಲೆ(ಶಿಕ್ಷಣ ಸಂಸ್ಥೆ)ಯೇ ಲಕ್ಷಣ ಎಂಬ ಹೊಸ ನಾಣ್ಣುಡಿಯಂತೆ ಈ ಊರಿಗಷ್ಟೇ ಅಲ್ಲ ಸುತ್ತಮುತ್ತಲಿನ ಎಲ್ಲಾ ಊರುಗಳಿಗೂ ಕಳಸಪ್ರಾಯದಂತೆ ಆರಂಭವಾದದ್ದು ನಮ್ಮ ಈ "ಕಲ್ಪತರು ವಿದ್ಯಾ ಸಂಸ್ಥೆ". ಈ ಭಾಗದ ಸುತ್ತಮುತ್ತಲಿನ ಗ್ರಾಮೀಣ ಮಕ್ಕಳಿಗೆ ಹೆಚ್ಚಿನ ಮಟ್ಟದ ಕಾಲೇಜು ಶಿಕ್ಷಣ ದೊರೆಯುವಂತಾಗಬೇಕೆಂದು ಶ್ರೀ ಪಲ್ಲಾಗಟ್ಟಿ ಅಡವಪ್ಪ , ಶ್ರೀ ಜಿ ಆರ್ ಮಹಾಲಿಂಗಯ್ಯ ಮೊದಲಾದ ಮಹಾನ್ ಚೇತನಗಳು ಈ ಸಂಸ್ಥೆ ಸ್ಥಾಪಿಸಲು ತಮ್ಮ ತನು, ಮನ, ಧನವನ್ನು ಅರ್ಪಿಸಿರುತ್ತಾರೆ.

ವಿಕಾಸ ವಾರ್ಷಿಕ ಸಂಚಿಕೆಯು ಕಾಲೇಜಿನ ಸಮಗ್ರತೆಗೆ ಹಿಡಿದ ಕನ್ನಡಿ. ವಾರ್ಷಿಕ ಸಂಚಿಕೆಯು ಕಾಲೇಜಿನ ಎಲ್ಲಾ ಚಟುವಟಿಕೆಗಳ ಕ್ರೋಡಿಕೃತ ವರದಿಯಾಗಿದೆ. ಕಾಲೇಜಿನಲ್ಲಿ ಶಿಕ್ಷಣ ನೀಡುವುದರ ಜೊತೆಗೆ ಕಲೆ, ಸಾಂಸ್ಕೃತಿಕ, ಸಾಹಿತ್ಯ ಎನ್.ಎಸ್.ಎಸ್., ಎನ್.ಸಿ.ಸಿ., ರೆಡ್ ಕ್ರಾಸ್ ಮೊದಲಾದ ಕಾರ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತಾವು ತೊಡಗಿಸಿಕೊಳ್ಳಲು ಪ್ರೇರೇಪಿಸಲಾಗುತ್ತದೆ.

ಕಾಲೇಜಿನಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕ ಸಾಧನೆಯ ಜೊತೆಗೆ ತಮ್ಮಲ್ಲಿರುವ ಸೃಜನಶೀಲತೆಯನ್ನು ಅನಾವರಣಗೊಳಿಸಲು ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಇದರ ಪ್ರತಿಫಲವೆಂಬಂತೆ, 2023–24ನೇ ಸಾಲಿನ ವಾರ್ಷಿಕ ಸಂಚಿಕೆಯಲ್ಲಿ ವಿದ್ಯಾರ್ಥಿಗಳು ಬರೆದಿರುವ ಕಥೆ, ಕವನ, ಲೇಖನ ಇತ್ಯಾದಿ ಸಾಹಿತ್ಯಕ ಬರವಣಿಗೆಯನ್ನು ನಾವು ನೋಡಬಹುದಾಗಿದೆ. ಅವರ ಈ ಸೃಜನಶೀಲತೆಯನ್ನು ಮುದ್ರಣ ರೂಪದಲ್ಲಿ ಹೊರ ತರುವುದು ಸಂಚಿಕೆಯ ಉದ್ದೇಶವಾಗಿರುತ್ತದೆ. ವಿದ್ಯಾರ್ಥಿಗಳು ಪಠ್ಯ, ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸಲು ನಮ್ಮ ಕಾಲೇಜಿನ ಅಧ್ಯಾಪಕ ವರ್ಗ ನೀಡುವ ಮಾರ್ಗದರ್ಶನ ಕಾರಣವಾಗಿದೆ.

ನಮ್ಮ ಕಾಲೇಜು ಸುಸಜ್ಜಿತವಾದ ಮೂಲಭೂತ ಸೌಕರ್ಯಗಳನ್ನು ಹೊಂದಿದೆ. ಉತ್ತಮ ಗ್ರಂಥಾಲಯ, ಪ್ರಯೋಗಾಲಯ, ತರಗತಿ ಕೊಠಡಿಗಳು, ವಿಶಾಲವಾದ ಆಟದ ಮೈದಾನ, ಭವ್ಯ ಸಭಾಂಗಣ, ಸುಂದರ ಉದ್ಯಾನವನ, ಮುಕ್ತ ಕಲಿಕೆಯ ಪರಿಸರ ವನ್ನು ಹೊಂದಿದೆ. ಇದರೊಂದಿಗೆ ಬೋಧಕ ಬೋಧಕೇತರ ವರ್ಗದ ಉಪಸ್ಥಿತಿಯು, ಕಾಲೇಜು ಸತತ 62 ವರ್ಷಗಳು ಮುನ್ನಡೆಯಲು ಸಾಧ್ಯವಾಗಿದೆ. ನ್ಯಾಕ್ ಸಮಿತಿಯು 2023 ರ ಆಗಸ್ಟ್ ಮೂರು ಮತ್ತು ನಾಲ್ಕನೇ ತಾರೀಖು ಕಾಲೇಜಿಗೆ ಭೇಟಿ ನೀಡಿದ್ದು, ನಮ್ಮ ಕಾಲೇಜು ನಾಲ್ಕನೇ ಆವೃತ್ತಿಯಲ್ಲಿ 'ಬಿ' ಗ್ರೇಡ್ ಪಡೆದುಕೊಂಡಿದೆ. ಇದಕ್ಕಾಗಿ ಶ್ರಮಿಸಿದ ನಿಕಟಪೂರ್ವ ಪ್ರಾಂಶುಪಾಲರಾದ ಡಾ. ಮಾಲತಿ ವಿ. ಮತ್ತು ಬೋಧಕ, ಬೋಧಕೇತರ ವರ್ಗ, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ವಿದ್ಯಾರ್ಥಿಗಳು ಗುರಿ ನಿರ್ದೇಶಿತ ಯಶಸ್ಸನ್ನು ಸಾಧಿಸಿ ಸಮಾಜದ ಒಳಿತಿಗಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಲಿ ಎಂಬುದು ನಮ್ಮೆಲ್ಲರ ಆಶಯವಾಗಿರುತ್ತದೆ. ಈ ವಿಕಾಸ ವಾರ್ಷಿಕ ಸಂಚಿಕೆ ಸುಂದರವಾಗಿ ಮೂಡಿಬರಲು ಸಹಕರಿಸಿದ ಆಡಳಿತ ಮಂಡಳಿ, ಪ್ರಾಂಶುಪಾಲರು, ಶಿಕ್ಷಕ–ಶಿಕ್ಷಕೇತರ ವೃಂದ, ವಿದ್ಯಾರ್ಥಿವೃಂದ ಹಾಗೂ ಸಂಚಿಕೆಯನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಶಂಕರ್ ಆಫ್‌ಸೆಟ್ ಪ್ರಿಂಟರ್ಸ್‌ನ ದಯಾನಂದರವರಿಗೆ ಕೃತಜ್ಞತೆಗಳು.

**ಪ್ರೊ. ಸತೀಶ್ ಚಂದ್ರ ಎ.ಎಂ.**
ಸಂಪಾದಕರು

# ಕಲ್ಪತರು ವಿದ್ಯಾ ಸಂಸ್ಥೆ, ತಿಪಟೂರು

## ಕಾರ್ಯಕಾರಿ ಮಂಡಳಿ



**ಶ್ರೀ ಪಿ.ಕೆ. ತಿಪ್ಪೇರುದ್ರಪ್ಪ**

ಅಧ್ಯಕ್ಷರು



# ಲಿಂ. ಶ್ರೀ ಎನ್. ಬಸವಯ್ಯ

## ನಿಕಟ ಪೂರ್ವ ಅಧ್ಯಕ್ಷರು

ದಿನಾಂಕ 20-8-2007 ರಿಂದ 27-4-2014 ರವರೆಗೆ



**ಶ್ರೀ ಬಾಗೇಪಲ್ಲಿ. ಎಸ್. ನಟರಾಜು**
**ಉಪಾಧ್ಯಕ್ಷರು**



**ಶ್ರೀ ಟಿ.ಎಸ್. ಬಸವರಾಜು**
**ಉಪಾಧ್ಯಕ್ಷರು**



**ಶ್ರೀ ಬಿ.ಎಸ್. ಉಮೇಶ್**
**ಉಪಾಧ್ಯಕ್ಷರು**



**ಶ್ರೀ ಜಿ.ಪಿ. ದೀಪಕ್**
**ಉಪಾಧ್ಯಕ್ಷರು**



**ಶ್ರೀ ಟಿ.ಯು. ಜಗದೀಶಮೂರ್ತಿ**
**ಕಾರ್ಯದರ್ಶಿಗಳು**



**ಶ್ರೀ ಜಿ.ಎಸ್. ಉಮಾಶಂಕರ್**
**ಕಾರ್ಯದರ್ಶಿಗಳು**



**ಶ್ರೀ ಎಂ.ಆರ್. ಸಂಗಮೇಶ್**
**ಕಾರ್ಯದರ್ಶಿಗಳು**



**ಶ್ರೀ ಸುಧಾಕರ್ ಹೆಚ್.ಜಿ.**
**ಕಾರ್ಯದರ್ಶಿಗಳು**



**ಶ್ರೀ ಟಿ.ಎಸ್. ಶಿವಪ್ರಸಾದ್**

**ಖಜಾಂಚಿಗಳು**

## VISION:

- Education For Wisdom, Conduct And Livelihood.

## MISSION:

- To Impart Quality Education For All, At An Affordable Fee
- To Inculcate Values As Culturally Refined And Socially Acceptable Responsible Citizens.
- To Acquire Competence Through Holistic Education.




**ಡಾ. ಉಮೇಶ್,** ಎಂ.ಎ., ಪಿಹೆಚ್.ಡಿ.

ಪ್ರಾಂಶುಪಾಲರು



राष्ट्रीय मूल्यांकन एवं प्रत्यायन परिषद

विश्वविद्यालय अनुदान आयोग का स्वायत्त संस्थान

NATIONAL ASSESSMENT AND ACCREDITATION COUNCIL

An Autonomous Institution of the University Grants Commission

Certificate of Accreditation

The Executive Committee of the National Assessment and Accreditation Council is pleased to declare

Pallagatti Adavappa Arts and Commerce First Grade College

NH-206, Tiptur, Dist. Tumkur, affiliated to Tumkur University, Karnataka as

Accredited

with CGPA of 2.31 on four point scale

at B grade

valid up to August 11, 2028

Date : August 12, 2023

Director

EC(SC)/162/4th Cycle/KACOGN10240







**ಡಾ. ಉಮೇಶ್,** ಎಂ.ಎ., ಪಿಹೆಚ್.ಡಿ.
ಪ್ರಾಂಶುಪಾಲರು

**ಡಾ. ವಿ. ಮಾಲತಿ,** ಎಂ.ಎ., ಪಿಹೆಚ್.ಡಿ.
ನಿಕಟಪೂರ್ವ ಪ್ರಾಂಶುಪಾಲರು (29–10–2021 ರಿಂದ 30–04–2024)

The executive committee of the National Assesment and Accredition Council headed by Dr. Arun Divakar Nath Bajpai, Vice-chancellor of Atal Bihari Vajpayee University, Bilaspur and the members Sr. Maya Undi, Professor of Ahamadnagar College and Dr. Aravinder Singh Bhalla, Principal, Gujranwala Gurunanak Khalsa College, Ludhiyana, visited our college on 3rd & 4th August 2023 and accredited our college with 'B' Grade. The president and executive committee of Kalpataru Vidya Samsthe, the Principal and the faculty of PAAC are very grateful to UGC and NAAC peer team.



ಪ್ರಾಂಶುಪಾಲರೊಂದಿಗೆ ಅಧ್ಯಾಪಕ ವೃಂದ



ಸಂಪಾದಕ ಮಂಡಳಿ

ವಿಕಾಸ ವಾರ್ಷಿಕ ಸಂಚಿಕೆ ಸಮಿತಿ



ಸಾಂಸ್ಕೃತಿಕ ಸಮಿತಿ

# ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮದರ್ಜೆ ಕಾಲೇಜು,

## ತಿಪಟೂರು.

## ಬೋಧಕ ವರ್ಗ

ಪ್ರಾಂಶುಪಾಲರು :

**ಡಾ. ಉಮೇಶ್,** ಎಂ.ಎ., ಪಿಹೆಚ್.ಡಿ.

ಕನ್ನಡ ವಿಭಾಗ : **ಡಾ. ಡಿ.ರೇಣುಕಾ** ಎಂ.ಎ., ಬಿ.ಇಡಿ., NET, ಮುಖ್ಯಸ್ಥರು.
**ಶ್ರೀ ಹೆಚ್.ಎಸ್.ವಿಶ್ವನಾಥ್,** ಎಂ.ಎ, ಬಿ.ಇಡಿ.
**ಶ್ರೀ ಬಿ.ಸಿ.ರವಿಶಂಕರ್,** ಎಂ.ಎ., ಬಿ.ಇಡಿ., KSET.
**ಶ್ರೀ ಡಿ.ಎಸ್. ಇಂದ್ರೇಶ್,** ಎಂ.ಎ., ಎಂ.ಫಿಲ್., ಬಿ.ಇಡಿ.

ಇಂಗ್ಲಿಷ್ ವಿಭಾಗ : **ಪ್ರೊ. ಸಿ.ಎಂ.ಎಸ್.ಲೋಕೇಶ್ವರಯ್ಯ** ಎಂ.ಎ., ಎಂ.ಫಿಲ್., ಬಿ.ಎ.ಇ.ಡಿ, ಮುಖ್ಯಸ್ಥರು.
**ಡಾ.ಜಿ.ಎನ್.ಉಮೇಶ್,** ಎಂ.ಎ., ಎಂ.ಫಿಲ್., ಪಿಹೆಚ್.ಡಿ., ಪಿಜಿಡಿಇ.
**ಶ್ರೀಮತಿ ಅರ್ಚನಾ ವೆಂಕಟೇಶ್** ಎಂ.ಎ., ಎಂ.ಫಿಲ್.
**ಶ್ರೀಮತಿ ಪೂಜಾ,** ಎಂ.ಎ., ಬಿ.ಇಡಿ.
**ಶ್ರೀಮತಿ ವಿನುತ,** ಎಂ.ಎ.

ಹಿಂದಿ ವಿಭಾಗ : **ಶ್ರೀ ವಿರೂಪಾಕ್ಷಪ್ಪ ಹೆಚ್.ಜಿ ,** ಎಂ.ಎ.

ಇತಿಹಾಸ ವಿಭಾಗ : **ಡಾ.ಜಿ.ಎಂ.ಲಲಾಟಾಕ್ಷಮೂರ್ತಿ** ಎಂ.ಎ., ಎಂ.ಫಿಲ್., ಪಿಹೆಚ್.ಡಿ., ಮುಖ್ಯಸ್ಥರು.
**ಡಾ. ಸಿದ್ದಲಿಂಗಮೂರ್ತಿ** ಎಂ.ಎ., ಪಿಹೆಚ್.ಡಿ., KSET

ಅರ್ಥಶಾಸ್ತ್ರ ವಿಭಾಗ : **ಪ್ರೊ ಹೆಚ್.ಆರ್.ಧನಂಜಯ** ಎಂ.ಎ., ಮುಖ್ಯಸ್ಥರು
**ಶ್ರೀ ಎಂ.ಸಿ.ಯೋಗಾನಂದ** ಎಂ.ಎ., ಬಿ.ಇಡಿ., KSET

ರಾಜ್ಯಶಾಸ್ತ್ರ ವಿಭಾಗ : **ಶ್ರೀ ಎಸ್.ಎಂ. ಗಂಗಾಧರಪ್ಪ** ಎಂ.ಎ. ಮುಖ್ಯಸ್ಥರು
**ಶ್ರೀಮತಿ ಅಂಬಿಕಾ** ಎಂ.ಎ., ಬಿ.ಇಡಿ.

ಸಮಾಜಶಾಸ್ತ್ರ ವಿಭಾಗ : **ಶ್ರೀ ಆರ್.ಆರ್. ಭರತ್,** ಎಂ.ಎ. ಮುಖ್ಯಸ್ಥರು
**ಶ್ರೀಮತಿ ಭಾರತಿ ಟಿ.ಆರ್.** ಎಂ.ಎ.

ಮನಃ ಶಾಸ್ತ್ರ ವಿಭಾಗ : **ಡಾ ಟಿ.ಆರ್. ವಿಜಯಕುಮಾರಿ** ಎಂ.ಎ., ಪಿ.ಹೆಚ್.ಡಿ. ಮುಖ್ಯಸ್ಥರು
**ಪ್ರೊ. ಎ.ಎಂ. ಸತೀಶ್‌ಚಂದ್ರ,** ಎಂ.ಎ., ಎಂ.ಫಿಲ್.
**ಡಾ. ಹೆಚ್.ವಿ. ವಿನುತ** ಎಂ.ಎಸ್ಸಿ., ಪಿ.ಹೆಚ್.ಡಿ.

ಭೂಗೋಳಶಾಸ್ತ್ರ ವಿಭಾಗ : **ಪ್ರೊ. ಮಂಜುನಾಥ ಸ್ವಾಮಿ** ಎಂ.ಎ, SLET ಮುಖ್ಯಸ್ಥರು.
**ಶ್ರೀ ಎ.ಎಂ. ಕಾಂತರಾಜು,** ಎಂ.ಎಸ್ಸಿ.
**ಶ್ರೀ ಎಂ.ಎಲ್. ಬೋರೇಗೌಡ,** ಎಂ.ಎಸ್ಸಿ.

| | |
|---|---|
| ವಾಣಿಜ್ಯ ಶಾಸ್ತ್ರ ವಿಭಾಗ : | **ಪ್ರೊ. .ಎಸ್.ಎಸ್. ಮಲ್ಲಿಕಾರ್ಜುನ ಪ್ರಸನ್ನ** ಎಂ.ಕಾಂ., ಎಂ.ಫಿಲ್., ಪಿ.ಜಿ.ಡಿ.ಬಿ.ಎಂ. ಮುಖ್ಯಸ್ಥರು |
| | **ಶ್ರೀಮತಿ ಎಸ್. ಲತಾ** ಎಂ.ಕಾಂ., ಎಂ.ಫಿಲ್. |
| | **ಶ್ರೀಮತಿ ಸಿ.ಎಂ. ದಿವ್ಯಾ ಚೇತನ್** ಎಂ.ಕಾಂ. |
| | **ಶ್ರೀ.ಎಂ.ಎಸ್. ರೇಣು** ಎಂ.ಕಾಂ. |
| | **ಶ್ರೀ ಕೆ.ಸಿ.ಪಾತೇಶ್** ಎಂ.ಕಾಂ., NET, KSET |
| | **ಶ್ರೀಮತಿ ಜಿ.ಜ್ಯೋತಿ.** ಎಂ.ಕಾಂ., KSET |
| | **ಶ್ರೀಮತಿ ನವೀನ ಕುಮಾರಿ** ಎಂ.ಕಾಂ. |
| | **ಕುಮಾರಿ ಮಧುಮಾಲ.** ಎಂ.ಕಾಂ. |
| | **ಶ್ರೀಮತಿ ಹರ್ಷಿತ ಜಿ.** ಎಂ.ಕಾಂ., ಬಿ.ಇಡಿ. |
| | **ಶ್ರೀಮತಿ ಸ್ಮಿತಾ** ಎಂ.ಕಾಂ., KSET ಬಿ.ಇಡಿ. |
| ಸ್ನಾತಕೋತ್ತರ ವಿಭಾಗ : | **ಶ್ರೀಮತಿ ಎಸ್.ಲತಾ.** ಎಂ.ಕಾಂ., ಎಂ.ಫಿಲ್. ಸಂಯೋಜಕರು |
| | **ಶ್ರೀ ದಿಲೀಪ್ ಹೆಚ್.ಆರ್.** ಎಂ.ಕಾಂ., ಎಂ.ಬಿ.ಎ. |
| | **ಶ್ರೀಮತಿ ಸಿ.ಎಂ.ದಿವ್ಯ.** ಎಂ.ಕಾಂ. |
| | **ಶ್ರೀಮತಿ ಹೆಚ್.ಡಿ.ಅನುಷ,** ಎಂ.ಬಿ.ಎ. |
| | **ಶ್ರೀಮತಿ ನವೀನ ಕುಮಾರಿ,** ಎಂ.ಕಾಂ. |
| ದೈಹಿಕ ಶಿಕ್ಷಣ ವಿಭಾಗ : | **ಪ್ರೊ ಬಿ. ಶ್ರೀನಿವಾಸ** ಎಂ.ಪಿ.ಇಡಿ., ಎಂ.ಫಿಲ್., KSET ದೈಹಿಕ ಶಿಕ್ಷಣ ನಿರ್ದೇಶಕರು |
| ಗ್ರಂಥಾಲಯ ವಿಭಾಗ : | **ಶ್ರೀಮತಿ ಇರುದಯ ಮೇರಿ. ಎಂ,** NMLISC, PG, DCA, KSET, ಗ್ರಂಥಪಾಲಕರು |
| | **ಶ್ರೀ ಅನಿಲ್,** ದ್ವಿದ. ಸಹಾಯಕರು. |
| | **ಶ್ರೀಮತಿ ರೇಖಾ,** ದ್ವಿತೀಯ ದರ್ಜೆ ಸಹಾಯಕರು. |
| | **ಶ್ರೀಮತಿ ಫಾಲಾಕ್ಷಮ್ಮ** ಸಹಾಯಕರು. |
| ಕಛೇರಿ ಸಿಬ್ಬಂದಿ : | **ಶ್ರೀಮತಿ ಸುಜಾತ ಟಿ.ಎಂ.** |
| | **ಶ್ರೀಮತಿ ಅನುಸೂಯ. ಎನ್.** |
| | **ಶ್ರೀಮತಿ ಸುಮಿತ್ರ ಡಿ.ಎಸ್.** |
| | **ಶ್ರೀ ಮೋಹಿತ್ ಕೆ.ಆರ್.** |
| | **ಶ್ರೀ ಆನಂದ ಟಿ.ಆರ್.** |
| | **ಶ್ರೀ ವಿಶ್ವನಾಥ್.** |
| | **ಶ್ರೀ ಚಂದ್ರೇಶ್.** |
| ಸಹಾಯಕರು : | **ಶ್ರೀ ಗುರುಪಾದಯ್ಯ, ಶ್ರೀ ಎ.ಸಣ್ಣಯ್ಯ, ಶ್ರೀ ಹೆಚ್.ಬಿ.ಯೋಗಾನಂದ. ಶ್ರೀ ಎಂ.ಎಸ್.ಮಂಜಪ್ಪ, ಶ್ರೀಮತಿ ಕೋಮಲಮ್ಮ, ಶ್ರೀ ಬಸವರಾಜು, ಶ್ರೀಮತಿ ರಾಧ, ಶ್ರೀ ನಾಗರಾಜು. ಶ್ರೀ ರಾಜಣ್ಣ.** |

# ರಾಷ್ಟ್ರೀಯ ಸೇವಾ ಯೋಜನೆಯ ವರದಿ

**1.** ನನಗಲ್ಲ ನಿನಗೆ ಎಂಬ ರಾಷ್ಟ್ರೀಯ ಸೇವಾ ಯೋಜನೆಯ ಧ್ಯೇಯವನ್ನು ಹೊಂದಿ ಪಲ್ಲಾಗಟ್ಟಿ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು ಎನ್.ಎಸ್.ಎಸ್ ನ ಮೂರು ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. 2023–2024 ನೇ ಸಾಲಿನಲ್ಲಿ ಸುಮಾರು 300 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದಾರೆ. ಕಾರ್ಯಕ್ರಮಾಧಿಕಾರಿಗಳಾಗಿ ಪ್ರೊ. ಸಿ.ಎಂ.ಎಸ್. ಲೋಕೇಶ್ವರಯ್ಯ, ಪ್ರೊ. ಶ್ರೀನಿವಾಸ ಬಿ. ಹಾಗೂ ಪ್ರಾಧ್ಯಾಪಕ ಯೋಗಾನಂದ ಎಂ.ಸಿ. ಕಾರ್ಯ ನಿರ್ವಹಿಸುತ್ತಿದ್ದಾರೆ. ಎಂದಿನಂತೆ ಈ ವರ್ಷವೂ ಸಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ಸಹಬಾಳ್ವೆ, ಕಾನೂನಿನ ಅರಿವು, ವ್ಯಕ್ತಿತ್ವ ವಿಕಸನ, ಸ್ವಚ್ಛತಾ ಆಂದೋಲನ, ಮಳೆನೀರಿನ ಸದ್ಬಳಕೆ, ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಗಿದೆ.

2. 1–11–2023 ರಂದು ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. 14–12–2023 ಲೈಂಗಿಕ ದೌರ್ಜನ್ಯ ವಿರೋಧಿ ದಿನ.

3. ದಿನಾಂಕ 6–11–2023 ರಂದು ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಚಟುವಟಿಕೆಗಳ ಉದ್ಘಾಟನೆಯನ್ನು ವಿಶ್ರಾಂತ ಪ್ರಾಧ್ಯಾಪಕ ತುಮಕೂರು ವಿಶ್ವವಿದ್ಯಾಲಯದ ನಿವೃತ್ತ ಎನ್.ಎಸ್.ಎಸ್. ಸಂಯೋಜನಾಧಿಕಾರಿ ಪ್ರೊ. ಹೆಚ್.ಎಸ್.ಪ್ರಕಾಶ್ ನೆರವೇರಿಸಿದರು. ಎನ್.ಎಸ್.ಎಸ್.ನ ಮೂರು ಘಟಕಗಳು ವಾರಾಂತ್ಯದ ದಿನಗಳಲ್ಲಿ ಶ್ರಮದಾನವನ್ನು ಕೈಗೊಂಡು ಕಾಲೇಜಿನ ಆವರಣ ಹಾಗೂ ಸುತ್ತಮುತ್ತ ಕಳೆ ಗಿಡ ನಾಶಮಾಡಿ ಸ್ವ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ.

4. 30–11–2023 ಕನಕದಾಸ ಜಯಂತಿ ಆಚರಿಸಲಾಯಿತು. ದಿನಾಂಕ 31–10–2023 ರಂದು ರಾಷ್ಟ್ರೀಯ ಏಕತಾ ದಿನ ಆಚರಿಸಲಾಯಿತು .

5. 1–12–2023 ರಂದು HIV / AIDS ನಿಯಂತ್ರಣ ಕಾರ್ಯಕ್ರಮದಲ್ಲಿ ತಾಲ್ಲೂಕು ಆರೋಗ್ಯ ಕೇಂದ್ರ, ತಿಪಟೂರು, ಇವರ ಆಶ್ರಯದಲ್ಲಿ ಜಾಥಾ ಹೊರಟು ಸಾರ್ವಜನಿಕರಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸಲಾಯಿತು.

6. ದಿನಾಂಕ 27–12–2023 ರಂದು ರೋಟರಿ ಸಂಸ್ಥೆ, ತಿಪಟೂರು, ಸ್ಕೌಟ್ಸ್ ಮತ್ತು ಗೈಡ್ಸ್, ಪಲ್ಲಾಗಟ್ಟಿ ಅಡವಪ್ಪ ಕಾಲೇಜು ಇವರ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

7. ದಿನಾಂಕ 4–01–2024 ರಂದು ಒಂದು ದಿನದ ಮಡಿಕೇರಿ ಪ್ರವಾಸಕ್ಕೆ ತೆರಳಿದ್ದೆವು.

8. ದಿನಾಂಕ 12–01–2024 ರಂದು ನಡೆದ ಕಲ್ಪತರು ಕ್ರೀಡೋತ್ಸವದಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಟ್ಟರು.

9. ದಿನಾಂಕ 12-08-2023 ರಿಂದ ದಿನಾಂಕ 11-0-2023 ರವರೆಗೆ ತಿಪಟೂರು ತಾಲ್ಲೂಕು ಗೌಡನಕಟ್ಟೆ ಗೊಲ್ಲರಹಟ್ಟಿ ಗ್ರಾಮದಲ್ಲಿ ವಾರ್ಷಿಕ ವಿಶೇಷ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು .

10. 2023-2024 ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರವನ್ನು ತಿಪಟೂರು ತಾಲ್ಲೂಕು ಜಕ್ಕನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು. ಈ ಶಿಬಿರದಲ್ಲಿ ಸುಮಾರು 140 ಸಸಿಗಳನ್ನು ನೆಡಲಾಯಿತು. ಗ್ರಾಮಸ್ಥರಿಗೆ ಉಚಿತ ನೇತ್ರ ತಪಾಸಣೆಯನ್ನು, ವೈಭವಿ ಮಕ್ಕಳ ಆಸ್ಪತ್ರೆ ವತಿಯಿಂದ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ ಮಾಡಿಸಲಾಯಿತು. ಅಗ್ನಿಶಾಮಕದಳ ತಿಪಟೂರು ಇವರಿಂದ ಅಗ್ನಿ ಅವಗಡಗಳ ಬಗ್ಗೆ ಪ್ರಾತ್ಯಕ್ಷಿಕೆ ಕೊಡಿಸಲಾಯಿತು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ವತಿಯಿಂದ ಉಚಿತ ಕಾನೂನು ನೆರವನ್ನು ನೀಡಲಾಯಿತು. ಶಿಬಿರದಲ್ಲಿ ಪ್ರತಿ ದಿನ ಬೆಳಗ್ಗೆ ಯೋಗಾಸನ ತರಗತಿಗಳನ್ನು ನಡೆಸಲಾಯಿತು. ಬೆಳಗ್ಗೆ ಹಾಗೂ ಸಂಜೆ ಎನ್.ಎಸ್.ಎಸ್. ಧ್ವಜ ಆರೋಹಣ ಮತ್ತು ಅವರೋಹಣ ಕಾರ್ಯಕ್ರಮವನ್ನು ಕ್ರಮವಾಗಿ ನೆರವೇರಿಸಲಾಯಿತು. ಮನಮೋಹಕ ಸಾಂಸ್ಕೃತಿಕ ಕಾರ್ಯಕ್ರಮಗಳು ಗ್ರಾಮಸ್ಥರ ಮನಸೂರೆಗೊಂಡವು.

ಸಹಕರಿಸಿದ ಗೌಡನಕಟ್ಟೆ ಹಾಗೂ ಜಕ್ಕನಹಳ್ಳಿ ಗ್ರಾಮಸ್ಥರಿಗೆ ಕಲ್ಪತರು ವಿದ್ಯಾ ಸಂಸ್ಥೆಯ ಪದಾಧಿಕಾರಿಗಳಿಗೆ ಪ್ರಾಂಶುಪಾಲರಿಗೆ, ಅಧ್ಯಾಪಕ, ಅಧ್ಯಾಪಕೇತರರಿಗೆ, ವಿದ್ಯಾರ್ಥಿಗಳಿಗೆ ಧನ್ಯವಾದಗಳು.

## ನುಡಿ ಮುತ್ತುಗಳು

- **ವಿದ್ಯಾವಂತ ಎಲ್ಲೆಲ್ಲಿಯೂ ಗೌರವಿಸಲ್ಪಡುತ್ತಾನೆ.**
- **ಸಮಯ ಅತ್ಯಮೂಲ್ಯ, ಅದರ ಸದ್ಬಳಕೆ ಮಾಡಿ.**
- **ಸ್ವತಂತ್ರವಾಗಿರಿ, ಯಾರಿಂದಲೂ ಏನನ್ನೂ ಅಪೇಕ್ಷಿಸಬೇಡಿ.**
- **ಮಾತನಾಡುವುದಕ್ಕಿಂತ ಮಾಡಿ ತೋರಿಸುವುದೇ ಲೇಸು.**
- **ಪ್ರಯತ್ನ ನಮ್ಮದು, ಫಲ ದೇವರದು.**
- **ಹಣ-ಸಮಯ-ಶಕ್ತಿ, ಈ ಮೂರನ್ನೂ ವ್ಯರ್ಥ ಮಾಡಬೇಡಿ**
- **ಅನ್ಯಾಯ- ಅಹಂಕಾರ- ದ್ರೋಹ ಈ ಮೂರನ್ನೂ ದ್ವೇಷಿಸಿರಿ.**
- **ಆಳಾಗಬಲ್ಲವನು-ಅರಸಾಗಬಲ್ಲ.**

# 2023-2024 ನೇ ಸಾಲಿನ ಯುವ ರೆಡ್‌ಕ್ರಾಸ್ ಘಟಕದ ವರದಿ

ಭಾರತೀಯ ಯುವ ರೆಡ್ ಕ್ರಾಸ್ ಸಂಸ್ಥೆಯು ಅಂತರರಾಷ್ಟ್ರೀಯ ಮಾನವೀಯ ಸೇವಾ ಸಂಸ್ಥೆಯಾಗಿದ್ದು, 1828 ರ ಮೇ 8 ರಂದು ಸ್ವಿಡ್ಜರ್ಲೆಂಡಿನ ಜಿನೀವಾದಲ್ಲಿ ಜನಿಸಿದ ಜೀನ್ ಹೆನ್ರಿ ಡ್ಯೂನಾಂಟ್ ರವರು ಈ ಸಂಸ್ಥೆಯ ಜನಕರಾಗಿರುತ್ತಾರೆ. 1859 ರಲ್ಲಿ ಇಟಲಿ, ಫ್ರಾನ್ಸ್ ಹಾಗೂ ಆಸ್ಟ್ರಿಯ ನಡುವೆ ನಡೆದ ಯುದ್ಧದಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡಲು 1863 ರಲ್ಲಿ ರೆಡ್‌ಕ್ರಾಸ್ ಸಂಸ್ಥೆ ಉಗಮವಾಯಿತು. ಇವರ ಜನ್ಮದಿನವನ್ನೇ ವಿಶ್ವ ರೆಡ್ ಕ್ರಾಸ್ ದಿನವನ್ನಾಗಿ ಆಚರಿಸಲಾಗುತ್ತಿದೆ. ಯುದ್ಧದ ಸಮಯದಲ್ಲಿ ಗಾಯಗೊಂಡ ಜನರ ಸಂಕಟವನ್ನು ನಿವಾರಿಸಲು ಹುಟ್ಟಿಕೊಂಡ ಈ ಸಂಸ್ಥೆಯು ಕಾಲಕ್ರಮೇಣ ಪ್ರಕೃತಿ ವಿಕೋಪ ಮತ್ತು ಶಾಂತಿಯ ಸಮಯದಲ್ಲಿ ಸಂಕಷ್ಟಗಳನ್ನು ನಿಯಂತ್ರಿಸುವ ತನ್ನ ವ್ಯಾಪ್ತಿಯನ್ನು ವಿಸ್ತೃತಗೊಳಿಸಿತು.

ಗಾಯಾಳು ಸೈನಿಕರ ಸಹಕಾರ ಸಂಸ್ಥೆಯಾಗಿ ಉಗಮಗೊಂಡ ಈ ಸಂಸ್ಥೆಯು ನಂತರ ರೆಡ್ ಕ್ರಾಸ್ ಸಂಸ್ಥೆಯಾಗಿ ರೂಪುಗೊಂಡು 1880ರಲ್ಲಿ ಅಂತರರಾಷ್ಟ್ರೀಯ ರೆಡ್ ಕ್ರಾಸ್ (Indian Red Cross Society) ಎಂದಾಯಿತು. ಸ್ವಿಸ್‌ನ ಜಿನೀವಾದಲ್ಲಿ ಇದರ ಕೇಂದ್ರ ಕಛೇರಿಯಿದ್ದು ಸರ್ಕಾರೇತರ, ರಾಜಕೀಯ, ಧಾರ್ಮಿಕೇತರ, ಖಾಸಗಿ ಧರ್ಮಾರ್ಥ ಸಂಸ್ಥೆಯಾಗಿದ್ದು ಮಾನವೀಯ ಸೇವಾ ಸಂಘಟನೆಯಾಗಿದೆ. ಅಂತೆಯೇ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಯುದ್ಧ ಸಮಯದಲ್ಲಿ ಗಾಯಗೊಂಡ ಸೈನಿಕರಿಗೆ, ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಪರಿಹಾರ ಕಾರ್ಯ ಹಾಗೂ ಶುಶ್ರೂಷೆ ಮಾಡುವ ಮಾನವೀಯ ಉದ್ದೇಶವನ್ನಿಟ್ಟುಕೊಂಡು ನಮ್ಮ ದೇಶದಲ್ಲಿ 1920ರಲ್ಲಿ ಸ್ಥಾಪನೆಯಾಯಿತು. ಅಂದಿನಿಂದಲೇ ಕರ್ನಾಟಕದಲ್ಲೂ ಅಸ್ತಿತ್ವಕ್ಕೆ ಬಂದಿದ್ದು ಗೌರವಾನ್ವಿತ ರಾಷ್ಟ್ರಪತಿಯವರು ಕೇಂದ್ರ ಸಂಸ್ಥೆಯ ಅಧ್ಯಕ್ಷರಾಗಿದ್ದು, ಕರ್ನಾಟಕ ಶಾಖೆಗೆ ಘನತೆವೆತ್ತ ರಾಜ್ಯಪಾಲರು ಅಧ್ಯಕ್ಷರಾಗಿದ್ದು, ಕಾಲೇಜಿನ ಘಟಕಕ್ಕೆ ಪ್ರಾಂಶುಪಾಲರು ಅಧ್ಯಕ್ಷರಾಗಿರುತ್ತಾರೆ. 1901ರಲ್ಲಿ ಹೆನ್ರಿ ಡ್ಯೂನಾಟ್ ಧ್ಯೆಯೋದ್ದೇಶಗಳ ಸಾಧನೆಗಾಗಿ ವಿಶ್ವದ ಅತ್ಯುನ್ನತ ಗೌರವವಾದ ನೊಬೆಲ್ ಶಾಂತಿ ಪುರಸ್ಕಾರವನ್ನು ಪ್ರಥಮವಾಗಿ ನೀಡಲಾಗಿದೆ.

**ಈ ಸಂಸ್ಥೆಯು ಕೆಳಗಿನ ಧ್ಯೇಯೋದ್ದೇಶಗಳನ್ನಿಟ್ಟುಕೊಂಡಿದೆ :**

1. ಭೂಕಂಪ, ಪ್ರವಾಹ, ಅಗ್ನಿ ದುರಂತ ಅಪಘಾತಗಳು ಸಂಭವಿಸಿದಾಗ ಪರಿಹಾರ ಕಾರ್ಯ ಮತ್ತು ಶುಶ್ರೂಷೆ ಮಾಡಿ ಔಷಧಿ ಹಾಗೂ ಅಗತ್ಯ ಸಾಮಗ್ರಿಗಳನ್ನು ನೀಡುವುದು.
2. ಆರೋಗ್ಯದ ಬಗ್ಗೆ ಅರಿವು ಮತ್ತು ಶಿಕ್ಷಣ ನೀಡುವುದು.
3. ಹಿಂದುಳಿದ ಹಾಗೂ ಬಡಕುಟುಂಬದ ಅಂಗವಿಕಲರಿಗೆ ತ್ರಿಚಕ್ರ ವಾಹನ, ಗಾಲಿ ಕುರ್ಚಿ, ಶ್ರವಣ ಸಾಧನ, ಬೆತ್ತದ ಸಾಧನ ಒದಗಿಸುವುದು.

4. ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆ ನೀಡುವುದು.
5. ರಕ್ತ ನಿಧಿಗಳನ್ನು ಸ್ಥಾಪಿಸಿ ಬಡ ಹಾಗೂ ಅಗತ್ಯವಿರುವ ರೋಗಿಗಳಿಗೆ ಉಚಿತವಾಗಿ ನೀಡುವುದು.
6. ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವುದು.
7. ಮಾದಕ ವಸ್ತುಗಳ ತಡೆ ಮತ್ತು ಸಾಕ್ಷರತೆಯ ಅರಿವು ಮೂಡಿಸುವುದು.
8. ಪಲ್ಸ್ ಪೋಲಿಯೋ ಹಾಗೂ ಆರೋಗ್ಯ ತಪಾಸಣೆಯಲ್ಲಿ ಪಾಲ್ಗೊಳ್ಳುವುದು.
9. ಗರ್ಭಿಣಿ ಸ್ತ್ರೀಯರ ಆರೋಗ್ಯ ಹಾಗೂ ಸುರಕ್ಷತಾ ಹೆರಿಗೆ ಮತ್ತು ಹೆಚ್.ಐ.ವಿ. ಏಡ್ಸ್ ರೋಗದಿಂದ ಜಾಗರೂಕರಾಗಿರಲು ತಿಳುವಳಿಕೆ ನೀಡುವುದು.
10. ಹೆಣ್ಣು ಶಿಶು ದಿನಾಚರಣೆ, ಮಕ್ಕಳ ದಿನಾಚರಣೆ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಗಳನ್ನು ಆಚರಿಸುವುದು.

ಈ ರೀತಿಯಾದ ಮಾನವೀಯ ಸೇವಾ ಗುಣಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಸುವ ಉದ್ದೇಶದಿಂದ ಸರ್ಕಾರಿ ಆದೇಶದಂತೆ ನಮ್ಮ ಕಾಲೇಜಿನಲ್ಲಿ ದಿನಾಂಕ 31–1–2013 ರಂದು ಯುವ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಲಾಗಿದೆ.

**2023–2024ನೇ ಸಾಲಿನಲ್ಲಿ ನಡೆಸಲಾದ ಕಾರ್ಯಕ್ರಮಗಳು:**

ದಿನಾಂಕ 07–11–2023ರಂದು ಯುವ ರೆಡ್‌ಕ್ರಾಸ್ ಘಟಕ ಹಾಗೂ ಮನೋವಿಜ್ಞಾನ ವಿಭಾಗದ ಸಹಯೋಗದಲ್ಲಿ ಆಯೋಜಿತವಾದ ಸೈಕೋ ಡ್ರಾಮ ಕಾರ್ಯಕ್ರಮದಲ್ಲಿ ನಟಿಯಾದ ಮೇದಿನಿ ಕೆಳಮನಿ ಅವರು ಅನೇಕ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿದರು .

ದಿನಾಂಕ 27–12–2023ರಂದು ಯುವ ರೆಡ್‌ಕ್ರಾಸ್ ಘಟಕದ ವತಿಯಿಂದ ತಿಪಟೂರು ರೋಟರಿ ಕ್ಲಬ್ ಮತ್ತು ಶಿವಮೊಗ್ಗದ ಮಿಡ್ ಟೌನ್ ರೋಟರಿ ಫೌಂಡೇಶ್‌ನ್‌ನ ರಕ್ತನಿಧಿ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಉಚಿತ ವೈದ್ಯಕೀಯ ತಪಾಸಣೆ ಮತ್ತು ರಕ್ತದಾನ ಶಿಬಿರದಲ್ಲಿ ನಮ್ಮ ಕಾಲೇಜಿನ ಅಧ್ಯಾಪಕರು ಮತ್ತು ವಿಧ್ಯಾರ್ಥಿಗಳ 65 ಯೂನಿಟ್ ರಕ್ತದಾನ ಮಾಡಿರುತ್ತಾರೆ.

ಈ ಎಲ್ಲಾ ಕಾರ್ಯಕ್ರಮಗಳನ್ನು ನಡೆಸಲು ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು .

**– ರೇಣುಕಾ ಡಿ.**

ನೋಡಲ್ ಅಧಿಕಾರಿಗಳು

# 2023-2024 ನೇ ಸಾಲಿನಲ್ಲಿ ಎನ್.ಸಿ.ಸಿ ವಾರ್ಷಿಕ ವರದಿ

NATIONAL CADET CORPS ಭಾರತದಲ್ಲಿ ಸೇನೆಯ ನಂತರ ಬಹು ಮುಖ್ಯವಾದ ಎರಡನೇ ಅತಿ ದೊಡ್ಡ ಯುವ ಸಂಘಟನೆಯಾಗಿದೆ. ಇದನ್ನು ದೇಶದ ಎರಡನೇ ಯುವ ಸೇನೆಯೆಂದೇ ಕರೆಯಲಾಗುತ್ತದೆ .
ಯುವ ಶಕ್ತಿಗೆ ಶಿಸ್ತು, ಸೇವಾ ಮನೋಭಾವ, ದೇಶ ಪ್ರೇಮಗಳೊಂದಿಗೆ ಕಠಿಣ ಸೇವಾ ತರಬೇತಿ ನೀಡಿ ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ನೀಡುವಲ್ಲಿ 4/4 Company ಹಿಂದಿನಿಂದಲೂ ಮುಂಚೂಣಿಯಲ್ಲಿದ್ದು, ಈ ವರ್ಷವೂ ಕೂಡ ಉತ್ತಮ ತರಬೇತಿ ಪಡೆದ ಕೆಡೆಟ್‌ಗಳು ಪರಿಶ್ರಮದಿಂದ ರಾಜ್ಯ ಮತ್ತು ರಾಷ್ಟ್ರಮಟ್ಟದ ಶಿಬಿರಗಳಲ್ಲಿ ಭಾಗವಹಿಸಿ ವಿಶೇಷ ಸಾಧನೆಗಳ ಮೂಲಕ ಕಲ್ಪತರು ವಿದ್ಯಾ ಸಂಸ್ಥೆ ಹಾಗೂ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

ಬೆಂಗಳೂರಿನ A group 4 Karanataka Battalion ಅಡಿಯಲ್ಲಿ 4/4 company ಯಾಗಿ ನಮ್ಮ ಕಲ್ಪತರು NCC ಘಟಕವು 1964ರಲ್ಲಿ ಪ್ರಥಮ ಬಾರಿಗೆ ಪ್ರಾರಂಭಗೊಂಡು 6 ದಶಕಗಳಿಂದ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿಕೊಂಡು ಬಂದಿದೆ.

2023-2024ನೇ ಸಾಲಿನಲ್ಲಿ 33 ಪುರುಷರು, 23 ಮಹಿಳೆಯರು, ಒಟ್ಟು 56 ಕೆಡೆಟ್‌ಗಳು ಹಾಗೂ 4/4 company commander ಆಗಿ ದೈಹಿಕ ಶಿಕ್ಷಣ ನಿರ್ದೇಶಕರಾದ ಅರ್ಜುನ್‌ರವರು ಕಾರ್ಯ ನಿರ್ವಹಿಸಿದ್ದರು.

ದಿನಾಂಕ 06 ಜುಲೈ 2023 16 ಜುಲೈ 2023ರವರೆಗೆ Parchute regiment training centre (PRTC) Banglore ನಲ್ಲಿ ನಡೆದ Army attachment campನಲ್ಲಿ ತಮ್ಮ ಕಾಲೇಜಿನ ಕೆಡೆಟ್ ಆದ Ebenezer Pal D, CSM ರವರು ಭಾಗವಹಿಸಿದ್ದರು. ದಿನಾಂಕ 9 ಆಗಸ್ಟ್ ರಿಂದ 20 ಆಗಸ್ಟ್‌ವರೆಗೆ Pioneer corps training centre, Banglore ನಲ್ಲಿ ನಡೆದ ARMY attachment campನಲ್ಲಿ Dhanush kumar VR, CDT ಅವರು ಭಾಗವಹಿಸಿ ತರಬೇತಿ ಪಡೆದಿದ್ದಾರೆ .

ದಿನಾಂಕ 22 ಜೂನ್ 2023 ರಂದು ತುಮಕೂರಿನಲ್ಲಿ ನಡೆದ ಅಂತರಾಷ್ಟ್ರೀಯ ಯೋಗದಿನದಂದು ನಮ್ಮ ಕಾಲೇಜಿನ 10 ಪುರುಷ ಮತ್ತು 7 ಮಹಿಳಾ ಕೆಡೆಟ್‌ಗಳು ಭಾಗವಹಿಸಿದ್ದರು.

ದಿನಾಂಕ 02 ಜುಲೈ 2023ರಿಂದ 11ಜುಲೈ 2023ರವರೆಗೆ Siddaganga Institute of Technology ತುಮಕೂರು ಇಲ್ಲಿ ನಡೆದ combined annual training camp ನಲ್ಲಿ ನಮ್ಮ ಕಾಲೇಜಿನ 9 ಪುರುಷ ಮತ್ತು 7 ಮಹಿಳಾ ಕೆಡೆಟ್‌ಗಳು ಭಾಗವಹಿಸಿ ತರಬೇತಿಯನ್ನು ಪಡೆದಿರುತ್ತಾರೆ.

ದಿನಾಂಕ 15 ಆಗಸ್ಟ್ 2023 ರಂದು ತಿಪಟೂರಿನ ಕಲ್ಪತರು ಕ್ರೀಡಾಂಗಣದಲ್ಲಿ ನಡೆದ ಸ್ವಾತಂತ್ರ ದಿನಾಚರಣೆಯಲ್ಲಿ ನಮ್ಮ ಕೆಡೆಟ್‌ಗಳು ಉತ್ತಮ ರೀತಿಯಲ್ಲಿ ಪಥ ಸಂಚಲನೆಯನ್ನು ಮಾಡಿ ದೇಶ ಪ್ರೇಮವನ್ನು ಮೆರೆದಿದ್ದಾರೆ.

ಈ ವರ್ಷದಲ್ಲಿ ನಡೆದ ಎಲ್ಲಾ ಸಾಧನೆ ಮತ್ತು ಚಟುವಟಿಕೆಗಳು ಸುವ್ಯವಸ್ಥಿತವಾಗಿ ನಡೆಯುವಲ್ಲಿ ಕಲ್ಪತರು ವಿದ್ಯಾಸಂಸ್ಥೆಯ ಎಲ್ಲ ಪದಾಧಿಕಾರಿಗಳಿಗೂ, ಮೂರೂ ಕಾಲೇಜಿನ ಪ್ರಾಂಶುಪಾಲರಿಗೆ, ಸೇವಾ ಅಧಿಕಾರಿಗಳಿಗೆ, ನಮ್ಮ ವಂದನೆಗಳು.

# Scouts and Guides

**Activities of Scouts and guides for the year 2023-24.**

1. District level summer camp was held in our college on 26.5.23
2. Dr. Vijaya Kumari and Prof. Manjunath Swamy of our college participated in one day workshop held in Bangalore on 4.10.23
3. 12 students of our college participated as volunteers in service camp of Hassanambha festival held in Hassan for 4 days that is from 11.11.23 to 15.11.23
4. On the occasion of Ganapathi Visarjan four students served as volunteers in kalpothsava program held on 9.12.24.
5. 4 Rangers and 4 Rovers participated in National integration carnival camp held in Belgavi from 21.12.23 to 25.12.23
6. The District level Nipun examination camp was organized from 30.12.23 to 31.12.23. by our college. 172 students participated from various colleges of Tumkur University. 21 Rangers and 3 Rovers from our college participated.
7. One day Trip was arranged for rangers and Rovers to Dubhare, Talakaveri, Bailukuppe on 5.1.24

We sincerely thank the Principal and the management for their support in carrying out the activities.

**ನುಡಿಮುತ್ತುಗಳು**

► ಏಳು, ಎದ್ದೇಳು ನಿನ್ನ ಭವಿಷ್ಯವನ್ನು ರೂಪಿಸುವ ಸಂಪೂರ್ಣ ಜವಾಬ್ದಾರಿಯನ್ನು ಹೊರು. ನಿನ್ನ ಉತ್ತರೋತ್ತರ ಶ್ರೇಯಸ್ಸಿಗೆ ಬೇಕಾದ ಎಲ್ಲ ಶಕ್ತಿ ಸಾಮರ್ಥ್ಯಗಳೂ ನಿನ್ನೊಳಗೇ ಇವೆ. ನೋಡು, ಮನ ಮಾಡು, ಏಳು, ಎದ್ದೇಳು, ಭವ್ಯ ಭವಿಷ್ಯತ್ತಿನ ನಿರ್ಮಾಣಕ್ಕೆ ಇಂದೇ ಅಡಿ ಇಡು.

**– ಸ್ವಾಮಿ ವಿವೇಕಾನಂದ.**

# ಕ್ರೀಡಾ ವರದಿ 2023-2024

ದಿನಾಂಕ 17-10-2023ರಂದು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಯಿತು. ಪ್ರಾಂಶುಪಾಲರಾದ ಡಾ.ವಿ.ಮಾಲತಿರವರ ಸೂಚನೆಯಂತೆ ಈ ಕೆಳಕಂಡ ಕ್ರೀಡಾ ಸಮಿತಿಯನ್ನು ರಚಿಸಲಾಯಿತು.

ಈ ವರ್ಷ ವಿವಿಧ ಕ್ರೀಡೆಗಳಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯ, ಅಂತರ ವಿಶ್ವವಿದ್ಯಾನಿಲಯ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿ ಬಹುಮಾನ ಮತ್ತು ಪ್ರಶಸ್ತಿಗಳನ್ನು ಗಳಿಸಿರುತ್ತಾರೆ.

**ಅಂತರಕಾಲೇಜು ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಸಾಧನೆ:**

- ದಿನಾಂಕ 13-12-2023 ರಂದು ತುಮಕೂರಿನ ಮಹಾತ್ಮಾಗಾಂಧಿ ಕ್ರೀಡಾಂಗಣದಲ್ಲಿ ನಡೆದ ತುಮಕೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ನಮ್ಮ ಕಾಲೇಜಿನ ಶಶಾಂಕ್‌ವರ್ಮ ಎಸ್., ಪ್ರಥಮ ಬಿ.ಎ. ಇವರು 200 ಮೀಟರ್ ಓಟದಲ್ಲಿ ಪ್ರಥಮಸ್ಥಾನ, 400 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ, 4*100 ಮೀಟರ್ ರಿಲೇ ಓಟದಲ್ಲಿ ಪ್ರಥಮ ಸ್ಥಾನ, ಹಾಗೂ 4*400 ಮೀಟರ್ ರಿಲೇ ಓಟದಲ್ಲಿ ಪ್ರಥಮಸ್ಥಾನ ಪಡೆದರು ಹಾಗೂ ಪುರುಷರ ವಿಭಾಗದಲ್ಲಿ ಅಂತರ ಕಾಲೇಜು ಅಥ್ಲೆಟಿಕ್ಸ್ ಚಾಂಪಿಯನ್ ಪ್ರಶಸ್ತಿಯನ್ನೂ ತನ್ನದಾಗಿಸಿಕೊಂಡರು.
- ಮೊಹಮದ್ ಸೂಹೇಲ್ ಪ್ರಥಮ ಬಿ.ಎ. ಇವರು 100 ಮೀಟರ್ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ, 4*100 ಮೀ ರಿಲೇ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.
- ದೀಪಕ್ ಬಿ.ವೈ. ಪ್ರಥಮ ಬಿ.ಎ. ಇವರು 100ಮೀ ಓಟದ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಹಾಗೂ 4*100 ಮೀ ರಿಲೇ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.
- ಮೌಲ್ಯ, ಪ್ರಥಮ ಬಿ.ಕಾಂ. ಇವರು 110ಮೀ ಹರ್ಡಲ್ಸ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ 4*400 ಮೀ. ರಿಲೇ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.
- ಅಶೋಕ ಟಿ.ಜಿ. ಪ್ರಥಮ ಬಿ.ಎ. ಇವರು 4*400 ಮೀಟರ್ ರಿಲೇ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ 4*100 ಮೀಟರ್ ರಿಲೇ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.
- ಸುಶಾಂತ್ ಸಿ.ಎಲ್. ತೃತೀಯ ಬಿ.ಕಾಂ. ಇವರು 4*400 ಮೀ.ರಿಲೇ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿರುತ್ತಾರೆ.
- ಶ್ರೇಯ.ಎಂ. ತೃತೀಯ ಬಿ.ಕಾಂ. ಇವರು ತ್ರಿವಿಧ ಜಿಗಿತದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಉದ್ದ ಜಿಗಿತದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ 4*100 ಮೀ. ರಿಲೇ ಆಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.
- ಮಮತ ಎನ್.ಡಿ., ದ್ವಿತೀಯ ಬಿ.ಎ. ಇವರು ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಹಾಗೂ 4*100 ಮೀ. ರಿಲೇ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.
- ಯಶಸ್ವಿನಿ ಪ್ರಥಮ ಬಿ.ಕಾಂ. ಇವರು ಚಕ್ರ ಎಸೆತ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ.
- ಜಾಹ್ನವಿ ಎಲ್.ಎಸ್. ತೃತೀಯ ಬಿ.ಕಾಂ. ಇವರು 4*100 ಮೀ.ರಿಲೇ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.
- ನವ್ಯ ತೃತೀಯ ಬಿ.ಎ. ಇವರು 4*100 ಮೀಟರ್ ರಿಲೇ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

ಒಟ್ಟಾರೆಯಾಗಿ ಈ ಅಥ್ಲೆಟಿಕ್ಸ್ ಕ್ರೀಡಾಕೂಟದ ಪುರುಷರ ವಿಭಾಗದಲ್ಲಿ ಸಮಗ್ರ ಚಾಂಪಿಯಷಿಪ್ ಪ್ರಶಸ್ತಿಯನ್ನು ಹಾಗೂ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿ ಎರಡನ್ನೂ ನಮ್ಮ ಕಾಲೇಜಿನ ಪುರುಷರ ಅಥ್ಲೆಟಿಕ್ಸ್ ತಂಡ ಪಡೆದರೆ, ಮಹಿಳೆಯರ ವಿಭಾಗದಲ್ಲಿ ನಮ್ಮ ಕಾಲೇಜಿನ ಶ್ರೇಯ ಎಂ. ತೃತೀಯ ಬಿ.ಕಾಂ. ಇವರು ವೈಯಕ್ತಿಕ ಚಾಂಪಿಯನ್‌ಷಿಪ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

## ರಾಷ್ಟ್ರಮಟ್ಟದ ಆಟಗಾರರು :

ದಿನಾಂಕ 09–11–2023 ರಿಂದ 12–11–2023 ರ ವರೆಗೂ ಆಂದ್ರ ಪ್ರದೇಶದ ಜವಹರಲಾಲ್ ನೆಹರೂ ತಾಂತ್ರಿಕ ವಿಶ್ವ ವಿದ್ಯಾಲಯ, ಕಾಕಿನಾಡ ಇಲ್ಲಿ ನಡೆದ ರಾಷ್ಟ್ರಮಟ್ಟದ ಪುರುಷರ ಕಬಡ್ಡಿ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ಪ್ರಥಮ ಬಿ.ಎ. ವಿದ್ಯಾರ್ಥಿ ಸುದೀಪ್‌ರವರು ತುಮಕೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿರುತ್ತಾರೆ.

ದಿನಾಂಕ : 19–12–2023 ರಿಂದ 24–12–2023 ರವರೆಗೂ ತಮಿಳುನಾಡು ರಾಜ್ಯದ ವೆಲ್ಲೂರಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದಲ್ಲಿ ನಡೆದ ಪುರುಷರ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಅಂತಿಮ ಬಿ.ಎ. ವಿದ್ಯಾರ್ಥಿ ವಜ್ರೇಶ್ ಎನ್.ಆರ್. ರವರು ತುಮಕೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿರುತ್ತಾರೆ.

ದಿನಾಂಕ : 22–12–2023 ರಿಂದ 25–12–2023 ರವರೆಗೂ ಕರ್ನಾಟಕದ ಮಂಡ್ಯ ಜಿಲ್ಲೆಯ ಪಿ.ಇ.ಎಸ್. ತಾಂತ್ರಿಕ ಕಾಲೇಜಿನಲ್ಲಿ ನಡೆದ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಪುರುಷರ ವಾಲಿಬಾಲ್ ಪಂದ್ಯಾವಳಿಯಲ್ಲಿ ದ್ವಿತೀಯ ಬಿ.ಎ. ವಿದ್ಯಾರ್ಥಿ ಶ್ರೀವತ್ಸರವರು ತುಮಕೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿರುತ್ತಾರೆ.

ದಿನಾಂಕ : 29–12–2023 ರಿಂದ 01–01–2024 ರವರೆಗೂ ತಮಿಳುನಾಡು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಶ್ವವಿದ್ಯಾನಿಲಯದಲ್ಲಿ ನಡೆದ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯಗಳ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿದ ನಮ್ಮ ಕಾಲೇಜಿನ ಕ್ರೀಡಾಪಟುಗಳಾದ ಶಶಾಂಕ್ ವರ್ಮ ಎಸ್., ಪ್ರಥಮ ಬಿ.ಎ., ಮೊಹಮ್ಮದ್ ಸುಹೇಲ್, ಪ್ರಥಮ ಬಿ.ಎ. ಹಾಗೂ ದೀಪಕ್ ಬಿ.ವೈ., ಪ್ರಥಮ ಬಿ.ಎ. ಇವರು ತುಮಕೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ ಇದೇ ಮೊದಲ ಬಾರಿಗೆ ಅಥ್ಲೆಟಿಕ್ಸ್ ವಿಭಾಗದಲ್ಲಿ ತುಮಕೂರು ವಿ.ವಿ. 4*100 ಮೀ.ರಿಲೇ ತಂಡ ಉಪಾಂತ್ಯವನ್ನು ತಲುಪಿರುವ ಸಾಧನೆ ಮಾಡಿರುತ್ತಾರೆ.

.ದಿನಾಂಕ 22–12–2023 ರಿಂದ 23–12–2023ರ ವರೆಗೂ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಪುರುಷರ ಕ್ರಿಕೆಟ್ ತಂಡದ ಆಯ್ಕೆಯಲ್ಲಿ ಭಾಗವಹಿಸಿದ ದೀಪಕ್ ಬಿ.ವೈ., ಪ್ರಥಮ ಬಿ.ಎ. ಇವರು ತುಮಕೂರು ವಿ.ವಿ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿರುತ್ತಾರೆ .

ದಿನಾಂಕ : 12–03–2024 ರಿಂದ 15–03–24 ರ ವರೆಗೂ ಕರ್ನಾಟಕದ ತುಮಕೂರಿನ ಶ್ರೀ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಶನ್, ತುಮಕೂರು ಇಲ್ಲಿ ನಡೆದ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಪುರುಷರ ನೆಟ್ ಬಾಲ್ ಪಂದ್ಯಾವಳಿಯಲ್ಲಿ ಎಬಿನೈಸರ್ ಪಾಲ್ ಡಿ., ತೃತೀಯ ಬಿ.ಎ., ಇವರು ತುಮಕೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿರುತ್ತಾರೆ .

ದಿನಾಂಕ 11–06–2024 ರಂದು ತುಮಕೂರಿನ ಶ್ರೀ ಸಿದ್ಧಗಂಗಾ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ತುಮಕೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರ ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ತಂಡ ದ್ವಿತೀಯ ಸ್ಥಾನ ಪಡೆದಿರುತ್ತದೆ.

ದಿನಾಂಕ : 22–06–2024 ರಂದು ತಿಪಟೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ತುಮಕೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರ ಥ್ರೋಬಾಲ್ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ತಂಡ ದ್ವಿತೀಯ ಸ್ಥಾನ ಪಡೆದಿರುತ್ತದೆ. ಚರಿತ್‌ಗೌಡ ಹೆಚ್.ಎಸ್., ತೃತೀಯ ಬಿ.ಕಾಂ., ಇವರು ಪಂದ್ಯಾವಳಿಯಲ್ಲಿ ಉತ್ತಮ ಆಟಗಾರ ಪ್ರಶಸ್ತಿಯನ್ನು ಪಡೆದಿರುತ್ತಾರೆ.



ಉದ್ಯೋಗ ಮತ್ತು ಮಾಹಿತಿ ಸಮಿತಿ



ಯುವ ರೆಡ್‌ಕ್ರಾಸ್ ಸಮಿತಿ



**IQAC** ಸಮಿತಿ



**Anti-Ragging & Anti-Sexual Harassment Committee**



**ರೆಡ್ ರಿಬ್ಬನ್ ಸಮಿತಿ**



**ಕ್ರೀಡಾ ಸಮಿತಿ**



ಪ್ರವೇಶ ಸಮಿತಿ



ಗ್ರಂಥಾಲಯ ಸಮಿತಿ



ಯುವ ರೆಡ್ ಕ್ರಾಸ್ ಸಮಿತಿ



ಪ್ರಾಂಶುಪಾಲರೊಂದಿಗೆ ಗ್ರಂಥಾಲಯ ಸಿಬ್ಬಂದಿ



ಪ್ರಾಂಶುಪಾಲರೊಂದಿಗೆ ಕಛೇರಿ ಸಿಬ್ಬಂದಿ



ಅಂತಿಮ ವರ್ಷದ ಭೂಗೋಳಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು




**ಅರ್ಥಶಾಸ್ತ್ರ ವಿಭಾಗದವರು ಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಲೋಕೇಶ್‌ರವರು ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಸಿದ್ಧತೆಯ ಬಗ್ಗೆ ಉಪನ್ಯಾಸ ನೀಡಿದರು.**



**ಅಂತಿಮ ವರ್ಷದ ಐಚ್ಛಿಕ ಇಂಗ್ಲಿಷ್ ವಿಭಾಗದ ವಿದ್ಯಾರ್ಥಿಗಳು**




ವಿಶ್ವ ಪರಿಸರ ದಿನವನ್ನು ಉದ್ಘಾಟಿಸುತ್ತಿರುವ ಪ್ರಾಂಶುಪಾಲರೊಂದಿಗೆ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕ ವೃಂದ




ತುಮಕೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ವಿಭಾಗದ ಅಧ್ಯಾಪಕರಾದ
ಡಾ. ದೇವರಾಜಪ್ಪರವರು ಬಿ.ಕಾಂ ವಿದ್ಯಾರ್ಥಿಗಳಿಗೆ ಕಂಪನಿ ವರದಿ ಬಗ್ಗೆ ಉಪನ್ಯಾಸ ನೀಡಿದರು.




ಬೆಂಗಳೂರಿನ ಕಂಪನಿ ಹೂಡಿಕೆದಾರರಾದ ಶ್ರೀಯುತ ಶ್ರೀನಿವಾಸಮೂರ್ತಿ ಮತ್ತು ಶ್ರೀಯುತ ಬಾಲಾಜಿರವರು
ಅಂತಿಮ ಬಿ.ಕಾಂ. ವಿದ್ಯಾರ್ಥಿಗಳಿಗೆ ವಾಣಿಜ್ಯ ಕ್ಷೇತ್ರದಲ್ಲಿ ಪ್ರಾಯೋಗಿಕ ಶಿಕ್ಷಣದ ಬಗ್ಗೆ ಉಪನ್ಯಾಸ ನೀಡಿದರು.



ಅಂತಿಮ ಬಿ.ಕಾಂ. 'ಎ' ವಿಭಾಗ




ಅಂತಿಮ ಬಿ.ಕಾಂ. ವಿದ್ಯಾರ್ಥಿಗಳು ('ಬಿ' ವಿಭಾಗ)




ಅಂತಿಮ ಬಿ.ಎ. ವಿದ್ಯಾರ್ಥಿಗಳು



ಅಂತಿಮ ಎಂ.ಕಾಂ. ವಿದ್ಯಾರ್ಥಿಗಳು



ಎನ್.ಎಸ್.ಎಸ್. ಸಮಿತಿ




ನ್ಯಾಕ್ ಕಮಿಟಿ ಬಂದಾಗ ಅಂತಿಮ ಬಿ.ಕಾಂ. ವಿದ್ಯಾರ್ಥಿಗಳಿಂದ ನೃತ್ಯ (ಸಾಂಸ್ಕೃತಿಕ ಸಂಜೆ)




ನ್ಯಾಕ್ ಕಮಿಟಿ ಬಂದಾಗ ದ್ವಿತೀಯ ಬಿ.ಕಾಂ. ವಿದ್ಯಾರ್ಥಿಗಳಿಂದ ಗುಜರಾತಿ ಜನಪದ ನೃತ್ಯ (ಸಾಂಸ್ಕೃತಿಕ ಸಂಜೆ)



ನ್ಯಾಕ್ ಪೀರ್ ಕಮಿಟಿಯೊಂದಿಗೆ ಕಲ್ಪತರು ವಿದ್ಯಾ ಸಂಸ್ಥೆಯ ಪದಾಧಿಕಾರಿಗಳು



ನ್ಯಾಕ್ ಪೀರ್ ಕಮಿಟಿಯೊಂದಿಗೆ ಅಧ್ಯಾಪಕ ವೃಂದ



ನ್ಯಾಕ್ ಪೀರ್ ತಂಡ ಕಾಲೇಜಿಗೆ ಬಂದಾಗ ತೆಂಗಿನ ಸಸಿಯನ್ನು ನೆಡುತ್ತಿರುವುದು



ಜಕ್ಕನಹಳ್ಳಿಯಲ್ಲಿ ಎನ್‌ಎಸ್‌ಎಸ್ ವಿಶೇಷ ಶಿಬಿರದ ಉದ್ಘಾಟನೆ ಕಾರ್ಯಕ್ರಮ



ಎನ್‌ಎಸ್‌ಎಸ್ ವಿಶೇಷ ಶಿಬಿರದಲ್ಲಿ ಉಚಿತ ನೇತ್ರ ತಪಾಸಣೆ ನಡೆಸಲಾಯಿತು



ಎನ್‌ಎಸ್‌ಎಸ್ ವಿಶೇಷ ಶಿಬಿರದಲ್ಲಿ ಗಿಡಗಳನ್ನು ನೆಡಲಾಯಿತು.




ಅಂತರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ಪ್ರದರ್ಶನ (ದಿನಾಂಕ 21-06-2024)




ನ್ಯಾಕ್ ಸಮಿತಿಯೊಂದಿಗೆ ಕಾಲೇಜಿನ ಬೋಧಕೇತರ ಸಿಬ್ಬಂದಿ




A special talk on Elizabethan Drama by Dr subramanya sharma Of University college Tumkur




**ತುಮಕೂರು ವಿಶ್ವವಿದ್ಯಾಲಯದ ತಿಪಟೂರು ಪಿಜಿ ಸೆಂಟರ್‌ನಲ್ಲಿ ನಡೆದ ಕಲ್ಪಸಿರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ನಮ್ಮ ಕಾಲೇಜಿನ ವಿದ್ಯಾರ್ಥಿಗಳು**




**ತುಮಕೂರು ವಿಶ್ವವಿದ್ಯಾಲಯದ ತಿಪಟೂರು ಪಿಜಿ ಸೆಂಟರ್‌ನಲ್ಲಿ ನಡೆದ ಕಲ್ಪಸಿರಿ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಪಡೆದ ನಮ್ಮ ಕಾಲೇಜಿನ ಎಂ.ಕಾಂ. ವಿದ್ಯಾರ್ಥಿಗಳು**

# ಕಾವ್ಯ ಕಲ್ಪನೆಗೂ ಮೀರಿದ ಕಾಲೇಜು



**–ಚರಣ್‌ರಾಜ್ ಆರ್.**
ದ್ವಿತೀಯ ಬಿ.ಎ.

ತಿಪಟೂರಿನ ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಇಂದಿಗೆ ಕೇವಲ ಕಾಲೇಜ್ ಆಗಿ ಉಳಿಯದೆ ನಮ್ಮ ಕಾಲೇಜು ಎಂಬ ಆತ್ಮೀಯತೆಯ ಭಾವಕ್ಕೆ ಒಳಪಟ್ಟಿದೆ. ಕುವೆಂಪುರವರ ಮಾತಿನಂತೆ .

ಓ ನನ್ನ ಚೇತನ ಆಗು ನೀ ಅನಿಕೇತನ
ರೂಪರೂಪಗಳನು ದಾಟಿ, ನಾಮ ಕೋಟಿಗಳನು ಮೀಟಿ,
ಎದೆಯ ಬಿರಿಯ ಭಾವ ಬೀಸಿ,
ಓ ನನ್ನ ಚೇತನ, ಆಗು ನೀ ಅನಿಕೇತನ

ಎನ್ನುವಂತೆ ನಮ್ಮ ಕಾಲೇಜು ತನ್ನ ರೂಪವನ್ನು ದಾಟಿ ಕಾಲೇಜಿನ ಹೆಸರುಗಳನ್ನು ಮೀಟಿ ಭಾವನೆಗಳ ಭಾವವನ್ನು ಬೀಸಿ ಚೈತನ್ಯದ ಚಿಲುಮೆಯಾಗಿ ಇಂದಿಗೂ ವಿದ್ಯಾರ್ಥಿಗಳಿಗೆ ಪ್ರದೀಪವಾಗಿದೆ. ಪ್ರದೀಪ ಎಂದರೆ ಯಾವ ದೀಪ ಇತರ ದೀಪಗಳಿಗೆ ಬೆಳಕು ನೀಡುತ್ತದೆಯೋ ಮತ್ತು ತನ್ನಂತಹ ಸಾವಿರಾರು ದೀಪಗಳನ್ನು ಬೆಳಗಿಸಲು ಜ್ಯೋತಿ ನೀಡುತ್ತದೆಯೋ ಅಂತಹುದನ್ನು ಪ್ರದೀಪ ಎನ್ನಬಹುದು. ಇದನ್ನು ನಮ್ಮ ಕಾಲೇಜಿನ ವಿಚಾರಕ್ಕೆ ಹೋಲಿಸುವುದಾದರೆ ನಮ್ಮ ಕಾಲೇಜಿನಿಂದ ಕಲಿತ ಅನೇಕ ವಿದ್ಯಾರ್ಥಿಗಳು ದೇಶದ ಅತ್ಯುನ್ನತ ಹುದ್ದೆ ಐಎಎಸ್ ಮತ್ತು ನಮ್ಮ ರಾಜ್ಯದ ಅತ್ಯುನ್ನತ ಹುದ್ದೆ ಕೆಎಎಸ್ ಪರೀಕ್ಷೆಗಳನ್ನು ಬರೆದು ಉನ್ನತ ಹುದ್ದೆಯಲ್ಲಿ ಆಸೀನರಾಗಿದ್ದಾರೆ. ಇಂದಿಗೂ ಕಾಲೇಜಿನ ಬಗೆಗಿನ ಅಭಿಮಾನವನ್ನು ಬೆಳೆಸಿಕೊಂಡು ಉಚಿತವಾಗಿ ಬಂದು ವಿದ್ಯಾರ್ಥಿಗಳೊಂದಿಗೆ ಸಂವಾದವನ್ನು ನಡೆಸುತ್ತಾರೆ. ಇದಕ್ಕೆ ಮುಖ್ಯ ಕಾರಣ ನೈತಿಕತೆ, ಮಾನವೀಯತೆ ಮತ್ತು ಸಂಸ್ಕಾರವನ್ನು ಕಲಿಸಿರುವ ನಮ್ಮ ಕಾಲೇಜಿನ ಗುರುವೃಂದ. ಮತ್ತೊಂದು ಹೆಮ್ಮೆಯ ವಿಚಾರವೆಂದರೆ ತುಮಕೂರು ವಿಶ್ವವಿದ್ಯಾನಿಲಯದಲ್ಲೇ ಇಲ್ಲದಂತಹ ಅತ್ಯುತ್ತಮವಾದ ಗ್ರಂಥಾಲಯ ನಮ್ಮ ಕಾಲೇಜಿನಲ್ಲಿ ಇರುವುದು. ಒಂದು ತುಂಬಿದ ಬಿಂದಿಗೆಯಲ್ಲಿ ಒಂದು ಲೋಟ ನೀರನ್ನು ಹೇಗೆ ತೆಗೆದುಕೊಳ್ಳಲು ಸಾಧ್ಯವೋ ಅದೇ ರೀತಿ ಸಾವಿರಾರು ಪುಸ್ತಕಗಳಿಂದ ತುಂಬಿಕೊಂಡ ಗ್ರಂಥಾಲಯದಲ್ಲಿ ಕೆಲವು ಪುಸ್ತಕಗಳ ಅರಿವನ್ನು ನಾವು ತೋಡಿಕೊಳ್ಳಬಹುದು ಎಂಬುದು ನನ್ನ ಅಭಿಪ್ರಾಯ. ಸಗಣಿಯ ಜೊತೆ ಸರಸಕ್ಕಿಂತ ಗಂಧದ ಜೊತೆ ಗುದ್ದಾಡುವುದು ಲೇಸು ಎಂಬಂತೆ ಅದೆಲ್ಲೋ ಕಾಣದೂರಿನ ಕಾಲೇಜಿಗೆ ಹೋಗಿ ಪಶ್ಚಾತ್ತಾಪ ಪಡುವುದಕ್ಕಿಂತ ಕಣ್ಣ ಮುಂದೆ ಇರುವಂತಾ ಗಂಧದಂತಹ ನಮ್ಮ ಕಾಲೇಜಿಗೆ ಬಂದು ನಮ್ಮ ಪ್ರಾಧ್ಯಾಪಕರ ಜೊತೆ ಗುದ್ದಾಡುವುದು ಲೇಸು. ಆಗ ನಮಗೂ ಸ್ವಲ್ಪ ಗಂಧದ ವಾಸನೆ ಉಳಿಯುತ್ತದೆ. ಯಾವ ಕಾಲೇಜಿನಲ್ಲಿಯೂ ಇಲ್ಲದಂತಹ ಪ್ರಾಕೃತಿಕ ಸೌಂದರ್ಯ ನಮ್ಮ ಕಾಲೇಜಿನಲ್ಲಿ ತಲೆಯೆತ್ತಿ ವೈಭವಯುತವಾಗಿ ರಾರಾಜಿಸುತ್ತಿದೆ ಭಾರತಾಂಬೆಯ ಶಿರಮುಕುಟದಲ್ಲಿ ಜಾಜ್ವಲ್ಯಮಾನವಾಗಿ ಬೆಳಗುತ್ತಿರುವ ಹೊನ್ನಿನ ಕಳಸದಂತೆ ನಮ್ಮ ಕಾಲೇಜಿನಲ್ಲಿ ಪ್ರಾಚಾರ್ಯರು ಮಕ್ಕಳ ನೋವು ನಲಿವುಗಳನ್ನು ಆಲಿಸುತ್ತಾ ಅವರ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು ತಾಯಿಯ ಮಾತೃವಾತ್ಸಲ್ಯವನ್ನು ನೀಡಿ ತಮ್ಮ ಕರ್ತವ್ಯವನ್ನು ನಿಭಾಯಿಸುತ್ತಿದ್ದಾರೆ. ಅರ್ಥಶಾಸ್ತ್ರದಲ್ಲಿ ಒಂದು ಕೆಲಸವೂ ನಡೆಯಬೇಕಾದರೆ ಕಾಣದ ಕೈನ ಪಾತ್ರ ಅತಿ–

ಪ್ರಮುಖವಾಗಿರುತ್ತದೆ. ಕಾಲೇಜಿನಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಗಳು ಮತ್ತು ನಿಯೋಜನಾಬದ್ದ ಕೆಲಸಗಳು ಕೇವಲ ಪ್ರಾಚಾರ್ಯರಿಂದ ಮಾತ್ರ ಸಾಧ್ಯವಾಯಿತು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಕಾಲೇಜಿನ ಹಿರಿಯ ಧೀಮಂತ ವ್ಯಕ್ತಿಗಳಾದ ಎಲ್ಲಾ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು ಕಾಣದ ಕೈಯಾಗಿ ಪಾತ್ರ ವಹಿಸಿರುತ್ತಾರೆ. ಈ ಕಾಲೇಜು ಪ್ರಮುಖವಾಗಿ ನನಗೆ ಇಷ್ಟವಾಗಲು ಕಾರಣವೇನೆಂದರೆ.

ಉತ್ತಮ ವ್ಯವಸ್ಥೆಯುಳ್ಳ ಗ್ರಂಥಾಲಯ.
ಪ್ರಕೃತಿಯ ಸೌಂದರ್ಯ.
ಕಾಲೇಜಿನಲ್ಲಿರುವ ಆಡಿಟೋರಿಯಂ.
ಕಾಲೇಜಿನಲ್ಲಿರುವ ಕ್ರೀಡಾಂಗಣ.
ಸಾಂಸ್ಕೃತಿಕ ಕಾರ್ಯಕ್ರಮಗಳು.
ಉತ್ತಮ ವ್ಯವಸ್ಥೆಯುಳ್ಳ ಕೊಠಡಿಗಳು.
ಸೌಜನ್ಯಯುತವಾದ ಪ್ರತಿಕ್ರಿಯೆ ನೀಡುವ ಜನರು.
ವಿಶಾಲವಾದ ಮೈದಾನ.
ಮೌಲ್ಯಯುತವಾದ ಗುಣಮಟ್ಟದ ಪ್ರವಚನ.
ಹಲವಾರು ಸಂಯೋಜನೆಗಳು.
ಕಾಲೇಜಿನಲ್ಲಿರುವ ಕ್ಯಾಂಟೀನ್.
ಕಾಲೇಜಿನಲ್ಲಿರುವ ಕ್ಯಾಂಪಸ್.
ಡಾಕ್ಟರೇಟ್ ಮಾಡಿರುವ ವಿದ್ವಾಂಸರು.
ಸೀಮೋಲ್ಲಂಘನೆ ಮಾಡುತ್ತಿರುವ ಗುರುಗಳು.

ಒಟ್ಟಾರೆಯಾಗಿ ಹೇಳುವುದಾದರೆ ಉತ್ತಮವಾದ ಆಡಳಿತ ವರ್ಗ ಮತ್ತು ಸುಸಜ್ಜಿತವಾದ ಕೊಠಡಿಗಳು, ಮೌಲ್ಯಯುತವಾದ ಪಾಠ ಪ್ರವಚನ ಎಲ್ಲವೂ ಸೇರಿ ಮೇಳೈಸುತ್ತಿದೆ. ಹೀಗೆ ನಮ್ಮ ಕಾಲೇಜಿನ ಬಗ್ಗೆ ವರ್ಣಿಸಲು ಕೇವಲ ಒಂದೆರಡು ಪದ ಹಾಗೂ ಒಂದೆರಡು ಗಂಟೆಗಳ ಮಿತಿ ಸಾಕಾಗುವುದಿಲ್ಲ. ಯಾವುದೇ ಕ್ಷಣದಲ್ಲಿ ಯಾವುದೋ ಕಾರಣದಿಂದ ನಮಗೆ ಈ ಕಾಲೇಜು ತುಂಬಾ ಅಚ್ಚು ಮೆಚ್ಚು. ಎನ್ನಿಸಿರುತ್ತದೆ. ಅಂತ ಕ್ಷಣಗಳು ನಮ್ಮ ಜೀವನದಲ್ಲಿ ಯಾವಾಗ ಬೇಕಾದರೂ ಬರಬಹುದು. ಆ ಕ್ಷಣಕ್ಕಾಗಿ ನಮ್ಮೆರಡು ಕಿವಿ, ಕಣ್ಣುಗಳನ್ನು ಮತ್ತು ನಮ್ಮ ಪಂಚೇಂದ್ರಿಯಗಳನ್ನು ಜಾಗೃತಿಗೊಳಿಸಿಕೊಂಡು ಕಾಯುತ್ತಿರಬೇಕಾಗುತ್ತದೆ. ಜ್ಞಾನದ ಪಿಪಾಸೆಯಾಗಿ ಇಂದಿಗೂ ಹರಿಯುತ್ತಿರುವ ನಮ್ಮ ಕಾಲೇಜು ಮುಂದೆಯೂ ಸಾವಿರಾರು ಸಾಧಕರಿಗೆ ಜ್ಞಾನಜ್ಯೋತಿಯಾಗಲಿ ಎಂಬುದೇ ನನ್ನ ಆಶಯ.

# ಕವನಗಳು

## ಜೀವ ಜೀವಗಳ ಪ್ರೇಮ

–ಚರಣ್‌ರಾಜ್ ಆರ್.
ದ್ವಿತೀಯ ಬಿ.ಎ.

ಭೂಮಿಯೊಳಿರುವುದೊಂದು ಭಾವ
ಮನಸ್ಸಿನೊಳಿರುವುದೊಂದು ಭಾವ
ಮನುಜನೊಳ್ ತೋರುವುದೊಂದು ಭಾವ
ಅರ್ಥವೇನೀ ಭಾವಕೆ.

ಭಾವ ಮಾನವನ ಅಂತಃಶಕ್ತಿ
ಮನುಜನಲಿ ಅಗಾಗ ತೋರ್ಪ ಮಾನವೀಯ ಮೌಲ್ಯ
ಭಾವ ಬಂಧನವೆಂಬುದು ಬಂಧನವಲ್ಲ
ಆದರೂ ಕ್ಷಣಾರ್ಧದ ಆನಂದದ ಸಂಕೋಲೆ.

ಭಾವನೆ ಎಂಬುದು ಬಂಧನವೇ
ಹಾಗಿದ್ದರೆ ಭಾವ, ಭಾವಗಳ ಸಂಗಮವೇಕೆ
ಭಾವ ಬಂಧನ ಮೀರಿ ಬೆಳೆದಾಗ
ಭವಕ್ಕೆ ಅರ್ಥ ಬರುತ್ತದೆ.

ಬಂಧನವದೇನಲ್ಲ
ಜೀವ ಜೀವಗಳ ಪ್ರೇಮ

## " ಅಮ್ಮ "



–ಪ್ರೀತಿ ಎಸ್.ಆರ್.
ದ್ವಿತೀಯ ಎಂ.ಕಾಂ.,

ನವಮಾಸದ ನೋವು ನನಗಿರಲಿ

ನೀ ಬರುವ ದಾರಿಯನ್ನು ಕಾಯುತ್ತಿರುವೆ ನಾನಿಲ್ಲಿ
ನೀ ಬಂದಾಗ ನಿನ್ನ ಕೂಗೇ ನನಗೆ ಮರುಜನ್ಮವಿಲ್ಲಿ
ನಿನ್ನ ನೋಡಿದಾಗ ಹಿಡಿದು ಮುದ್ದಾಡುವ ಹಂಬಲ
ನನಗಿಲ್ಲಿ

ಸಾವಿರ ನೋವಿಗೂ ನಿನ್ನ ಕೂಗೇ ಔಷಧವಿಲ್ಲಿ
ಕಾಣದ ಜಗತ್ತನ್ನು ಪರಿಚಯಿಸುವ ಹಂಬಲ ನನಗಿಲ್ಲಿ
ಕೂತರು ನಿಂತರು ನಿನದೇ ಧ್ಯಾನ ಮಾಡುತ್ತಿರುವೆ
ನಾನಿಲ್ಲಿ

ವರ್ಷಗಳೇ ಉರುಳಿದರು ನೀ ನನಗೆ ಕಂದಮ್ಮನೆ ಈ
ಜನುಮದಲ್ಲಿ

ನಿನ್ನ ಎಲ್ಲಾ ಯಶಸ್ಸಿಗೂ ದಾರಿಯಾಗುವೆ ನಾ ಈ
ಪಾತ್ರದಲ್ಲಿ

ನಿನ್ನಲ್ಲಿ ನನ್ನನ್ನು ಕಂಡಿರುವೆ ಈ ಜಗದಲ್ಲಿ
ಕೊನೆ ಉಸಿರು ಬಿಡುವವರೆಗೂ ಕಾಯುತ್ತಿರುವೆ
ನೆರಳಾಗಿ ನಿನ್ನಲ್ಲಿ

ಹೀಗೆ ತಾಯಿ
ನವಮಾಸ ಹೊತ್ತು
ಚಿರಕಾಲ ಬಾಳು ಎಂದು ಆಶೀರ್ವದಿಸುವಳು.

# ಕವನಗಳು

## ಗುರುಗಳ ಪುಟ :

– ಡಾ. ಉದಯರವಿ ಎಸ್.ವಿ.

ಕಾಗೆ–ಹುಳು ಗೆಳೆತನ

ಕಾಗೆ ಬಯಸಿತು

ಹುಳುವಿನ ಸಹವಾಸ

ಹುಳುಕಿಲ್ಲದ ಸ್ನೇಹ

ಬೇಕಾಗೇ ಮೋಜು ಪರಿಹಾಸ

ಹೆಕ್ಕಿ ಕುಕ್ಕಿ ಆಟವಾಡೆ

ಹುಳುವು ಹೆದರಿ ತೆವಳಿತು

ಕಾಗೆ ನೋಡಿ ನಕ್ಕಿತು

ಸರಸಿ ಕಾಕನ ಕೀಟಲೆ

ಕೀಟ ಕಾಯಿತು ಕೋಟಲೆ

ಬಂದೆ ಬಿಟ್ಟಿತು

ಮಳೆಯ ಅಬ್ಬರ

ಬಯಲು ತುಂಬಾ ಛಟ ಛಟ

ಗೆಳೆಯ ನೋಡು ಮಳೆಯ ಹನಿಯ

ನೀನು ನೆನೆಯಲು ಬಿಡುವೆನೆ ?

ಎಂದ ಕಾಗೆ ಹುಳುವ ಹೆಕ್ಕಿ

ಬಯಲಿಟ್ಟು

ಹಾರಿ ಹೋಯಿತು ಪುರ್ರನೆ

ಹುಳುವಾದೊಡೆ ನೀನು

ಗೆಳೆಯನಾಗದು

ಹಕ್ಕಿಯೆಂದೂ ಅರಿ.

## ಪುಸ್ತಕ ವಿಮರ್ಶೆ :

ಅಡ್ಯನಡ್ಕ ಕೃಷ್ಣ ಭಟ್ ಆಯ್ದ ಬರಹಗಳು
ಸಂಪಾದಕರು : ಟಿ.ಜಿ.ಶ್ರೀನಿಧಿ
ಪ್ರಕಾಶಕರು : ವಿಜ್ಞಾನ್ ಪ್ರಸಾರ್, ನವದೆಹಲಿ
124 ಪುಟಗಳು, ಬೆಲೆ ರೂ. 120

ವಿಜ್ಞಾನದ ವಿಷಯವನ್ನು ಸರಳವಾಗಿ ಕುತೂಹಲ ಹುಟ್ಟಿಸುವ ರೀತಿಯಲ್ಲಿ ಕನ್ನಡದಲ್ಲಿ ಬರೆಯಬಲ್ಲ ಸಾಮರ್ಥ್ಯ ಸಿದ್ದಿಸುವುದು ಅಪರೂಪ. ಇಂತಹ ಬರಹಗಳನ್ನು ಎಳೆಯ ಮನಸ್ಸುಗಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿಯ ಕಿಡಿಯನ್ನು ಹೊತ್ತಿಸುವಂತೆ ಬರೆಯುವುದು ಇನ್ನೂ ಕಠಿಣ. ಪ್ರೊ. ಅಡ್ಯನಡ್ಕ ಕೃಷ್ಣ ಭಟ್ಟರಿಗೆ ಅಂತಹ ಶೈಲಿಯ ಬರವಣಿಗೆ ಸಿದ್ದಿಸಿತ್ತು. ಅವರ ಶೈಲಿ ಅನೇಕ ಬರಹಗಾರರಿಗೆ ಪ್ರೇರಣ ದಾಯಕವಾಗಿತ್ತು. ಇವರ ಆಯ್ದ ಬರಹಗಳ ಕೃತಿಯನ್ನು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಜ್ಞಾನ್ ಪ್ರಸಾರ್ ಹೊರತಂದಿದೆ. ಭಟ್ಟರ ಲೇಖನಗಳಿಗೆ ಬಲ ವಿಜ್ಞಾನ ನವ ವಿಜ್ಞಾನದ ಉದಯ ಗಗನಯುಗ ಮುಂತಾದ ಪತ್ರಿಕೆ, ಮ್ಯಾಗಜಿನ್‌ಗಳಲ್ಲಿ ಹುಡುಕಾಟ ನಡೆಸಿ, ಸಂಗ್ರಹಿಸಿ ಸಂಪಾದಿಸಿ ಕನ್ನಡದ ಓದುಗರಿಗೆ ಶ್ರೀ ಟಿ.ಜಿ.ಶ್ರೀನಿಧಿಯವರು ನೀಡಿದ್ದಾರೆ.

ಗಗನಯುಗ ಆಕಾಶದಲ್ಲಿ ತೇಲಿ ಹೋದ ಅಜ್ಜನ ಗಡ್ಡ, ಫಿಸಿಕ್ಸ್ ಅಂದರೆ ಪ್ರಕೃತಿಯ ದರ್ಶನ, ವಿಶ್ವ ಜೀವಿ, ಮಾನವ ಮನಸ್ಸುಗಳ ಆದಿ, ಮುಪ್ಪು, ಎಲ್ಲಿ ಹೋಗುವಿರಿ ನಿಲ್ಲಿ ಕೀಟಗಳೇ ಹೀಗೆ ಒಟ್ಟು 16 ಲೇಖನಗಳನ್ನು ಸಂಕಲನ ಸಂವಹನ ಮತ್ತು ಸಂಪಾದನೆ ಎಂಬ ಮೂರೂ ಭಾಗಗಳಲ್ಲಿ ಕೊಡಲಾಗಿದೆ.

ಇಂಟರ್ ನೆಟ್ ಇಲ್ಲದ ಕಾಲದಲ್ಲಿ ಆ ಬಗ್ಗೆ ಲಭ್ಯವಿದ್ದ ಪುಸ್ತಕ ಪತ್ರಿಕೆಗಳಿಂದ ಮಾಹಿತಿ ಸಂಗ್ರಹಿಸಿ ಕನ್ನಡದ ಓದುಗರಿಗೆ ಅಡ್ಯನಡ್ಕ ಕೃಷ್ಣಾ ಭಟ್ಟರು ಉಣಬಡಿಸುತ್ತಿದ್ದರು. ವಿಜ್ಞಾನ ಸಂವಹನಕ ಆಗಲು ಬಯಸುವವರಿಗೆ ಉತ್ತಮ ಕೃತಿ ವಿಜ್ಞಾನದ ಲೇಖನದ ಕೊಳ್ಳೇಗಾಲ ಶರ್ಮ ಮತ್ತು ಶ್ರೀನಿಧಿ ಇವರ ಜಂಟಿ ಪ್ರಯತ್ನದಲ್ಲಿ ಈ ಕೃತಿ ಸಿದ್ಧವಾಗಿದೆ.

ಪ್ರೊ. ಅಡ್ಯನಡ್ಕ ಕೃಷ್ಣ ಭಟ್ ಪರಿಚಯ :

ಕನ್ನಡದಲ್ಲಿ ವಿಜ್ಞಾನ ಸಂವಹನಕ್ಕೆ ಅನನ್ಯ ಕೊಡುಗೆ ನೀಡಿದ ಪ್ರೊ. ಅಡ್ಯನಡ್ಕ ಕೃಷ್ಣ ಭಟ್, ದಕ್ಷಿಣ ಕನ್ನಡ ಜಿಲ್ಲೆಯ ಅಡ್ಯನಡ್ಕದವರು ಉಡುಪಿಯ ಮಹಾತ್ಮ ಗಾಂಧಿ ಸ್ಮಾರಕ ಕಾಲೇಜಿನಲ್ಲಿ ಭೌತಶಾಸ್ತ್ರ ಉಪನ್ಯಾಸಕರಾಗಿದ್ದರು. ಮುಲ್ಕಿಯ ವಿಜಯ ಕಾಲೇಜಿನಲ್ಲೂ ಸೇವೆ ಸಲ್ಲಿಸಿದ್ದ ಅವರು 16ಕ್ಕೂ ಹೆಚ್ಚು ವಿಜ್ಞಾನ ಕೃತಿಗಳನ್ನು ಬರೆದಿದ್ದರು. ಅವರ ಮಹತ್ವದ ಕೃತಿಯಾದ 'ಮನುಷ್ಯನ ಕತೆಯು' ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರಕ್ಕೆ ಪಾತ್ರವಾಗಿತ್ತು. 2016 ರಲ್ಲಿ ತಮ್ಮ 79ನೆಯ ವಯಸ್ಸಿನಲ್ಲಿ ಮರಣ ಹೊಂದಿದರು.

ಕನ್ನಡದ ವಿಜ್ಞಾನ ಸಾಹಿತ್ಯ ಕ್ಷೇತ್ರಕ್ಕೆ ಒಂದು ಶತಮಾನಕ್ಕೂ ಹೆಚ್ಚಿನ ಇತಿಹಾಸವಿದೆ. ಹಲವು ವೈಯಕ್ತಿಕ ಪ್ರಯತ್ನಗಳ

ಮೂಲಕ ಪ್ರಾರಂಭಿಕ ಬೆಳವಣಿಗೆಗೆ ಸರ್ ಎಂ. ವಿಶ್ವೇಶ್ವರಯ್ಯನವರಂತಹ ಮಾರ್ಗದರ್ಶಕರು ಹಾಗೂ ಬೆಳ್ಳಾವೆ ವೆಂಕಟನಾರಣಪ್ಪನವರಂತಹ ಮಾರ್ಗಪ್ರವರ್ತಕರ ನೆರವು ದೊರೆತಿತ್ತು. ಇಲ್ಲಿನ ಚಟುವಟಿಕೆಗಳಿಗೆ ವೇಗ ದೊರೆತದ್ದು ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರದ ಕೆಲ ದಶಕಗಳಲ್ಲಿ. ಆ ಸಂದರ್ಭದಲ್ಲಿ ಪ್ರಾರಂಭವಾದ ಹಲವು ಪತ್ರಿಕೆಗಳು ವಿಜ್ಞಾನ ಸಂವಹನಕ್ಕೆ ಸಂಬಂಧಿಸಿದ ಚಟುವಟಿಕೆಗಳು ಈ ಕ್ಷೇತ್ರದ ಫಸಲಿಗೆ ಸಮೃದ್ಧಿಯನ್ನೂ ವೈವಿಧ್ಯವನ್ನೂ ತಂದುಕೊಟ್ಟವು.

ಆ ಸಮಯದಲ್ಲಿ ಪ್ರಾರಂಭಿಸಿ ತಮ್ಮ ಜೀವಮಾನದುದ್ದಕ್ಕೂ ವಿಜ್ಞಾನ ಸಾಹಿತ್ಯಕ್ಕೆ ಕೊಡುಗೆ ನೀಡಿದ ಮಹನೀಯರಲ್ಲೊಬ್ಬರು ಪ್ರೊ. ಅಡ್ಯನಡ್ಕ ಕೃಷ್ಣ ಭಟ್, ವಿಜ್ಞಾನಾಸಕ್ತರು ಹಾಗೂ ವಿದ್ಯಾರ್ಥಿಗಳಿಗೆ ಪ್ರೀತಿಯ ಎಕೆಬಿ ಸರ್, ವಿಜ್ಞಾನ ಸಾಹಿತ್ಯ ರಚನೆ ಹಾಗೂ ಸಂಪಾದನೆಯಲ್ಲಿ ಅವರದು ಅನನ್ಯ ಸಾಧನೆ. ದಕ್ಷಿಣ ಕನ್ನಡ ಜಿಲ್ಲೆಯ ಅಡ್ಯನಡ್ಕದಲ್ಲಿ 1938ರಲ್ಲಿ ಜನಿಸಿದ ಎಕೆಬಿಯವರು ತವರು ಜಿಲ್ಲೆಯಲ್ಲೇ ಇಂಟರ್ ಮೀಡಿಯಟ್‌ವರೆಗಿನ ಶಿಕ್ಷಣ ಮುಗಿಸಿದರು. ಭೌತವಿಜ್ಞಾನದಲ್ಲಿ ಉನ್ನತ ಶಿಕ್ಷಣವನ್ನು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪಡೆದ ಅವರು ಅಧ್ಯಾಪಕರಾಗಿ ನೆಲೆನಿಂತದ್ದು ಮೂಲ್ಕಿಯ ವಿಜಯ ಕಾಲೇಜಿನಲ್ಲಿ. ವಿಜ್ಞಾನ ಅಧ್ಯಾಪನದ ಜೊತೆಜೊತೆಯಲ್ಲೇ ಎಕೆಬಿಯವರ ವಿಜ್ಞಾನ ಸಾಹಿತ್ಯ ಕೃಷಿಯೂ ಪ್ರಾರಂಭವಾಯಿತು. 1961ರಲ್ಲಿ ಯೂರಿ ಗಗಾರಿನ್‌ನ ಅಂತರಿಕ್ಷಯಾನ ಎಕೆಬಿಯವರ ಮೊದಲ ಕೃತಿ ಗಗನಯುಗಕ್ಕೆ ಪ್ರೇರಣೆ ನೀಡಿತು. ಅಂದಿನಿಂದ ಪ್ರಾರಂಭಿಸಿ 2016ರಲ್ಲಿ ನಮ್ಮನ್ನು ಅಗಲುವವರೆಗೂ ಅವರು ವಿಜ್ಞಾನದ ಅನೇಕ ಬರಹಗಳನ್ನು, ಪುಸ್ತಕಗಳನ್ನು ಕನ್ನಡದ ಓದುಗರಿಗೆ ಕೊಟ್ಟರು.

ವಿಜ್ಞಾನ ಸಂವಹನ ಎಂದರೆ ವಿಷಯವನ್ನು ತೀರಾ ಸರಳವಾಗಿ ಹೇಳಿ ಮುಗಿಸುವುದೇ ವಿನಃ ಬರಹವನ್ನು ಅತಿ ಕ್ಲಿಷ್ಟವಾಗಿಸಿ ಓದುಗರನ್ನು ಹೆದರಿಸುವುದಲ್ಲ. ಎಕೆಬಿಯವರ ಬರಹಗಳು ಅವುಗಳ ಉದ್ದೇಶಿತ ಓದುಗರನ್ನು ಹೆದರಿಸುವುದಲ್ಲ. ಎಕೆಬಿಯವರ ಬರಹಗಳು ಅವುಗಳ ಉದ್ದೇಶಿತ ಓದುಗರ ಮಟ್ಟಕ್ಕೆ ಅತ್ಯಂತ ಸೂಕ್ತವಾಗಿರುತ್ತಿದ್ದವು. ಭಾರತ ಭಾರತಿ ಸರಣಿಯಲ್ಲಿ ಪ್ರಕಟವಾದ ಸಿ.ವಿ. ರಾಮನ್ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದ ಮನುಷ್ಯನ ಕತೆ ಮುಂತಾದ ಪುಸ್ತಕಗಳಲ್ಲಿ ಶಾಲಾ ವಿದ್ಯಾರ್ಥಿಗಳಿಗೂ ಸುಲಭವಾಗಿ ಅರ್ಥವಾಗುವಂತೆ ಬರೆದ ಎಕೆಬಿಯವರು ನವ ವಿಜ್ಞಾನದ ಉದಯ ಕೃತಿಯಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪ್ರಕಟಿಸುವ ವಿಜ್ಞಾನ ಲೋಕದ ಸಂಚಿಕೆಗಳಲ್ಲಿ ಅತಿಕ್ಲಿಷ್ಟವೆನಿಸುವ ಪರಿಕಲ್ಪನೆಗಳನ್ನೂ ವಿವರಿಸಿದರು. ಭೂಮಿ ಬಾನುಗಳ ಹರವಿನಲಿ ಹನಿಮಣಿಗಳ ಚೆಲ್ಲಾಟದಲಿ ಕನ್ನಡ ಕೂಸೇ ಓಲಾಡು ಅರಿವಿನ ಜಗವನು ಜಾಲಾಡು ಎಂದು ಮಕ್ಕಳಿಗೆ ಹೇಳಿದ ಎಕೆಬಿ, ಪದವಿ ಮಟ್ಟದ ಪಠ್ಯಪುಸ್ತಕಗಳಲ್ಲಿ ನೇರವಾಗಿ ಬಳಸಬಹುದಾದಂತಹ ಪ್ರೌಢ ಪ್ರಬಂಧಗಳನ್ನೂ ಬರೆದರು ಎನ್ನುವುದು ಅವರ ಬರವಣಿಗೆಯ ಶಕ್ತಿಗೆ ಸಾಕ್ಷಿ .

## **ಬೀchi (ರಾಯಸಂ ಭೀಮಸೇನರಾವ್)** (ಏಪ್ರಿಲ್ 23, 1913–ಡಿಸೆಂಬರ್ 7, 1980) **ಅಂದರೆ ವೈಶಿಷ್ಟ್ಯಪೂರ್ಣ ಹಾಸ್ಯ ಬರಹಗಳಿಗೆ ಮತ್ತೊಂದು ಹೆಸರು.**

ಮಾಧ್ವ ಸಂಪ್ರದಾಯಸ್ಥ ಕುಟುಂಬವೊಂದರಲ್ಲಿ ಬೀಚಿ ಆರ್.ಶ್ರೀನಿವಾಸರಾಯರು ಮತ್ತು ಭಾರತಮ್ಮ ದಂಪತಿಗಳಿಗೆ 1913ರಲ್ಲಿ 2ನೆಯ ಮಗನಾಗಿ ಜನಿಸಿದರು. ಬೀಚಿ ಒಂಬತ್ತು ವರ್ಷದವರಿದ್ದಾಗ ತಾಯಿ ತೀರಿಕೊಂಡರು.
ಅವರ ಜೀವನ ಚರಿತ್ರೆಯ ಒಂದು ಪುಟ ಅವರೇ ಬರೆದ ಬೀಚಿ ಲೈಪೋಗ್ರಫಿಯಲ್ಲಿದೆ.

ಹುಟ್ಟಿದ ತಾರೀಖು : ಏಪ್ರಿಲ್ 23, 1913.
ಶಿಕ್ಷಣ : ಎಸ್.ಎಸ್.ಎಲ್.ಸಿ ಪಾಸು 1930.
ನೌಕರಿಗೆ ಸೇರಿದ್ದು : ಪೊಲೀಸ್ ಇಲಾಖೆ ಅಟೆಂಡರ್ 1931.
ಪ್ರಥಮ ಲೇಖನ ಮುದ್ರಣ : ಪ್ರಜಾಮತ (ಮದ್ರಾಸ್) 1933.
ಮದುವೆ : ಜಮಖಂಡಿ ಶ್ರೀನಿವಾಸಾಚಾರ್ಯರ ಮಗಳು ಸೌ.ಸೀತಾಬಾಯಿ ಅವರೊಡನೆ 1933 (ಶ್ರಾವಣ).
ಪ್ರಥಮ ಸಂತನ: 1940.
ಪ್ರಥಮ ಪುಸ್ತಕ ಪ್ರಕಟಣೆ : 1946.
ಕೆಲಸದಲ್ಲಿ ಬಡ್ತಿ : ಸೂಪರಿಂಟೆಂಡೆಂಟ್, ಸ್ಪೆಷಲ್ ಬ್ರಾಂಚ್ ಸಿ.ಐ.ಡಿ ಬೆಂಗಳೂರು ( ರಾಜ್ಯದಲ್ಲಿ ಈ ತರಹದ ಹುದ್ದೆ ಇದೊಂದೇ)
ಪಿಂಚಣಿ : 1968.
ಪಿಂಚಣಿ ಹಣ : ರೂ 133.
ಪುತ್ರ : ರವಿ ಬೆಳಗೆರೆ.

1946 ರಲ್ಲಿ ಪ್ರಕಟಿತಗೊಂಡ ರೇಡಿಯೋ ನಾಟಕಗಳಿಂದ ಹಿಡಿದು ತಾವು ತೀರಿಕೊಳ್ಳುವವರೆಗೂ ಬೀಚಿ ಬರವಣಿಗೆಗೆ ವಿಶ್ರಾಂತಿ ಎಂಬುದೇ ಇರಲಿಲ್ಲ. ಐವತ್ತಕ್ಕೂ ಹೆಚ್ಚಿನ ಕೃತಿಗಳನ್ನು ನೀಡಿದ ಅವರ ರಚನೆಗಳಲ್ಲಿ ಹಲವಾರು ನಿರಂತರವಾಗಿ ಮುದ್ರಣದ ಭಾಗ್ಯವನ್ನು ಕಂಡಿವೆ. 'ತಿಂಮನ ತಲೆ'ಯಂತೂ ಇಂದಿನ ದಿನಗಳಲ್ಲೂ ಪುನರ್ ಮುದ್ರಣ ಕಾಣುತ್ತಲೇ ಸಾಗಿದೆ. ಬೀಚಿಯವರ ಬರವಣಿಗೆಯನ್ನು ಮುಖ್ಯವಾಗಿ ಕಾದಂಬರಿ, ನಾಟಕ, ಕಥೆ, ಹರಟೆ, ಪದ್ಯ ಎಂದು ವಿಂಗಡಿಸಬಹುದು.

ಅವರ ದಾಸಕೂಟ ಕನ್ನಡದಲ್ಲಿಯೇ ಮೊತ್ತ ಮೊದಲ ಹಾಸ್ಯಪ್ರಧಾನ ಕಾದಂಬರಿ. ಇದರ ಒಂದು ಪಾತ್ರದ ಬೆಳವಣಿಗೆ ಮುಂದಿನ ಸತೀ ಸೂಳೆ ಕಾದಂಬರಿಯ ವಸ್ತು. ಸರಸ್ವತಿ ಸಂಹಾರ, ಖಾದಿ ಸೀರೆ, ಬೆಂಗಳೂರು ಬಸ್ಸು, ದೇವನ ಹೆಂಡ, ಬ್ರಹ್ಮಚಾರಿಯ ಮಗ, ಸತ್ತವನು ಎದ್ದು ಬಂದಾಗ, ಏರದ ಬಳೆ, ಮೇಡಮ್ಮನ ಗಂಡ, ಟೆಂಟ್ ಸಿನಿಮಾ, ಆರಿದ ಚಹಾ, ಬಿತ್ತಿದ್ದೇ ಬೇವು ಮೊದಲಾದ ಮೂವತ್ತಕ್ಕೂ ಹೆಚ್ಚಿನ ಕಾದಂಬರಿಗಳನ್ನು ಅವರು ಬರೆದಿದ್ದಾರೆ.

ಬೀಚಿ ಪ್ರಸಿದ್ದ ಇಂಗ್ಲಿಷ್ ಕಾದಂಬರಿಗಳ ನಗೆ ತುಣುಕುಗಳ ಸಾಮಗ್ರಿಯನ್ನು ಕನ್ನಡಕ್ಕೆ ಇಳಿಸಿದ್ದಾರೆ ನಿಜ. ಆದರೆ ಅವರ ಭಾಷಾಪ್ರಜ್ಞೆಯಲ್ಲಿ ಕನ್ನಡದ ಛಾಪು ಇದೆ. ಶಬ್ದದ ವಿಶಿಷ್ಟ ಸತ್ವದಿಂದಲೇ ವಿಚಾರಗಳನ್ನು ಬೆದಕಬೇಕೆಂಬ ಆರೋಗ್ಯಕರ ವ್ಯಂಗ್ಯಶೀಲತೆಯಿದೆ. ಮಾನವನ ಬಾಳು ಗೋಪುರದ ಗಡಿಯಾರ ತಲೆ ಎತ್ತಿದರೆ ಮಾತ್ರ ಕಾಣುತ್ತದೆ.

ಎತ್ತಲು ತಲೆ ಎಂಬುದೊಂದು ಬೇಕು. ಎತ್ತಬೇಕು ಅಂಬುದು ಅದಕ್ಕೆ ತೋಚಬೇಕು ಅಲ್ಲವೇ? ಅದಕ್ಕಾಗಿ ಮನುಷ್ಯನೆಂಬ ಪ್ರಾಣಿ ಊರ್ಧ್ವಮುಖಿ.

ರಾಶಿ, ರಾಜರತ್ನಂ ಎ.ಎನ್.ಮೂರ್ತಿರಾವ್, ಲಾಂಗೂಲಾಚಾರ್ಯ ಇವರುಗಳ ಹಾಸ್ಯದಲ್ಲಿ ಆತ್ಮೀಯತೆಯ ಲೇಪವಿದೆ. ನಾಡಿಗೇರ್ ಸೋದರರು, ನಾ ಕಸ್ತೂರಿ, ಎನ್ನೆ.ಎಚ್.ಕೆ ರಂಗನಾಥ್ ಇವರುಗಳು ಶುದ್ಧಹಾಸ್ಯದ ಅಬ್ಬರದ ದರ್ಶನ ಮಾಡಿಕೊಡುತ್ತಾರೆ. ಶ್ರೀರಂಗ ಕಾರಂತ ಇವರ ಹಾಸ್ಯದ ಹಿನ್ನೆಲೆಯಲ್ಲಿ ವಿಚಾರದ ಬೆಟ್ಟವೇ ಇರುತ್ತದೆ. ರಾ.ಕು, ಅ.ರಾ.ಸೇ, ದಾಶರಥಿ ದೀಕ್ಷಿತ್, ಸುನಂದಮ್ಮ ಮೊದಲಾದವರು ತಮ್ಮ ವಿಚಿತ್ರ ದೃಷ್ಟಿಕೋನದಿಂದ ಹಾಸ್ಯ ಪ್ರಕರಣಗಳನ್ನು ಮಥಿಸುತ್ತಾರೆ. ಬೀಚಿ ಶಬ್ದದ ಬೆನ್ನು ಹಿಡಿದು ಹಾಸ್ಯದ ಒಳಸೆಲೆಗಳನ್ನು ಶೋಧಿಸುವ ಅನನ್ಯ ಪಂಥದ ಬರಹಗಾರರಾಗಿದ್ದಾರೆ.

ಬೀಚಿ ಸುಮಾರು 66 ಕೃತಿಗಳನ್ನು ರಚಿಸಿದರು. ಅವುಗಳಲ್ಲಿ 35 ಕಾದಂಬರಿಗಳು. ಇನ್ನುಳಿದವು ಏಕಾಂತ ರೇಡಿಯೋ ನಾಟಕಗಳು, ವಿನೋದ ಬರಹಗಳು, ಸಣ್ಣ ಕಥೆ ಇತ್ಯಾದಿ. ದಾಸಕೂಟ ಕನ್ನಡ ಸಾಹಿತ್ಯದಲ್ಲಿ ಬಂದ ಮೊಟ್ಟ ಮೊದಲ ಹಾಸ್ಯ ಕಾದಂಬರಿ.

ಬೀಚಿಯವರು ನಿಧನರಾದದ್ದು ಡಿಸೆಂಬರ್ 07, 1980ರಲ್ಲಿ

ನೀವು ಓದಿ engineer ಆಗಿ, doctor ಆಗಿ, lawyer ಆಗಿ ಅಥವಾ ಯಾವ ಕೆಲ್ಸಾನು ಸಿಗ್ಲಿಲ್ಲ ಅಂದ್ರೆ, at least teacher ಆದ್ರೂ ಆಗಿ, ದಯವಿಟ್ಟು ರಾಜಕಾರಣಿ ಮಾತ್ರ ಆಗಬೇಡಿ ಯಾಕಂದ್ರೆ Politics is the last resort of the worst scoundrel.

ಸಾಹಿತ್ಯವು ಶ್ರೀಮಂತರಿಗೆ ಕಥೆಯನ್ನು ಕೊಡುತ್ತದೆ,ಬಡತನವು ಸಾಹಿತ್ಯಕ್ಕೆ ಕಥೆಯನ್ನು ಕೊಡುತ್ತದೆ.

ಶ್ರೀಮಂತನ ಕ್ಷಯವೇ, ಡಾಕ್ಟರನ ಅಕ್ಷಯ ಪಾತ್ರೆ.

ಗೆಳೆಯನನ್ನು ಉಪ್ಪಿನಂತೆ ಬಳಸಬೇಕು, ಸಕ್ಕರೆಯಂತೆ ಸುರುವಿಕೊಳ್ಳಬಾರದು.

ನಮಗೆ ಬೇಕಾದಾಗಲೆಲ್ಲಾ ದೇವರು ಪ್ರತ್ಯಕ್ಷವಾಗುವುದಿಲ್ಲ. ದಿಢೀರೆಂದು ದೇವರು ಪ್ರತ್ಯಕ್ಷವಾಗುವುದು, ಕೇವಲ ತಮಿಳು ಸಿನೆಮಾಗಳಲ್ಲಿ ಮಾತ್ರ !

ಸಾವಿನ ಬಗ್ಗೆ ಎಚ್ಚರಿಸಲು ಕಾಲರಾಯನು, ವರ್ಷಕ್ಕೊಮ್ಮೆ ಗಂಟೆ ಬಾರಿಸುವ ದಿನವೇ ಜನ್ಮದಿನ.

ಬಾಳಿನ ವ್ಯಾಕರಣ :

ಹೆಣ್ಣು–ಪದ್ಯ / ಗಂಡು–ಗದ್ಯ / ಮಕ್ಕಳು–ರಗಳೆ.

ಹಲವರು ಹೆಚ್ಚು ಕಷ್ಟಪಟ್ಟು ಉಣ್ಣುತ್ತಾರೆ, ಕೆಲವರು ಹೆಚ್ಚು ಉಂಡು ಕಷ್ಟ ಪಡುತ್ತಾರೆ.

ಪ್ರತಿಯೊಬ್ಬ ಜಾಣನಿಗೂ ಅಹಂಕಾರವಿದ್ದೇ ಇರುತ್ತದೆ,

ತಾನೊಬ್ಬ ಕೋಣನೆಂದು ತಿಳಿಯುವವರೆಗೂ..

ಜಾಣರು ಗುದ್ದಾಡಿದರೆ ಚರ್ಚೆ ಆಗುತ್ತದೆ, ದಡ್ಡರು ಚರ್ಚೆ ಮಾಡಿದರೆ ಗುದ್ದಾಟ ಆಗುತ್ತದೆ..

ಮೂರ್ಖರ ಜಗತ್ತಿನಲ್ಲಿ ಜಾಣನೇ ಹುಚ್ಚಾ..

ಹಸಿವು ಚೆನ್ನಾಗಿದ್ದರೆ.. ಊಟ ಚೆನ್ನಾಗಿಯೇ ಇರುತ್ತದೆ..

ವಾರದಲ್ಲಿ ಮೂರು ದಿನವಾದರೂ ನಗುತ್ತಾ ಇರಬೇಕು, ನಿನ್ನೆ ಇವತ್ತು ಮತ್ತು ನಾಳೆ..

# "Beauty Lies in The Eyes of the Beholder"

**-Sumaiya Saher**
Second Year B.A.

People, by and large, consider a person attractive by looking at his physical beauty. But, "Beauty lies in the eyes of the beholder" which means beauty doesn't exist on its own but is created by the observers.

The concept of beauty has captivated human minds throughout history. People have dedicated time and effort to define, pursue, and appreciate beauty in various forms whether it be in nature, art or human appearance.

We often concentrate more on the beauty of humans, more specially on girls/females. However, the question of whether beauty is subjective or objective has been a subject of debate among many. While some argue that beauty is entirely subjective and lies in the eyes of beholder, others claim that there are certain objective criteria that define beauty. And now I want to discuss the idea of subjective beauty and objective beauty.

Subjective beauty is really our taste, I like this, I don't like that. After watching a film, I may say, I loved it and you say no! I didn't liked it at all. Neither of us is right or wrong. I consider it right because that's my taste. And so that element also get muddled up in fashion, prestige, glamour, image and all those things. Because you and your taste may be involved, you say I like tragedies more than comedies or I like Virat Kohli more than Dhoni, is certainly your individual taste. Therefore, beauty appears to be influenced by the unique subjective experiences and emotional landscapes of individuals.

While there are also compelling arguments supporting the existence of objective elements in beauty. Like some individuals tend to find symmetrical ones. Society, through its collective judgements and cultural norms, plays a significant role in shaping and influencing these perceptions.In our society we can often come with the comments on being, dark, fat, dwarf, thin, tall especially more in case of girls. They often taunt on the physical appearance.But what about the inner beauty?There are very few people who appreciate it. Often we keep on observing judgement of society on complexion, physical contours of the body.Girls are criticized and make them feel unconfident in getting married. But I have seen a girl who is brown, but is very happy in her married life than girls with fair complexion and well toned body. So it all depends on us how we look this world and our positive response matters.

Even we have the most of ladies who won beauty pageants like miss world, miss universe, miss India etc, but they were not so fair then how they won? And again here is a matter of the way we look, the concept of intelligence, smartness and inner beauty decides the beauty of a person. Inner beauty is what helps us build the bonds between people such as confidence, joy, patience, kindness and loyalty. That kind of beauty reaches far beyond physical beauty and makes a person shine from the inside. It makes a person more peaceful. Therefore it can automatically help in reducing violence in the world. To conclude I will just say that physical beauty vanishes over time but the beauty in your heart which impacts to other human being is eternal. Remember beauty is not makeup, but your personality is, what you radiate, what you feel, what you embrace about yourself, how confident you are about yourself that is beauty.

The Smile is the best makeup everyone can wear. So, don't forget to smile.

# Cell Phones the Necessary Evil

- Bibi Ayesha
2nd B.Com.

Mobile phones have become necessity of life now-a-days, but we are not using it correctly. Mobiles are technically advanced and have too many options like games, internet and down loading etc. Everyone uses mobile phones for different purposes, but teenagers use it for texting, music, games and net surfing .

You are no more secure as your social life will be completely destroyed. No personal distance and no privacy at all . Anyone can dig your social sites in a way cell phones have become constant way of interruption .

Gone are the times when the family used to sit together for the dinner that used to be a family time. The face to face communication has taken a back seat. The instant social media and chats are favorite to pass time. Some people become completely disinterested in spending time with their friends and others. However it is also affecting the reading time and sleeping hour also.

# Your Best Friend

- Rushab Jain
3rd B.Com

When days are long
And nights never end
Remember that you have a friend

When there are many trials to bear, and no one seems to really care;
When all your mountains seem to crupt and you feel like giving up when
all your plans have gone away , you just can't face another day don't give up.

You have a Friend ..

# Life toward A beautiful world

-Daniel .D.M
B.A. 2nd Sem

Life is simple we have to understand this simple logic, First of all we need to understand that why are we existing on this beautiful world ? is it because God sent us to live here ? why did he do so ? right from childhood we heard that there will be Parentages for an organism. But we don't know about that but we know one percentage between that on which we are living right now. In between the birth and death have you all planned what to do ?

I was just told that you have to study well, score good marks, get good job & run behind money. That's why we are not happy in our life. I agree that it is necessary, but not too much. Just think why we are not satisfied in our life ? because it is not a going according to our will? Hm but we can lead our life in our own style. According to our will it is possible if we are ready to change .

If today is not good day, wake up tomorrow & start a better day. Life is what you make of it we live in such a breath taking environment that it is full of magic & Wonders .

"THE MORE BEAUTIFUL WORLD OUR HEARTS KNOW IS POSSIBLE " says Charles Eisenstein . Lead a happy life in this beautiful world .

# Hardwork is the key to success

- Chandru Mouli .B
2nd year B.Com

Hardwork is the key to success in life. We all have dreams and goals. We want to achieve some things special, something great in our life. The secret of making those dreams come true is hard work.

No one can achieve greatness without effort. Hard work serves as the foundation for achieving great goals. Nothing unusual happens without it. It takes effort to become organized setting objectives coming up with a strategy to achieve them and maintaining momentum require effort.

Hardwork is the art of dedicating oneself to achieve goal through persistence, determination, discipline and patience. It involves both physical and mental effort. Take an example of garden. If you have planted a seed you can not expect flowers to bloom overnight. It takes watering care and patience. Similarly our dreams are like those seeds, hardwork is the water and care that make them grow.

Look at famous inventors, great leaders, successful business person or athletes they did not become great overnight. They practiced, they learned from mistakes and they kept going even when things were tough that's the magic of hardwork .
So always work hard and never give up on your dreams.

At last I would like to end with this quote : The harder you fall, the heavier you hurt, the heavier you hurt, the stronger you climb, the stronger you climb the higher you pedestal.

# Value of Time

- Priya H.M.

3rd B.Com

- To realize the value of one year ask a student who has failed a final exam.
- To realize the value of one month ask a mother who has given birth to a premature baby.
- To realize the value of one week ask an editor of a weekly newspaper.
- To realize the value of one day ask the person who was born on Feb 29th.
- To realize the value of one hour ask the lovers who are waiting to meet.
- To realize the value of one minute ask the person who has missed the train bus or plane.
- To realize the value of one second ask a person who has survived an accident.
- To realize the value of one milli second ask the person who has won a silver medal in the Olympics.
- Time and tide waits for none. Treasure every moment you have you will treasure it even someone special.

# Summary of Geetha

- Sahana. S

What ever has happened has happened for good.
What ever is happening is also for good.
What ever is happen shall also be good.
What have you lost that you cry for ?
What did you bring that you have last ?
What did you create that was destroyed ?
What you have taken has been from here.
What you gave has been given here.
What belongs to you today belonged to someone yesterday.
Shall belong to third person day after.
So why worry unnecessarily ?
Change is the law of universe.

# ಅಕ್ಕಮ್ಮ

- Bharath
HOD,
Sociology Dept.



ಅವಳೆಂದರೆ ಕನಸು
ಅವಳೆಂದರೆ ಕರುಣೆ
ಅವಳೆಂದರೆ ಮುದ್ದು ಮನಸು
ಅವಳೆಂದರೆ ನಗುವ ಮುಖ
ಅವಳೆಂದರೆ ಎರಡನೇ ಅಮ್ಮ
ಅವಳು ನನ್ನಕ್ಕ.

ಯಾರ್ ಇಲ್ಲದಿದ್ದರೂ ಜೊತೆಲಿರುವೆ ನೀ
ಜಗತ್ತಿನಲ್ಲೇ ಮೋಸಮಾಡದ ಜೀವ ನೀ
ನನಗೋಸ್ಕರ ಮರುಗುವ ಪ್ರಾಣ ನೀ
ತ್ಯಾಗದ ತದ್ರೂಪಿ ನೀ ನನ್ನಮ್ಮ.

ಮುನಿಸಲ್ಲೂ ಮುದ್ದುಮುಖದ ಅಕ್ಕನ ಚಂದವ ನೋಡ
ಮುನಿಸಲ್ಲೂ ಕಾಣುವ ಅಕ್ಕನ ಕಾಳಜಿಯ ನೋಡ
ನಿನ್ನ ಹುಟ್ಟು ಮನೆಗೆ ಲಕ್ಷ್ಮಿಯ ಆಗಮನ
ನಿನ್ನ ಹುಟ್ಟು ನನಗೆ ಎರಡನೇ ಅಮ್ಮನ ಆಗಮನ.

ನನ್ನುಸಿರು ನೀ
ಜೀವ ನೀಡಿ ಜನನಿಯಾದ ನೀ
ಜಗದ ಅರಿವು ನೀಡಿದ ಗುರುವು ನೀ
ಸ್ವಾರ್ಥದ ಜಗತ್ತಿನಲಿ ನಿಸ್ವಾರ್ಥ ಪ್ರೀತಿಯು ನೀ
ನನ್ನುಸಿರು ನೀ ನನ್ನುಸಿರು ನೀ.

ಮೊಗ್ಗರಳಿತಮ್ಮ ನನ್ನಕ್ಕನ ಅಂದವ ನೋಡಲು
ಮಗು ಅಳು ನಿಲ್ಲಿಸಿತ್ತಮ್ಮ ನನ್ನಕ್ಕನ ನಗುವ ಕೇಳಲು
ಕನ್ನಡಿಯೂ ನಾಚಿತು ನನ್ನಕ್ಕನ ಮುಖವ ನೋಡಲು
ಪಕ್ಷಿಗಳೂ ಸುಮ್ಮನಾದವು ನನ್ನಕ್ಕನ ಮಾತು ಕೇಳಲು
ಅಕ್ಕ ಎಂಬ ಪದವೇ ಸಾಕಮ್ಮಾ ನನ್ನ ಮೊಗದಲ್ಲಿ ಮುಗುಳ್ನಗೆ ಮೂಡಲು.

ಮುದ್ದು ಮಾತಿನ ಮಣಿಹಾರ ಇವಳು
ತುಂಟು ನಗೆಯ ಚೆಲುವು ಇವಳು
ನವವಸಂತದ ಹೂ ಮೊಗ್ಗು ಇವಳು
ಅಮ್ಮನ ಹೃದಯ ಇವಳದು
ಮಗುವಿನ ತೊಟ್ಟಿಲು ಮಡಿಲು ಇವಳದು
ನನ್ನಕ್ಕ ಕಾಣುವ ದೇವರು ಇವಳು.

# ನಾನು ಮತ್ತು ಹಕ್ಕಿ ಮರಿ



- Thanuja K.M.,
2nd year B.A.

ಹೀಗೆ ಒಂದು ದಿನ ನಾನು ನನ್ನ ಅಮ್ಮ ಇಬ್ಬರು ಕೂಡ ಆ ದಿನ ರಾತ್ರಿಯ ಊಟವನ್ನು ಮುಗಿಸಿಕೊಂಡು ಆಚೆ ಕುಳಿತಿದ್ದವು. ಒಂದು ಹಕ್ಕಿಯ ಶಬ್ದವಾಯಿತು. ನಾನು ಅಮ್ಮನಿಗೆ ಹೇಳಿದೆ "ನೋಡು ಅಮ್ಮ ಆ ಹಕ್ಕಿಯ ಚಿಲಿಪಿಲಿ ಶಬ್ದವೂ ಕಿವಿಗೆ ಕೇಳಲು ತುಂಬಾ ಮಧುರವಾಗಿದೆ" ಎಂದು ಹೇಳಿದೆ. ಅಮ್ಮನು ಅದಕ್ಕೆ ಹೌದು ಪುಟ್ಟ ಆ ಹಕ್ಕಿಗಳು ಚಿಲಿಪಿಲಿ ಎಂದು ಕೂಗಿದಾಗ ನಮ್ಮ ಮನಸ್ಸಿಗೆ ಆನಂದವೂ ಆಗುತ್ತದೆ ಎಂದು ಹೇಳಿದರು. ತದ ನಂತರ ನಾನು ಅಮ್ಮ ಸುಮಾರು ಹೊತ್ತು ಕುಳಿತು ಆಕಾಶದಲ್ಲಿನ ಹಲವಾರು ನಕ್ಷತ್ರಗಳ ಬಗ್ಗೆ ಮಾತನಾಡುತ್ತಾ ಸುಮಾರು 9 ಗಂಟೆಗೆ ಹೋಗಿ ಮನೆಯೊಳಗೆ ನಿದ್ರೆಗೆ ಜಾರಿದೆವು. ಮುಂಜಾನೆಯ ವೇಳೆ ನನಗೆ ಒಂದು ಕನಸು ಬಂದಿತು. ಅದೇನೆಂದರೆ ನಾನು ಯಾವುದೋ ಒಂದು ಪ್ರದೇಶದಲ್ಲಿ ಹೋಗಿ ಹಕ್ಕಿಗಳ ಜೊತೆ ಆಟ ಆಡುವ ರೀತಿಯಾಗಿ. ಅವುಗಳು ನನ್ನೊಡನೆ ಮಾತಾನಾಡುತ್ತಾ ಖುಷಿಯಿಂದ ನಾನು ಮತ್ತು ಹಕ್ಕಿ ಮರಿಗಳು ಇದ್ದೆವೂ ಎಂದೂ ಆಮೇಲೆ ಎದ್ದು ಸಮಯ ನೋಡಿದಾಗ ಸುಮಾರು 6–7 ಗಂಟೆ ಆಗಿರಬಹುದು. ಅಮ್ಮನಿಗೆ ಕನಸಿನ ಬಗ್ಗೆ ಹೇಳಿದೆ. ಅವರು ಅದಕ್ಕೆ ನೀನು ಆ ಹಕ್ಕಿಗಳ ಗುಂಗಿನಲ್ಲೇ ಮಲಗಿಕೊಂಡಿದ್ದೀಯಾ. ಹಾಗಾಗಿ ನಿನಗೆ ಆ ರೀತಿ ಕನಸು ಬಿದ್ದಿದೆ ಎಂದು ಹೇಳಿದರು. ಆಮೇಲೆ ನನ್ನ ಪುಟ್ಟ ತಂಗಿ ಹಿತ ಬಂದಳು. ಅಕ್ಕ ನಿಮ್ಮ ಮನೆಯ ಆಚೆ ಒಂದು ಪುಟ್ಟ ಹಕ್ಕಿಯು ಒಂದು ಗೂಡನ್ನು ಕಟ್ಟಿದೆ ನೋಡು ಬಾ ಎಂದಳು.

ನಾನು ಕುತೂಹಲದಿಂದ ಆ ಗೂಡನ್ನು ನೋಡಿದೆ. ನನಗೆ ಬಹಳ ಆಶ್ಚರ್ಯವಾಯಿತು. ಅದು ನಿಜವಾಗಿಯೂ ಎಷ್ಟು ಅಚ್ಚುಕಟ್ಟಾಗಿ ಚಿಕ್ಕ ಚಿಕ್ಕ ಕಡ್ಡಿಗಳನ್ನು ಜೋಡಿಸಿತ್ತು. ಅದನ್ನು ನೋಡಿ ನಾನು ಮತ್ತೆ ನನ್ನ ತಂಗಿ ಇಬ್ಬರು ಖುಷಿಪಟ್ಟೆವು. ಮೊದಲನೆ ದಿನ ನನ್ನ ಮನಸ್ಸಿನಲ್ಲಿ ಹಲವಾರು ಗೊಂದಲಗಳು ಮೂಡುತ್ತಾ ಬಂದವೂ. ನಾನು ಅಂದುಕೊಂಡೆ ಆ ಹಕ್ಕಿಯೂ ಈ ದೊಡ್ಡ ಪ್ರಪಂಚದಲ್ಲಿ ಅದೂ ತನಗೆ ಬೇಕಾದಂತಹ ಕಡ್ಡಿಗಳನ್ನೂ ಹುಡುಕಿಕೊಂಡು. ಅದರಲ್ಲಿ ಗಟ್ಟಿಯಾಗಿ ತನ್ನ ತೂಕವನ್ನು ತಡೆಯುವಂತಹ ಕಡ್ಡಿಯನ್ನು ಹುಡುಕಿಕೊಂಡು ತಂದು ತನಗೆ ಬೇಕಾದಂತೆ ಒಂದು ಪುಟ್ಟ ಗೂಡನ್ನು ಕಟ್ಟಿ ಕೊಳ್ಳುತ್ತದೆ. ಆ ಮೇಲೆ ನಾನು ಸಮಯವಾಯಿತು ಎಂದು ಕಾಲೇಜಿಗೆ ತೆರಳಿದೆ. ತದ ನಂತರ ಕಾಲೇಜಿನಲ್ಲಿ ಪಾಠವನ್ನೂ ಕೇಳುವುದರ ಬದಲು ಆ ಹಕ್ಕಿಯ ಗುಂಗಿನಲ್ಲೇ ಇದ್ದೆ. ಆಮೇಲೆ ನಾನು ಮನೆಗೆ ತೆರಳಿದೆ. ಬಂದ ಕೂಡಲೆ ಆ ಗೂಡಿನ ಕಡೆ ನೋಡಿದೆ. ಅಲ್ಲಿ ಒಂದು ಪುಟ್ಟ ಹಕ್ಕಿಯೂ ಬಂದು ಕುಳಿತಿತ್ತು.

ಅದನ್ನು ನೋಡಿದ ಮೇಲೆ ನಾನು ಅದರ ಛಾಯ ಚಿತ್ರವನ್ನು ತೆಗೆಯಲೆಂದು ನನ್ನ ಪೋನ್ ತೆಗೆದುಕೊಂಡು ಹೋಗಿ ಇನ್ನೇನು ಪೋಟೊ ಕ್ಲಿಕ್ ಮಾಡುವುದರೊಳಗೆ ಆ ಹಕ್ಕಿಯು ಹಾರಿ ಹೋಗುತಿತ್ತು. ಸ್ವಲ್ಪ ಹೊತ್ತು ಬಿಟ್ಟು ನಾನು ಕೊನೆಗೂ ಅದರ ಛಾಯಾಚಿತ್ರವನ್ನು ತೆಗೆದೆ. ಆ ಹಕ್ಕಿಯ ಚಿತ್ರವನ್ನು ನನ್ನ ಸ್ನೇಹಿತರಿಗೆ ತೋರಿಸಿದೆ ಅವರು ಅದನ್ನು ನೋಡಿ ಅವರವರ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ನಮ್ಮ ಮನೆಯಲ್ಲಿ ಒಂದು ತರ ಸಂಭ್ರಮ. ಆ ಹಕ್ಕಿ ಗೂಡು ಕಟ್ಟಿದಾಗಿಂದ ನಮ್ಮೆಲ್ಲರ ಮನಸ್ಸಿನಲ್ಲಿ ಒಂದಲ್ಲ ಒಂದು ತರ

ಕುತೂಹಲ ಆಲೋಚನೆಗಳು ನಮ್ಮಲ್ಲಿ ಮೂಡುತ್ತಾ ಬಂದವು. ಆ ದಿನಗಳು ಬಹಳ ಖುಷಿಯಿಂದ ಮೂಡಿಬಂದವು.

ತದ ನಂತರ ಬಂದು ಈ ಗೂಡನ್ನು ನೋಡಿದರೆ ಅಲ್ಲಿ ಒಂದು ಚಿಕ್ಕ ಮೊಟ್ಟೆಯೂ ಇತ್ತು. ನಾನು ಆ ಮೊಟ್ಟೆಯನ್ನು ಗೂಡಿನಿಂದ ಆಚೆ ತೆಗೆಯಲೆಂದು ಪ್ರಯತ್ನಿಸುವುದಕ್ಕೆ ಮುಂದಾಗಿ ನನ್ನ ತಾಯಿ ಮುಟ್ಟ ಬೇಡ ಅದು ಮತ್ತೇ ಮರಿ ಹಾಕೋಕೆ ಆಗಲ್ಲ. ಮನುಷ್ಯರು ಮುಟ್ಟಬಾರದೆಂದು ಹೇಳಿದರು. ಸರಿ ಎಂದು ಅದನ್ನು ಮುಟ್ಟದೇನೆ ನೋಡಿ ಬಹಳ ಖುಷಿಪಟ್ಟೆ.

ಹೀಗೆ ಮುಂದುವರೆದು ಪ್ರತಿದಿನ ಒಂದರಂತೆ ಮೂರು ದಿನಕ್ಕೆ ಮೂರು ಮೊಟ್ಟೆಗಳಾಗಿದ್ದವು. ನಾನು ತದ ನಂತರ ಆ ಹಕ್ಕಿಯ ಹೆಸರನ್ನು ಕಂಡು ಹಿಡಿಯಬೇಕು ಎಂದು ಹಲವಾರು ಜನರನ್ನು ಕೇಳಿದೆ. ಜಾಲಾತಾಣಗಳೆಲ್ಲೆಲ್ಲಾ ಹುಡುಕಿದೆ. ಆ ಮೇಲೆ ಆ ಹಕ್ಕಿಯ ಹೆಸರು "ಮೋಕಿಂಗ್ ಬರ್ಡ್" ಎಂದು ತಿಳಿಯಿತು. ಹೀಗೆ ಒಂದು ವಾರ ಕಳೆಯಿತು. ಆ ಮೊಟ್ಟೆಗಳು ಹೇಗೆ ಇದ್ದವೊ, ಹಾಗೆ ಇದ್ದವು. ನಾನು ಪ್ರತಿ ನಿತ್ಯ ಆ ಮೊಟ್ಟೆಗಳನ್ನು ನೋಡುತ್ತಲೇ ಬಂದೆ.

ಕೊನೆಗೆ ಎರಡು ಮರಿಗಳು ಆಚೆ ಬಂದಿದ್ದವು ಅದನ್ನು ನೋಡಿ ಆಶ್ಚರ್ಯವಾಯಿತು. ಅವು ನೋಡುವುದಕ್ಕೆ ತುಂಬಾ ಮೃದುವಾಗಿ ಇದ್ದವು. ಮಾಂಸದ ಮುದ್ದೆಯ ತರ ಇದ್ದವು. ಅವುಗಳು ಇನ್ನೂ ಕಣ್ಣು ಬಿಟ್ಟಿರಲಿಲ್ಲ ಅಂತ ಅಲ್ಲ ಅವುಗಳಿಗೆ ಕಣ್ಣು ಇದೆ ಎಂಬುದು ಅಲ್ಲಿ ನನಗೆ ಕಾಣಿಸಲಿಲ್ಲ.

ಅಲ್ಲಿ ನೋಡಿ ಏನೋ ಹೊಸತನ ಅನ್ನಿಸೋದಕ್ಕೆ ಶುರುವಾಯಿತು. ಹಕ್ಕಿಗಳು ನೋಡಿದರೆ ಮೊದ ಮೊದಲು ಅವುಗಳನ್ನೂ ಸ್ಪರ್ಶಿಸಬೇಕು ಎಂದು ಮನಸ್ಸಿಗೆ ಅನ್ನಿಸುತ್ತಿತ್ತು.

ತದನಂತರ ಅವುಗಳನ್ನೂ ನೋಡುವ ಕುತೂಹಲ ಕಡಿಮೆ ಆಯಿತು. ಕೊನೆಗೆ ಮೂರು ಮೊಟ್ಟೆಗಳು ಒಡೆದು ಮೂರು ಮರಿಗಳಾಗಿದ್ದವು. ಆ ಮರಿಗಳಿಗೆ ಆ ಪುಟ್ಟ ಗೂಡಲ್ಲಿ ಜಾಗ ಸಾಲುತ್ತಿರಲಿಲ್ಲ ಅನ್ನಿಸುತ್ತದೆ. ಆ ದೊಡ್ಡ ಹಕ್ಕಿಯು ಆಚೆ ಹೋಗಿ ಆ ಹಕ್ಕಿಗಳಿಗೆ ಆಹಾರವಾಗಿ ಚಿಕ್ಕ ಹುಳಗಳೆನೆಲ್ಲ ತೆಗೆದು ಕೊಂಡು ಬಂದು. ಆ ಚಿಕ್ಕ ಹಕ್ಕಿಗಳ ಬಾಯಿಯಲ್ಲಿ ಹಾಕುತಿತ್ತು. ಆ ಹಕ್ಕಿಗಳು ಕೂಡ ಅದು ಆಹಾರ ತಂದ ಕೂಡಲೇ ತಮ್ಮ ಬಾಯಿಯನ್ನ ತೆಗೆಯುತ್ತ ಇದ್ದವು. ಹೀಗೆ ಅಮ್ಮ ನಾನು ಕುಳಿತಿದ್ದ ಸಮಯದಲ್ಲಿ ಯಾವುದೋ ಎರಡು ಹಕ್ಕಿಗಳು ಆ ಗೂಡಿನ ಹತ್ತಿರ ಬಂದು ಚಿಲಿಪಿಲಿ ಎಂದು ಅವುಗಳ ಭಾಷೆಯಲ್ಲಿ ಕೂಗುತ್ತಿದ್ದವು. ನಾನು ನೋಡಿ ಅಮ್ಮ ಇವೆರೆಡೂ ಆ ದೊಡ್ಡ ಹಕ್ಕಿಯ ಸಂಬಂಧಿಕರು ಎರಡು ಜಗಳ ಆಡುತ್ತಾ ಇದ್ದಾವೆ ಎಂದು ಹೇಳಿದೆ. ಆ ಮೇಲೆ ಮರುದಿನ ಗೂಡಿನ ಬಳಿ ಬಂದು ನೋಡಿದರೆ ಆ ಹಕ್ಕಿಮರಿಗಳು ಇರಲಿಲ್ಲ. ಅಮ್ಮನ ಬಳಿ ಕೇಳಿದಾಗ ಅವರು ಆ ಹಕ್ಕಿಮರಿಗಳು ರೆಕ್ಕೆ ಬಂದು ಹಾರಿ ಹೋದವು ಅಂದರು. ಹಾಗೆ ನನ್ನ ಮನಸ್ಸಿನಲ್ಲಿ ಮೂಡಿ ಬಂದ ಪ್ರಶ್ನೆ ಆ ಹಕ್ಕಿಗಳ ಸಂಸಾರ ಎಷ್ಟು ಚೆನ್ನಾಗಿದೆ. ಅವುಗಳ ಭಾಷೆ ಎಲ್ಲಾ ಒಂದು ತರ ಸಂತಸದ ಮನೆ ಮಾಡಿತ್ತು ನನ್ನ ಮನದಲ್ಲಿ.

# ಜಗತ್ತಿನಲ್ಲಿ ಅನ್ನಕ್ಕಾಗಿ ಹಸಿದವರಿಗಿಂತ ಪ್ರೀತಿಗಾಗಿ ಹಸಿದವರೇ ಹೆಚ್ಚು

**Charan Raj. R**
2nd year B.A.

ಇಡೀ ಪ್ರಪಂಚದಲ್ಲಿ ಅನ್ನಕ್ಕಾಗಿ ಹಸಿದವರಿಗಿಂತ ಪ್ರೀತಿಗಾಗಿ ಹಸಿದವರೇ ಹೆಚ್ಚು. ಬಹಳ ವರ್ಷಗಳ ಹಿಂದೆ ಅನ್ನಕ್ಕಾಗಿ ಕುತ್ತು ಇದ್ದಂತಹ ಕಾಲ ಇತ್ತು. ಬಹುಶಃ ಇವತ್ತಿನ ಮಟ್ಟಿಗೆ ಅನ್ನಕ್ಕಾಗಿ ಯಾರು ಹಸಿದಿಲ್ಲವೆಂದು ಕಾಣುತ್ತದೆ, ಆದರೆ ಪ್ರೀತಿಗಾಗಿ ಕುತ್ತು ಇರುವಂತಹ ಕಾಲವಂತೂ ಹೌದು. ಇಂದಿಗೆ ಜಗತ್ತಿನಲ್ಲಿ ಹಣ ಎಂಬುದು ಆಟವಾಡುವ ಆಟಿಕೆಯಂತಾಗಿದೆ, ಇಲ್ಲಿ ಹಣ ಇದ್ದವನಿಗಿಂತ ಗುಣ ಇದ್ದವನಿಗೆ ಹೆಚ್ಚು ಬೆಲೆ ಎಂಬುದನ್ನು ಅರಿತಿದ್ದರೂ ಮನುಷ್ಯ ಹಣದ ಹಿಂದೆ ನಾಗಾಲೋಟದಲ್ಲಿ ಓಡುತ್ತಿದ್ದಾನೆ ಏಕೆ?

ಮಾನವರಲ್ಲಿ ಕೋಟಿ ಕೊಟ್ಟರೂ ಕೊಳ್ಳಲಾಗದ ಏಕೈಕ ವಸ್ತು ಯಾವುದಿದೆ ಎಂಬ ಪ್ರಶ್ನೆ ಏನಾದರೂ ಬಂದರೆ ನಾನು 'ಸಮಯ' ಎಂದು ಹೇಳುತ್ತೇನೆ. ಇದೇ ಸಮಯವನ್ನು ಬಳಸಿಕೊಂಡು ಕೆಲವರು ಸಮಯ ಸಾಧಕರಾಗುತ್ತಾರೆ. ಸಮಯಕ್ಕೂ ಅನ್ನಕ್ಕೂ ಪ್ರೀತಿಗೂ ಏನು ಸಂಬಂಧ ಎಂದು ನೀವು ಯೋಚಿಸುತ್ತಿರಬಹುದು. ಸಂಬಂಧ ಇದೆ. ಕೆಲವರು ಸಂಬಂಧಕ್ಕಾಗಿ ಸಮಯ ಕೊಡುತ್ತಾರೆ. ಇನ್ನೂ ಕೆಲವರು ಸಂಪತ್ತಿಗಾಗಿ ಸಮಯ ಕೊಡುತ್ತಾರೆ. ಇಬ್ಬರೂ ಸಮಯವನ್ನು ಬಳಸಿಕೊಳ್ಳುತ್ತಾರೆ. ಆದರೆ ಕೆಲವೇ ವ್ಯಕ್ತಿಗಳು ಮಾತ್ರ ಸಮಯವನ್ನು ಸದ್ಬಳಕೆ ಮಾಡಿಕೊಳ್ಳುತ್ತಾರೆ. ಸಮಯ ಸದ್ಬಳಕೆ ಮಾಡಿಕೊಂಡವರು ಸಾಧನೆಯ ಬಾಗಿಲ ಮುಂದೆ ನಿಲ್ಲುತ್ತಾರೆ. ಸಾಧನೆ ಕೇವಲ ಹಣ ಸಂಪಾದಿಸುವುದಲ್ಲ. ಪ್ರೀತಿ ಸಂಪಾದಿಸುವುದೇ ಸಾಧನೆ. ಜಗತ್ತಿನಲ್ಲಿ ಹಣವನ್ನು ಏಕಕಾಲದಲ್ಲಿ ಸಂಪಾದಿಸಬಹುದು. ಆದರೆ ಪ್ರೀತಿ ಸಂಪಾದಿಸುವುದು ಕಷ್ಟ. ಜಗತ್ತು ಮತ್ತೊಬ್ಬರ ಪ್ರೀತಿಗಾಗಿ ಹಂಬಲಿಸುತ್ತಿದೆ ಹೊರತು ಹಣಕ್ಕಾಗಿ ಅಲ್ಲ, ನಾವು ಪ್ರೀತಿಸುವುದನ್ನು ಕಲಿಯಬೇಕಿದೆ.

ಮನುಷ್ಯನಿಗೆ ಜಗತ್ತನ್ನೇ ಅಪ್ಪುವಾಸೆ. ಇವನಲ್ಲಿ ಪ್ರೇಮಾನುರಾಗಗಳ ಕೊರತೆಯನ್ನು ಸ್ವಲ್ಪ ಅಧಿಕವಾಗೆ ಇಟ್ಟಿದ್ದಾನೆ ಪರಮಾತ್ಮ. ಹಾಗಾಗಿ ಅದನ್ನು ಹಂಚಲು ಇವನು ತಂದೆ, ತಾಯಿ, ಅಣ್ಣ–ತಮ್ಮ, ಅಕ್ಕ–ತಂಗಿ, ಗಂಡ–ಹೆಂಡತಿ, ಮಕ್ಕಳು–ಮಿತ್ರರು, ಹೀಗೆ ಹತ್ತು ಹಲವಾರು ಸಂಬಂಧಗಳನ್ನು ಈ ಜಗತ್ತಿನೊಂದಿಗೆ ಕಲ್ಪಿಸಿಕೊಂಡು ಪ್ರೀತಿ ಪ್ರೇಮಗಳನ್ನು ಹಂಚಲು ಮಾರ್ಗಗಳನ್ನು ಕಂಡುಕೊಂಡಿದ್ದಾನೆ. ಆಸೆ ನಮ್ಮಲ್ಲಿ ಸಹಜವಾಗಿ ಹುಟ್ಟಿದರೆ ಆ ಆಸೆಯ ಪೂರೈಕೆಗೆ ಪ್ರೇಮ ಹುಟ್ಟುತ್ತದೆ,..
ಏಕೆಂದರೆ ಪ್ರೇಮದಿಂದ ಪೂರೈಸಿಕೊಳ್ಳಲಾಗದ ಆಸೆಯನ್ನು ಬಲಾತ್ಕಾರವೆನ್ನುತ್ತಾರೆ. ಈ ಜಗತ್ತಿನಲ್ಲಿರುವ ಎಲ್ಲ ಪ್ರಾಣಿಗಳಲ್ಲಿರುವ ಚೇತನವು ಒಂದೇ ಮತ್ತು ಇವುಗಳ ರೂಪಗಳಿಗೆ ಕಾರಣವಾದ ಜಗವೂ ಒಂದೇ. ಹಾಗಾಗಿ ಒಂದೇ ಮೂಲದಿಂದ ಬಂದ ಇವುಗಳು ತಮ್ಮನ್ನು ತಾವು ಸೇರುವ ಪ್ರಯತ್ನವೇ ಈ ಪ್ರೀತಿ ಪ್ರೇಮಾನುರಾಗಗಳು ಮತ್ತು ಅದನ್ನು ವ್ಯಕ್ತಪಡಿಸಲು ಅನೇಕಾನೇಕ ರೂಪಗಳು ವೈವಿಧ್ಯಮಯ ಭಾವಗಳು. ಅಷ್ಟೇ ಅಲ್ಲ, ತನ್ನ ಪ್ರೇಮವನ್ನು ತನ್ನೊಳಗೆ ಇಟ್ಟುಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಅದನ್ನು ಪರರಲ್ಲಿ ತೋರಲು ಸಾಹಸ ಮಾಡುತ್ತಾನೆ ಮತ್ತು ಇವನಿಗೆ ಇದೊಂದು ಚಟ ಎನ್ನುತ್ತಾರೆ, ಮಾನ್ಯ ಗುಂಡಪ್ಪನವರು. ಜಗತ್ತು ಇಷ್ಟೊಂದು ಪ್ರೇಮಮಯವಾಗಿದ್ದರೆ, ಒಬ್ಬರಿಗೊಬ್ಬರು ದ್ವೇಷ ಅಸೂಯೆ ಮುಂತಾದವು ಏಕೆ? ಎಂದರೆ, ನಮ್ಮ ಪ್ರೇಮ ಪ್ರೀತಿಗಳು ಸ್ವಾರ್ಥದಿಂದ ಕೂಡಿದೆ, ನಾವು ಶುದ್ಧ ಚೇತನವನ್ನಲ್ಲದೆ ಕೇವಲ ಆ ಚೇತನ ಧರಿಸಿರುವ ಬಾಹ್ಯ ರೂಪವನ್ನು ಪ್ರೀತಿಸುತ್ತೇವೆ ಎಂದು ನಾವು ಎಲ್ಲರಲ್ಲೂ ಸಮಗ್ರವಾದ ಪ್ರೀತಿ ಪ್ರೇಮಗಳನ್ನು ಬೆಳೆಸಿಕೊಳ್ಳುತ್ತೇವೋ ಅಂದು ಈ ಜಗತ್ತಿನಲ್ಲಿ ಸತ್ಯವಾದ ವಿಶ್ವ ಶಾಂತಿ ನೆಲೆಸಲು ಸಾಧ್ಯ.

ದೇವನೂರು ಮಹಾದೇವ ಅವರು ಬರೆದಿರುವ 'ಎದೆಗೆ ಬಿದ್ದ ಅಕ್ಷರ' ಎಂಬ ಪುಸ್ತಕವನ್ನು ಓದುತ್ತಿದ್ದಾಗ 'ದಯೆಗಾಗಿ ನೆಲವು ಒಣಗಿದೆ' ಎಂಬ ಶೀರ್ಷಿಕೆ ಅಡಿ ಕೃತಿಯನ್ನು ಬರೆದಿದ್ದರು. ಇಂದಿಗೂ ಭೂಮಿ ಮನುಷ್ಯರ ದಯೆಗಾಗಿ ಒಣಗಿದೆ ಎಂಬುದನ್ನು ವಿಷದಪಡಿಸುತ್ತಾ ಕೃತಿಯಲ್ಲಿ ವಿಮರ್ಶೆ ಮಾಡುತ್ತಿದ್ದರು. ಹೌದು ಇಡೀ ಪ್ರಪಂಚವೇ ಅನ್ನಕ್ಕಾಗಿ ಸಂಪಾದಿಸುತ್ತಿರುವಾಗ ಪ್ರೀತಿಗಾಗಿ ಹಸಿದವರನ್ನು ಮರೆತುಬಿಟ್ಟಿದೆ. ಇಂದಿಗೆ ಪ್ರೀತಿಗಾಗಿ ಹಸಿದ ಭೂಮಿಗೆ ಮಳೆಯಾಗಬೇಕಿದೆ.

## ಸೀಮೋಲ್ಲಂಘಿನಿ

ಕಲ್ಪಿತಲ್ತೋ ಕಾಲಮೇಘದ ನಾಟಕ
ಜಗಕೆ ಉಜ್ವಲ ಜ್ಯೋತಿ ಕಾಣದೆ
ಬೆಳಕಿಗೊಲಿದವರು ಉರಿವ ಬತ್ತಿಯ ಕರುಕ ಕಾಣರಂತೆ
ನಮ್ಮ ಶಕ್ತಿ ಭಕ್ತಿ ಯುಕ್ತಿ ಸರ್ವಸ್ವವೂ ಅವಳೇ
ಅವಳೇ ಆದಿ–ಅಂತ್ಯಳು

ಅವಳೆದುರು ಅಲ್ಪದಲ್ಲಿ ಕಲ್ಪವನ್ನು ಕಾಣಬಹುದು
ಅವಳೊಲಿದರೆ ಬಿಂದುವು ಸಿಂಧುವಾಗಬಹುದು
ಲೋಕದ ಎದುರಲ್ಲಿ ಅವಳೊಂದು ಹೆಣ್ಣು
ಪ್ರೀತಿ ಕರುಣೆ ಮಮತೆ ವಾತ್ಸಲ್ಯಕ್ಕೆ ಹೆಸರಾದವಳು
ಅವಳು ದಿಟ್ಟೆ ಅಜ್ಞಾನದಿಂದ ಅರಿವಿನೆಡೆಗೆ
ಔದಾರ್ಯತೆಯನ್ನು ಹೊತ್ತ ಸೀಮೋಲ್ಲಂಘನಿ

ಹೆಣ್ಣೆಂದರೆ ಅವಳು ಪರುಷ ಮಣಿ
ಸ್ನಿಗ್ಧ ಸ್ವರೂಪದ ಸೌಪರ್ಣಿಕಳು
ಅಂದಕಾರವ ಅಡಗಿಸಲು
ಪ್ರದೀಪ್ತಿಯಂತೆ ಪ್ರಕಾಶಮಾನವಾಗಿ ಉರಿವಳು

ಅಂಕು ಡೊಂಕುಗಳ ತಿದ್ದಲು
ಅವಳು ಸಾತ್ವಿಕ ಶಕ್ತಿ ಸ್ಫುರಿಸಿದವಳು
ಯಾರಿವಳು ಯಾರಿವಳು
ಅವಳು ಭಗವಾನ್ ಶಕ್ತಿಯ ಒಂದು ಕಿಡಿ
ಅವಳು ಶಿವನ ನಿಹಿತ ಶಕ್ತಿ
ಮಾತೆ ನಿನಗೆ ನಮೋ ನಮೋ.

– **ಚರಣ್‌ರಾಜ್**
2nd Year B.A.

## ಅಪ್ಪ

ಮರಳಿ ಬಾರದವ ನೀನು
ನಾ ಹೇಗೆ ಕರೆಯಲಿ ನಿನ್ನನ್ನು.
ಕಂಬನಿಯ ಕಾಣದವ ನೀನು
ನಾ ಹೇಗೆ ಕಾಣಲ್ಲಿ ನಿನ್ನನ್ನು.
ನಗಲು ನೋಡದವ ನೀನು
ನಾ ಹೇಗೆ ನೆನೆಯಲಿ ನಿನ್ನನ್ನು.

ಅಳಲು ಕೇಳದವ ನೀನು
ನಾ ಹೇಗೆ ಕೂಗಲಿ ನಿನ್ನನ್ನು.
ಬಾರದ ವಿಳಾಸದವ ನೀನು
ನಾ ಹೇಗೆ ಹುಡುಕಲಿ ನಿನ್ನನ್ನು.
ಹೇಳದೆ ಹೋದವ ನೀನು
ನಾ ಯಾರಿಗೇಳಲಿ ನನ್ನ ನೋವನ್ನು.
ಮರೆಯಲಾಗದ ಮಾಣಿಕ್ಯ
ನನ್ನ ಅಪ್ಪ.

ನಿನ್ನ ನೆನಪಲ್ಲಿ ಕುಳಿತಿರುವೆ
ನೀ ಜೊತೆ ಇದ್ದ ಕ್ಷಣಗಳ
ನೆನೆಯುತಿರುವೆ.

ತುಸು ನಕ್ಕು ಅಳುತಿರುವೆ
ನೀ ಬರುವ ದಾರಿಯ
ಕಾಯುತಿರುವೆ.

ಕೂಗಿ ಕೂಗಿ ಕರೆಯುತಿರುವೆ
ನೀ ಬರುವುದಿಲ್ಲ ಎಂಬುದು
ಮರೆತಿರುವೆ.

– **ಪೂರ್ವಿಕ**
3rd B.Com.

# ಪ್ರೀತಿಯ ಹುಡುಕಾಟದಲ್ಲಿ



– ಕಾವ್ಯ ಆರ್.ಆರ್.
3rd B.Com

ಒಂದು ದಿನ ಒಬ್ಬ ವ್ಯಕ್ತಿ ಸಮುದ್ರ ರಾಜನನ್ನು ಕೇಳುತ್ತಾನೆ. ನೀನು ಮಳೆಗಾಲದಲ್ಲಿ ಅಷ್ಟೊಂದು ಭೋರ್ಗರೆಯುವಂತಹ ನದಿಗಳಿಂದ ಮೈದುಂಬಿಕೊಳ್ಳುತ್ತಿಯಲ್ಲ ಮತ್ತೆ ಬೇಸಿಗೆಯಲ್ಲಿ ಅಷ್ಟೊಂದು ನೀರು ಅವಿಯಾಗಿ ಹೋಗುತ್ತಲ್ಲ. ನಿನ್ನಲ್ಲಿರುವಂತ ನೀರು ಒಂದು ಸ್ವಲ್ಪನು ಏರಲಿಲ್ಲ ಒಂದು ಸ್ವಲ್ಪನು ಕುಂದಿಲ್ವಲ್ಲ. ನಿನ್ನಲ್ಲಿ ಅದಾವ ಶಕ್ತಿ ಇದೆ ಅಂತ ಕೇಳುದ್ನಂತೆ. ಸಮುದ್ರರಾಜ ಹೇಳಿದ್ನಂತೆ; ಒಬ್ಬಳು ತಾಯಿ ತನ್ನ ಮಕ್ಕಳಿಗೆ ಎಷ್ಟೊಂದು ಪ್ರೀತಿ ಕೊಡುತ್ತಾಳೆ. ಯಾವತ್ತಾದರೂ ಅವಳ ಪ್ರೀತಿ ಒಂದು ಚೂರಾದ್ರೂ ಕಡಿಮೆ ಆಯ್ತಾ . ಯಾವ ಕಾರಣಕ್ಕೂ ಕಡಿಮೆಯಾಗಿಲ್ಲ. ಅದೇ ತರ ನಾನೂನು. ನಾನು ಎಷ್ಟೇ ನೀರು ಅವಿಯಾಗಿ ಕೊಟ್ರೂ ನನ್ನಲ್ಲಿ ಇರುವಂತಹ ನೀರು ಒಂದು ಸ್ವಲ್ಪನೂ ಕಡಿಮೆ ಆಗುವುದಿಲ್ಲ. ನಾನು ಎಷ್ಟು ನೀರನ್ನ ದಾನವಾಗಿ ಕೊಡ್ತೀನಿ, ಅಷ್ಟು ನೀರು ನನ್ನ ಹತ್ತಿರ ಭೋರ್ಗರೆದು ತಾನಾಗಿಯೇ ಬರುತ್ತದೆ ಅಂತಾ ಸಮುದ್ರ ರಾಜ ಹೇಳುದ್ನಂತೆ. ಅದೇ ರೀತಿ ಜೀವನ ಒಂದು ಕನ್ನಡಿ ಇದ್ದಂಗೆ. ನಾವು ಆ ಕನ್ನಡಿಗೆ ಪ್ರೀತಿ ಕೊಟ್ಟರೆ ಆ ಕನ್ನಡಿ ನಮಗೆ ಮತ್ತೆ ಪ್ರೀತಿನ ವಾಪಸ್ ಕೊಡುತ್ತೆ. ನಾವು ಕನ್ನಡಿಗೆ ದ್ವೇಷದಿಂದ ನೋಡಿದರೆ ಅದೇ ದ್ವೇಷ ನಮಗೆ ಕನ್ನಡಿಲಿ ಪ್ರತಿಬಿಂಬವಾಗಿ ಕಾಣುತ್ತೆ. ಪ್ರಪಂಚಕ್ಕೆ ನಾನು ಏನು ಕೊಡ್ತೀನಿ, ಪ್ರಪಂಚ ನನಗೆ ಅದನ್ನೇ ವಾಪಸ್ ಕೊಡುತ್ತೆ. ಅದೇ ರೀತಿ ತಾಯಿನೂ, ಯಾರಂದರೆ ಅವರಿಗೆಲ್ಲರಿಗೂ ತನ್ನ ಒಡಲಲ್ಲಿರುವ ಪ್ರೀತಿನಾ ಸೇರಲ್ಲಿ ಬಾಚಿ ಬಾಚಿ ಕೊಟ್ತಾಳೆ. ಅಷ್ಟೇ ಪ್ರೀತಿ ನಾವು ನಮ್ಮ ತಾಯಿಗೆ ಕೊಡ್ತೀವಿ. ಹೌದು ಪ್ರಪಂಚ ಇರೋದೇ ಹೀಗೆ. ನಾವು ಪ್ರಪಂಚಕ್ಕೆ ಏನು ಕೊಡ್ತೀವೋ ಈ ಜಗತ್ತು ನಮಗೆ ಅದನ್ನೇ ವಾಪಸ್ ಕೊಡುತ್ತೆ. ಎಲ್ಲರೂ ಎಲ್ಲರನ್ನೂ ಪ್ರೀತಿ ಮಾಡೋಣ, ನಿಮ್ಮನ್ನು ಸಹ ಎಲ್ಲರೂ ಪ್ರೀತಿ ಮಾಡುತ್ತಾರೆ.

# ದೇವರಿಗೆ ಪ್ರಶ್ನೆ :

– ಪ್ರೀತಿ ಎಸ್.ಆರ್.
2nd M.com

ತಿಳಿಯದೆ ಭೂಮಿಗೆ ಬಂದೆ – ಹೇ ದೇವ
ನನ್ನ ಕೂಗು ನಿನಗೆ ಕೇಳಿಸದೆ – ಹೇ ದೇವ
ಹುಟ್ಟಿದ ತಕ್ಷಣ ಬೇಡವಾದೆ – ಹೇ ದೇವ
ಈ ಬದುಕ ಬಯಸದೆ ಭೂಮಿಗೆ ಬಂದೆ – ಹೇ ದೇವ
ಕರುಳ ಬಳ್ಳಿಗೂ ನಾ ಬೇಡವಾದೆ – ಹೇ ದೇವ
ಕುರುಡಾದ ಜಗಕ್ಕೆ ನನ್ನ ಕಣ್ಣೀರು ಕಾಣಿಸದೆ – ಹೇ ದೇವ
ಕೂಗಿದರೂ ಕೇಳದಾಗಿದೆ – ಹೇ ದೇವ
ಹುಟ್ಟಿದ ತಪ್ಪಿಗೆ ಕಣ್ಣೀರು ಕೊನೆಯಾಗಿದೆ – ಹೇ ದೇವ
ಕುರುಡು ಪ್ರೀತಿ ಬೆನ್ನತ್ತಿದೆ – ಹೇ ದೇವ
ಸ್ವಾರ್ಥಕೂ ನಾ ಸವಾಲಾಗಿ ನಿಂತಿರುವೆ – ಹೇ ದೇವ
ನಾ ಮಾಡಿದ ತಪ್ಪೇನು– ಹೇ ದೇವ
ಹೆಣ್ಣಿನ ಕೂಗೂ ಕಲ್ಲಿಗೂ ಕೇಳಿಸುವುದೆ – ಹೇ ದೇವ

# ಚುಟುಕು ಕವನಗಳು



**– ಚಂದನ ಕೆ.ಆರ್.**
3rd B.Com, A Section

**ನಗುವಿನ ಸದ್ದು:**

ನಗು ಅತ್ಯುತ್ತಮ ವೈದ್ಯ
ಕೇವಲ ಒಂದು ನಗು ಪರಿಹರಿಸುತ್ತವೆ
ಅನೇಕ ಅಡೆತಡೆಗಳನ್ನು.
ನಗುತ್ತಿರಿ ಇತರರನ್ನು ಸಹ
ನಗುವಂತೆ ಮಾಡಿ
ಮತ್ತು ಈ ನಗುವಿನಿಂದ ಜಗತ್ತನ್ನೆ ಬೆಳಗಿರಿ.

**ಸ್ಫೂರ್ತಿದಾಯಕ ಕವನ :**

ಜೀವನದಲ್ಲಿ ಸೋತವನು ನಾನು
ಬೇಕಿಲ್ಲ ನನಗೆ ಯಾರ ಹಂಗೇನು
ಸುಮ್ಮನೆ ಹರಿಯುವ ನದಿಯು ನಾನಲ್ಲ
ಸಾಗರ ಸೇರುವುದರಲ್ಲಿ ಹೊಸತೇನು ?

ನನಗಾಗಿ ಮಿಡಿಯುತಿಹ ಹೃದಯವು ಸಾಕು
ಕಷ್ಟದ ಜೀವಕೆ ಇನ್ನೇನು ಬೇಕು ?
ಸೂರ್ಯನನ್ನೇ ಆವರಿಸುವ ಕೂಳಗ್ರಹಣ
ಬಿಡಿಸುವುದೇನು ಭೂಮಿಯೊಂದಿಗಿನ ಬಂಧನ ?

ಗೆಲ್ಲುವೆ ನಾನೂ ಒಂದು ದಿನ
ಜೀವನದಲ್ಲಿ ಬಂದೇ ಬರುವುದು ಹೊಸತನ
ನಡುವೆ ಸಾಗುತಿಹ ಪ್ರೀತಿಯ ಮಂದಹಾಸ
ಸ್ಫೂರ್ತಿಯ ಸೆಲೆಯೊಂದಿಗೆ ಹೊಸ ಸಾಹಸ.

**ವಿದ್ಯಾದೇಗುಲ :**

ಜ್ಞಾನದ ದೇವಿಗೆಯು ಕಂಗೊಳಿಸುತ್ತಿರಲು
ಕೈ ಬೀಸಿತು ಬೆಳಕು ತನ್ನಯ ಹೊಸಲಿಗೆ ಬರಲು
ಶಿರವ ತಗ್ಗಿಸಿ ಕರವ ಜೋಡಿಸಿ ಜ್ಞಾನವ ಅರಸಿ
ಬಂದ ಯಾತ್ರಿಕರು ನಾವು !

ನೂರಾರು ಕನಸಿನ ಪುಸ್ತಕವ ಹೆಗಲೇರಿಸಿ
ಆತ್ಮವಿಶ್ವಾಸದ ಸಮವಸ್ತ್ರ ಧರಿಸಿ
ನವಗೆಳೆತನದ ಜಡೆಯ ಹೆಣೆಸಿ
ಹೊಸದೊಂದು ಚೇತನದೊಂದಿಗೆ ಪುಟ್ಟ ನಗುವಿನೊಂದಿಗೆ
ಜ್ಞಾನವ ಅರಸಿ ಬಂದ ಯಾತ್ರಿಕರು ನಾವು !

ಗೆಳೆತನದ ಉಯ್ಯಾಲೆಯಲಿ ತೇಲಾಡಿ
ಸಾವಿರ ನೆನಪಿನ ಗೋಪುರ ಕಟ್ಟಿಸಿ
ತುಸು ಮುನಿಸಿನ ಮೊಗವ ಅರಳಿಸಿ
ಮತ್ತದೇ ಸಿಹಿ ನಿರೀಕ್ಷೆಯೊಂದಿಗೆ ಕಣ್ಣಂಚಿನ ಕಣ್ಣೀರಿನೊಂದಿಗೆ
ನೆನಪುಗಳ ಹೊತ್ತು ತಂದ ಯಾತ್ರಿಕರು ನಾವು

ವಿದ್ಯೆಯ ಧಾರೆಯೆರೆದ ಶಿಕ್ಷಕರ ನೆನೆದು
ಜೊತೆ ಜೊತೆಯೊದ ಸಹಪಾಠಿಗಳ ವಂದಿಸಿ
ನೆನಪುಗಳ ಹೊತ್ತು ತಂದ ಯಾತ್ರಿಕರು ನಾವು !

ಪಲ್ಲಾಗಟ್ಟೆ ಅಡವಪ್ಪ ಪ್ರಥಮ ದರ್ಜೆ ಕಲಾ ಮತ್ತು
ವಾಣಿಜ್ಯ ವಿಭಾಗ, ಕಾಲೇಜು ಕಲಿಸಿದ ವಿದ್ಯಾಲಯಕ್ಕೆ
ಎಂದೆಂದೂ ಚಿರಋಣಿ ನಾ.

# ಕವನಗಳು



– ಬಿಂದು ಸಿ.ಎಸ್.
3rd B.Com.

## ' ಅಮ್ಮ '

ಪದಗಳಿಗೆ ನಿಲುಕದ ಒಂದು
ಅನುಭವ ಪ್ರೀತಿ ಮಮತೆ
ಜಗತ್ತಿನಲ್ಲಿಯೇ ಒಂದು ಸುಂದರ
ಭಾವನಾತ್ಮಕ ಪ್ರೀತಿ ನೀನು ಅಮ್ಮ.

ಎಂದೂ ಮಾಸದ ಪ್ರೀತಿ
ಎಷ್ಟೇ ನೋವಿದ್ದರೂ ನಿನ್ನವರಿಗಾಗಿ
ನೀನು ಸಹ ನಗುವೆ ಎಲ್ಲರನ್ನೂ ನಗಿಸುವೆ
ಅಮ್ಮ ನಿನಗೆ ನೀನೇ ಸಾಟಿ.
ಚಿಕ್ಕಂದಿನಿಂದ ನೀನು ನಿನ್ನ ಮಕ್ಕಳನ್ನು
ಮುದ್ದಿಸಿದೆ ಪ್ರೀತಿಸಿದೆ ಸಂತೈಸಿದೆ
ಅದೇ ಮಕ್ಕಳು ನಿನ್ನನ್ನು ಮನೆಯಿಂದ
ಆಚೆ ಹಾಕಿದಾಗಲೂ ಕೂಡ ನೀನು
ಅವರನ್ನು ಕ್ಷಮಿಸಿ ಹಾರೈಸಿದೆ
ನಿನ್ನ ಈ ಪ್ರೀತಿಗೆ ನೀನೇ ಸಾಟಿ.

ನೀನು ವಿದ್ಯಾವಂತಳಲ್ಲ ಓದಿಲ್ಲ
ಬರೆದಿಲ್ಲ ಶಾಲೆಗೂ ಹೋಗಿಲ್ಲ ಆದರೆ
ನೀನು ಕಲಿಸಿದ ಪಾಠ ಸಂಸ್ಕಾರ
ಯಾವ ಶಾಲೆಯಲ್ಲೂ ಯಾವ ಗುರುಗಳೂ
ಕಲಿಸಿಲ್ಲ ಅಮ್ಮ ನಿನಗೆ ನೀನೇ ಸಾಟಿ.

ನಿನ್ನವರಿಗೆ ಹುಷಾರಿಲ್ಲದೆ ಇದ್ದಾಗ
ನೀನು ನೀಡಿದ ಚಿಕಿತ್ಸೆ ಯಾವ
ವೈದ್ಯರೂ ವೈದ್ಯ ಶಾಲೆಯ ನೀಡಿದ
ಚಿಕಿತ್ಸೆ ನಿನಗೆ ನೀನೇ ಸಾಟಿ.

ನಿನ್ನವರಿಗಾಗಿ ನೀನು ಹಗಲು ಇರಳು
ದುಡಿದೆ ಯಾವುದೇ ಶುಲ್ಕ ನಿರೀಕ್ಷಿಸದೆ
ನೀನು ನಿನ್ನ ಜೀವನ ನಡೆಸಿದೆ
ನಿನಗೆ ನೀನೇ ಸಾಟಿ.

ಮುಂದಿನ ಜನ್ಮ ಇದ್ದರೆ ನಿನ್ನ
ಅಮ್ಮನಾಗಿಯೇ ಜನಿಸಿ ನಿನ್ನನ್ನು
ಸಲಹುವೆ ಪ್ರೀತಿಸುವೆ ಮುದ್ದಿಸುವೆ
ಅಮ್ಮ ...



– ಪೂರ್ವಿಕ ಎನ್.ಪಿ.
3rd B.Com.

## ' ಹೆಣ್ಣು '

ಹೆಣ್ಣಿಗೆ ರಕ್ಷಣೆ ಇಲ್ಲದ ನಾಡಿನಲ್ಲಿ
ಹೆಣ್ಣನ್ನೇ ಪೂಜಿಸುವರು.
ನಾಡಿನ ಸಂಸ್ಕೃತಿ ಕೀರ್ತಿ ಜ್ಯೋತಿ
ಹೀಗೆ ಸುಮ್ಮನೆ ಹೊಗಳುವರು.

ಹೆತ್ತ ತಾಯಿ ಅಕ್ಕ ತಂಗಿ ಎಲ್ಲರ
ಮರೆತು ಅತ್ಯಾಚಾರ ಮಾಡುವರು.
ಪುಟ್ಟ ಪುಟ್ಟ ಜೀವಗಳ ಕ್ರೂರವಾಗಿ

ಬಲಿದಾನ ಮಾಡುತಿಹರು.
ರಾಜಕಾರಣಿಗಳು ಇದನ್ನು ನೋಡುತ್ತಾ
ಸುಮ್ಮನೆ ಕುಳಿತಿಹರು.
ಮಾಡಿದ ತಪ್ಪಿಗೆ ಶಿಕ್ಷೆಯ ನೀಡದೆ

ಊಟವೆಂಬ ಭಿಕ್ಷೆಯ ಹಾಕಿ
ಜೈಲಿನಲ್ಲಿ ರಕ್ಷಣೆ ನೀಡುವರು.
ಮುಗ್ದ ಜೀವಗಳಿಗೆ ಸಿಗಲಿ ರಕ್ಷೆ
ಆಗಲಿ ಪಾಪಿಗಳಿಗೆ ಜೀವಾವಧಿ ಶಿಕ್ಷೆ!

# ಹದ್ದು 70 ವರ್ಷಗಳು ಬದುಕ ಬಲ್ಲ ರಹಸ್ಯ



– ವೀಣ ಹೆಚ್.ಪಿ.
2nd M.Com.

ಹದ್ದು 70 ವರ್ಷಗಳವರೆಗೆ ಬದುಕಬಲ್ಲದು. ಆದರೆ ಈ ವಯಸ್ಸನ್ನು ಅದು ಕಠಿಣ ನಿರ್ಧಾರ ತೆಗೆದುಕೊಳ್ಳಬೇಕು. 40 ವರ್ಷಗಳ ನಂತರ ಹದ್ದಿನ ರೆಕ್ಕೆಗಳು ಅತಿ ಉದ್ದವಾಗಿ ಬೆಳೆಯುವುದರಿಂದ ಭಾರವಾಗಿ ತುಂಬಾ ದೂರ ಹಾರಲು ಆಗದೆ ಆಹಾರ ಬೇಟೆಗೆ ಅಡ್ಡಿಯಾಗುತ್ತವೆ. ಹದ್ದಿನ ಉದ್ದನೆ ಕೊಕ್ಕು ಬಾಗುತ್ತ ಹೊಗುತ್ತದೆ. ಇಂತಹ ಸ್ಥಿತಿಯಲ್ಲಿ ಹದ್ದಿಗೆ ಉಳಿಯುವುದು 2 ದಾರಿ ...

ಒಂದು: ಅದು ತನ್ನ 30–40 ವರ್ಷದಲ್ಲಿ ಆಹಾರವಿಲ್ಲದೆ ಸಾಯುವುದು. ಇನ್ನೊಂದು ನಮ್ಮ ಊಹೆಗೂ ಮೀರಿದ ಕಠಿಣವಾದ ನಿರ್ಧಾರ ತೆಗೆದುಕೊಳ್ಳುವುದು. ಆ ಕಠಿಣ ನಿರ್ಧಾರವೇ ಹದ್ದು ಒಂದು ದೊಡ್ಡ ಬೆಟ್ಟದ ತುತ್ತ ತುದಿಗೆ ಹೋಗಿ ಗೂಡು ಹುಡುಕಿಕೊಂಡು ಕೂತು ಪ್ರತಿ ನಿತ್ಯ ತನ್ನ ಕೊಕ್ಕನ್ನು ಬಂಡೆಗೆ ಕುಕ್ಕಿ ಕುಕ್ಕಿ ಬಾಗಿದ ಕೊಕ್ಕನ್ನು ಮುರಿದು ಹೊಸ ಕೊಕ್ಕು ಬೆಳೆಯುವವರೆಗು ಕಾದು & ಅದರ ಕಾಲಿನ ಬೆರೆಳುಗಳನ್ನು ಕಲ್ಲಿಗೆ ಕುಕ್ಕಿ ಮುರಿದುಕೊಂಡು ಹೊಸ ಉಗುರು ಬೆಳೆದ ನಂತರ ತನ್ನ ಉದ್ದನೆ, ಭಾರವಾದ ರೆಕ್ಕಗಳ ಪುಕ್ಕಗಳನ್ನು ಕಿತ್ತು ಹಾಕಿ ಹೊಸ ಪುಕ್ಕಗಳು ಬೆಳೆಯುವವರೆಗು ಕಾಯುತ್ತದೆ ಈ ಎಲ್ಲಾ ಪ್ರಕ್ರಿಯೆ ಮುಗಿಯಲು 140 ದಿನಗಳ ಕಾಲ ಹದ್ದು ಎಲ್ಲಾ ರೀತಿಯ ನೋವುಗಳನ್ನು ಸಹಿಸಿಕೊಂಡು ತನ್ನ ಪುನರ್ಜನ್ಮದ ಹಾರಾಟವನ್ನು ಶುರುಮಾಡಿ ಮುಂದಿನ 30 ವರ್ಷಗಳ ಕಾಲ ಜೀವಿಸುತ್ತದೆ.

ನಮ್ಮ ಜೀವನದಲ್ಲಿ ಹಲವು ಕಷ್ಟಗಳು ಎದುರಾಗುತ್ತವೆ ಆತ್ಮ ಸ್ಥೈರ್ಯದಿಂದ ಎಲ್ಲವನ್ನೂ ಸಹಿಸಿಕೊಂಡು ಹೊಸ ಜೀವನ ರೂಪಿಸಿಕೊಳ್ಳುವುದು ನಮ್ಮ ಕೈಯಲ್ಲಿ ಇದೆ. ಇದಕ್ಕೆ ಹದ್ದಿನ ಈ ಜೀವನವೆ ಸಾಕ್ಷಿ. ಇಂದೇ ನಿಮ್ಮ ನಕರಾತ್ಮಕ ಯೋಚನೆಗಳನ್ನು ಬದಲಾಯಿಸಿಕೊಳ್ಳಿ. ಹದ್ದಿನಂತೆ ಪುನರ್ಜನ್ಮ ಪಡೆದು ಹಾರುವುದನ್ನು ಕಲಿಯಿರಿ.

ಹಿಡಿದರೆ ನೀ ಪುಸ್ತಕ
ಬೇಕಿಲ್ಲ ಇನ್ನೊಬ್ಬ ಒಳ್ಳೆ ಸ್ನೇಹಿತ
ಕಳೆದುಕೊಂಡರು ನಿನ್ನ ಸಂಪತ್ತ
ಕೈ ಬಿಡದು ನೀ ಕಲಿತ ಪುಸಕ್ತ.
ನೀ ಹುಟ್ಟಿದ ದಿನವು ಅಳುವೇ
ನೀ ಸಾಯುವ ದಿನವು ಅಳುವೇ
ನೀನಿರುವ ದಿನವು ಕೆಲವೇ
ನಗುವುದ ಕಲಿತರೆ ಮನವೇ
ನೀ ಚಿಂತೆಯ ತೊರೆಯುವೇ.

– ಕಾವ್ಯ ಎಂ.
2nd M.Com



# ನನ್ನ ಅಮ್ಮ

– ನಾಗವೇಣಿ ಬಿ.ಎಂ.
1st year , M.Com



ಸ್ವಾರ್ಥದ ಬದುಕಿನಲ್ಲಿ
ನಿಸ್ವಾರ್ಥಿಯಾಗಿ ಬದುಕಿದ ನನ್ನಮ್ಮ !
ಬದುಕಿನುದ್ದಕ್ಕೂ ಸ್ವಾರ್ಥಹೀನವಾಗಿ
ತನ್ನ ಮಗುವಿನ ಬಗ್ಗೆ ಯೋಚಿಸಿದ ನನ್ನಮ್ಮ !
ಮಗುವಿಗೆ ಸಣ್ಣ ಕಥೆಯನ್ನು ಹೇಳುತ್ತಾ
ತನ್ನ ಜೀವನದ ದೊಡ್ಡ ಕಥೆಯನ್ನು ಮುಗಿಸಿದ ನನ್ನಮ್ಮ!
ಕಳೆದುಕೊಂಡಿದ್ದೇ ಎಲ್ಲಾ
ಪಡೆದುಕೊಂಡಿದ್ದೇನಿಲ್ಲಾ ತನ್ನ ಜೀವನದಲ್ಲಿ ನನ್ನಮ್ಮ !
ಹಾರಿಹೋದ ಹಕ್ಕಿ
ಗೂಡು ಸೇರುವ ತನಕ ಕಾಯುವ ನನ್ನಮ್ಮ !
ತನಗಿಲ್ಲದಿದ್ದರೂ
ತನ್ನವರಿಗಾಗಿ ಬದುಕುವ ನನ್ನಮ್ಮ!
ಸ್ವಾರ್ಥದಿಂದ ಎಲ್ಲವನ್ನು ಕೊಂಡುಕೊಳ್ಳುವ ಜಗತ್ತಿನಲ್ಲಿ
ತನ್ನ ಮಗುವಿಗಾಗಿ ಕೊಂಡುಕೊಳ್ಳುವ ನನ್ನಮ್ಮ !
ಹೇಳು ತನ್ನಮ್ಮನಿಗೆ ಸರಿಸಾಟಿ ಯಾರು ..?
ಹೇಳು ತನ್ನಮ್ಮನಿಗೆ ಸರಿಸಾಟಿ ಯಾರು ..?
ಇಲ್ಲಿಯವರೆಗೂ ಉತ್ತರ ನೀಡಲು ಆಗಿಲ್ಲಾ
ಯಾವ ತಂತ್ರಜ್ಞಾನಿಯ ಕೈಯಲ್ಲೂ ..

ಕಾಣದ ಕಡಲಲ್ಲಿ ಕಂಡೆ ನಾನವಳ
ಆ ಕಡಲ ತೀರದ ಕುಂತವಳ
ಆ ಕಡಲಲ್ಲಿ ನಿಂತು ಕೇಳಿದೆನು
ನೀ ನನ್ನವಳ.
ನನ್ನವಳೇ ಅವಳು
ಕನಸಲ್ಲಿ ಬಂದು ಕಾಡುವಳು
ಕಣ್ಣು ಬಿಟ್ಟರೆ ಕಾಣದವಳು
ನನ್ನಲ್ಲಿಯೇ ನೆಲೆಸಿದಳು
ನನ್ನ ಹೃದಯದ ದೇವತೆ ಇವಳು
ನನ್ನವಳು.



– ಸಾಯೀಶ್ ಎಸ್.ಹೆಚ್.
3rd B.com

# ಕವನಗಳು

## ಹಾರುವುದಕ್ಕೆ ಶುರು ಮಾಡಿ



ನೀವು ಕೆಳಗೆ ಬಿದ್ದು ನೋಡಿ
ನಿಮ್ಮನ್ನು ಎತ್ತಲು
ಯಾರು ಬರುವುದಿಲ್ಲ !
ನೀವು ಸ್ವಲ್ಪ ಹಾರುವುದಕ್ಕೆ
ಶುರು ಮಾಡಿ
ನಿಮ್ಮನ್ನು ಬಳಸುವುದಕ್ಕೆ
ಕಾಯುತ್ತಿರುತ್ತಾರೆ
ಏನೇ ಆಗಲಿ ನೀವು ಮಾತ್ರ
ಧೃತಿಗೆಡಬೇಡಿ.
ಯಾವಾಗಲು ನಗು ನಗುತಾ ಇರೋಣ
ಕಷ್ಟ ಬಂದಾಗ ಒಬ್ಬರನ್ನು
ಹಂಗಿಸುವುದು, ಸುಖ ಬಂದಿದೆ ಎಂದು
ಹಿಗ್ಗಿ ಮತ್ತೊಬ್ಬರನ್ನು ಕೇವಲವಾಗಿ
ಕಾಣವುದು ಬೇಡ. ಭಗವಂತ ನಮಗೆ
ಎಲ್ಲಾ ಕೊಟ್ಟು ಪರೀಕ್ಷೆ ಮಾಡಬಹುದು ಅಲ್ವಾ ..

-Nisarga B.S.
3rd B.Com.

## ನನ್ನ ಅಣ್ಣ :



ಅಣ್ಣ ನೀ ನನ್ನ ಜೀವನದ ಬಣ್ಣ
ಅಣ್ಣ ನೀ ನನ್ನ ಜೀವನದ ಗೆಳೆಯ

ನಿನ್ನ ಮಾತಿನಲ್ಲಿ ಕೋಪ ಇರುತಿತ್ತು
ಆದರೆ ಅದರ ಹಿಂದೆ ನನ್ನ ಮೇಲಿರುವ ಕಾಳಜಿ ತೋರುತಿತ್ತು.
ನನ್ನ ಬಾಲ್ಯ ಬಹು ಸುಂದರವಾಗಿತ್ತು
ಅದಕ್ಕೆ ಕಾರಣ ನೀನೆ ಎಂದು ತಿಳಿದಿತ್ತು .
ನೀನು ಕೊಡುವ ಕೈ ತುತ್ತು.
ಅಮ್ಮ ಕೊಡುವ ತುತ್ತಿನಷ್ಟೇ ರುಚಿಯಾಗಿರುತಿತ್ತು
ನೀನು ತೋರುವ ಪ್ರೀತಿ
ಅಪ್ಪನ ಪ್ರೀತಿಗಿಂತಲು ಮಿಗಿಲಾಗಿತ್ತು .
ನಿನ್ನ ಪ್ರೀತಿಯಲ್ಲಿ ಒಂದಿಷ್ಟು ಕಡಿಮೆ ಮಾಡದೆ
ನನ್ನ ಸರಿ ತಪ್ಪುಗಳನ್ನು ತಿದ್ದಿದೆ.
ಆದರೆ ನೀ ನನ್ನ ಬಿಟ್ಟು ಬಹು ದೂರ ಹೋಗಿದ್ದೆ
ಆದರೆ ನಾನು ನಿನಗಾಗಿ ಕಾದಿದ್ದೆ... ಕಾಯುತ್ತಿರುವೆ...

-Amrutha G.R.
2nd B.com

## ಪ್ರಕೃತಿ

ಪ್ರಕೃತಿ ಎಂದರೆ ಹಸಿರು
ಹಸಿರೆಂದರೆ ಉಸಿರು
ಹಸಿರಿಲ್ಲದೆ ಉಸಿರಿಲ್ಲ
ಉಸಿರಿಲ್ಲದೆ ನಾವಿಲ್ಲ .

## ಶಾಲೆ

ಶಾಲೆ ಎಂದರೆ ದೇವಾಲಯದಂತೆ
ಗುರು ಎಂದರೆ ದೇವರಿದಂತೆ
ಪುಸ್ತಕ ಎಂದರೆ ಜ್ಞಾನ ಬಂಡಾರದಂತೆ
ವಿದ್ಯೆ ಎಂಬುದು ಸಾಗರದಂತೆ
ಅದಕ್ಕೆ ಕೊನೆಯ ಇಲ್ಲವಂತೆ .

## ಹೇ ಗುಲಾಬಿಯೇ :

ಹೇ ಗುಲಾಬಿಯೇ
ನೀ ಎಷ್ಟು ಸುಂದರ
ಆದರೆ ನಿನ್ನ ಮುಳ್ಳುಗಳೇ
ನಿನಗೆ ಆಧಾರ
ಮುಡಿದವ ಮುಡಿಯಲ್ಲಿ
ನಿನ್ನ ಶೃಂಗಾರ .

ಸ್ವಚ್ಛತೆಗೆ ಆದ್ಯತೆ ನೀಡಿದವ
ಗಾಂಧೀಜಿಯ ಕನಸು ನನಸಾಗಿಸಿದವ
ಮಹಿಳೆಯರಿಗೆ ಉಜ್ವಲ ನೀಡಿದವ
ಕೊರೋನವೆಂಬ ಮಹಾಮಾರಿ ನಿಗ್ರಹಿಸಿದವ
ಕಳ್ಳ-ಕಾಕರ ಹೊನ್ನ ಹೊರತೆಗೆದವ
ಎನ್ನ ಭಾರತದ ಹೆಮ್ಮೆ ಅದ
ಅವರೇ ನಮ್ಮ ಮೋದಿಜಿ.

- Shilpa M.S.,
2nd B.A.

# ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

## ಬಿ.ಎ. ಮೊದಲ ಸೆಮಿಸ್ಟರ್



ಮೋಹನ್‌ಕುಮಾರ್ ಆರ್.
86 %



ಕೀರ್ತನ ಕೆ.
80.5 %



ತನುಜ ಹೆಚ್.
79 %



ರಾಘವೇಂದ್ರ
75 %



ಸೋನು ಟಿ.ಎಸ್.
75 %



ರಘು
75 %



ಸ್ಫೂರ್ತಿ ಆರ್
73 %



ದೀಪಿಕಾ ಹೆಚ್.ಎಸ್.
73 %



ಪುನೀತ್ ಜಿ.ಆರ್.
72 %



ಪ್ರವೀಣ್‌ಕುಮಾರ್
72 %



ಮನು ಕೆ.ಎಲ್.
71 %



ಶ್ರೀಲಕ್ಷ್ಮಿ ಪಿ.ಆರ್.
70 %



ವಿಶ್ವಾಸ್ ಕೆ.ಎನ್.
70 %

# ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

## ಬಿ.ಎ. ತೃತೀಯ ಸೆಮಿಸ್ಟರ್



ಚಂದನ ಎಸ್..
90.2 %



ಹೇಮಾವತಿ ಎಸ್.ಆರ್.
89.2 %



ಕವನ ಹೆಚ್.ಪಿ.
88.9 %



ಶಿಲ್ಪಾ ಬಿ.
88 %



ತನುಜಾ ಕೆ.ಎಂ.
87 %



ಚರಣ್‌ರಾಜ್ ಆರ್.
87 %



ಹೇಮಲತಾ ಹೆಚ್.ಎಲ್.
87 %



ಜ್ಯೋತಿ ಆರ್.ಕೆ.
86 %



ರೀನತ್
85 %



ತೇಜಸ್ವಿನಿ ಹೆಚ್.ಎಸ್.
84.8 %



ರಂಜಿತ ಕೆ.ವಿ.
84 %



ವಿದ್ಯಾ ಡಿ.
83.8 %

# ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

## ಬಿ.ಎ. ತೃತೀಯ ಸೆಮಿಸ್ಟರ್



ಸ್ವಾತಿ ಕೆ.ಆರ್.
83 %



ಚೈತ್ರ ಡಿ.ಬಿ.
82.4 %



ಪೂಜಾ ಎಂ.ಎಸ್.
81 %



ದಿವ್ಯಶ್ರೀ ಕೆ.ಸಿ
80 %



ಪದ್ಮಾವತಿ
80 %



ಸ್ವರ್ಣ ಎಂ.ಎಸ್.
80 %



ದೀಕ್ಷಿತಾ
79.33 %



ವಂದನಾ ಎ.
79 %



ಅಖಿತಾ ಜೆ.ಎ.
79 %



ಯುವರಾಜ್ ಬಿ.ಟಿ.
79 %



ಸುಷ್ಮಾರಾಜ್ ಎಂ.ವಿ
77 %



ಶಿಲ್ಪ ಎಂ.ಎಸ್.
76 %



ರೇಖಾ ಕೆ.ಜಿ
75 %



ಚಂದನ ಡಿ.ಆರ್.
75 %

# ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

## ಬಿ.ಎ. ಐದನೇ ಸೆಮಿಸ್ಟರ್



ನಿಶ್ವಿತ ವಿ.ಸಿ
94.46 %



ಸಿಂಚನ ಜೆ.ಡಸ.
90 %



ಗಂಗಾಧರ ಡಿ.ಎಂ.
89 %



ಕಿರಣ್ ಎಂ.ವಿ.
86 %



ಮಧು ಡಿ.ಎಂ.
86 %



ವೆಂಕಟೇಶ್ ಆರ್.
85.69 %



ಸುಪ್ರಿಯಾ ಜಿ.ಆರ್.
85.53 %



ಗಗನ ಎ.ಎನ್.
85.2 %



ಕರಣ್ ಬಿ.
83.84 %



ವರ್ಷಿತ ಸಿ.ಆರ್.
80.61 %



ಅಭಿಲಾಷ್ ಎಂ.ಆರ್.
82.61 %



ಆಕಾಶ್ ಎಸ್.
79.9 %



ಮಹಮ್ಮದ್ ಶಭಾಜ್
78 %



ಕಾವ್ಯ ಕೆ.
76 %

# ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

## ಬಿ.ಕಾಂ. ಪ್ರಥಮ ಸೆಮಿಸ್ಟರ್



ಏಕ್ತ ಆರ್. ಜೈನ್
86.28 %



ಆನ್ಸಿ ಎ.
83.8 %



ಸಾರ್ಥಿಕಿ ಶೈಲೇಶ್‌ಕುಮಾರ್ ಸಿಂಗ್
77.28 %



ತನುಶ್ರೀ ಕೆ.
74 %



ಪವಿತ್ರ ಬಿ.ಎಂ.
73.71 %



ಮೋನಿಕ ಎ.
72.7 %



ಐಶ್ವರ್ಯ ಎಂ.
72 %



ತನುಶ್ರೀ ಟಿ.ಕೆ.
70.5 %



ಸಿಂಧು ಡಿ.ಬಿ.
70 %

# ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

## ಬಿ.ಕಾಂ. ತೃತೀಯ ಸೆಮಿಸ್ಟರ್



ಬಿ ಬಿ ಆಯೇಶ
86.57 %



ಮಹಾಲಕ್ಷ್ಮಿ ಆರ್.ಎಸ್.
86 %



ಅನುಶ್ರೀ ಪಿ.
85.57 %



ಅಮೃತ ಜಿ.ಆರ್.
85.42 %



ನಯನ ಬಿ
83.42 %



ಶಾಜಾದ್
82.57 %



ರೋಷನಿ ಟಿ.ಎಸ್.
79.57 %



ಯಶಸ್ವಿನಿ ಹೆಚ್.
79.43 %



ವಿಲಾಸ್ ಎ.ಎಸ್.
79 %



ತೇಜಸ್ವಿನಿ ಎಂ.ಎಸ್.
78.7 %



ಶ್ರೇಯಸ್ ಹೆಚ್.ಎನ್
78.57 %



ವೃಂದಾ ಬಿ.
78.45 %

# ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

## ಬಿ.ಕಾಂ. ತೃತೀಯ ಸೆಮಿಸ್ಟರ್



ಶಾಹೀದ ಮುಸ್ಕಾನ್
78.14 %



ಮಿಖಿರ ಆರ್. ಕದಂ
77.42 %



ಭರತ್ ಎಸ್.ಸಿ.
77.14 %



ಅಭಿಷೇಕ್ ಜೆ.ಎಸ್.
77 %



ಚಂದ್ರಮೌಳಿ ಬಿ.
76.71 %




ಸಂಗೀತ ಡಿ.ಎನ್..
76.71 %



ಶಶಾಂಕ್ ಜಿ.ಜೆ.
76.57 %



ಭುವನ ಜಿ.ವಿ.
76.2 %



ಇಖ್ರ ತಬಾಸುಮ್
75.28 %



ಅಭಿಷೇಕ್ ಎಸ್.ಆರ್.
75.14 %



ನೂಫಿಸಾ ಖಾನಂ
75.14 %



ಬಿ ಬಿ ಫಾತಿಮ
75 %



ಶುಭ. ಪಿ
74.71 %

# ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

## ಬಿ.ಕಾಂ. ಐದನೇ ಸೆಮಿಸ್ಟರ್



ರಕ್ಷಿತ ಎಂ.ಆರ್.
92 %



ಅನೂಷ ಡಿ.ಎಸ್.
90 %



ಅಸ್ಗರ್ ಅಲಿ
88.85 %



ವಿಶ್ವನಾಥ್ ಎಂ.
87.57 %



ಸಾಯುಶ್ ಎಸ್.ಹೆಚ್.
87.42 %



ಪವನ್ ಹೆಚ್.ಎಸ್.
87 %



ಸಂಗೀತ ಎಂ.
86.28 %



ಕಾವ್ಯ ಆರ್.ಆರ್.
85.71 %



ಸುಷ್ಮ ಕೆ.ಆರ್.
86.14 %



ಪದ್ಮಾವತಿ ವಿ.
85.85 %



ನಿಸರ್ಗ ಬಿ.ಆರ್.
85.71 %



ಹೇಮ ಡಿ.ವಿ.
85.5 %



ಕತಿಕಾ ಪಿ.ಕೆ.
85.57 %

# ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

## ಬಿ.ಕಾಂ. ಐದನೇ ಸೆಮಿಸ್ಟರ್



ನಿಸರ್ಗ ಬಿ.ಆರ್.
85.42 %



ಲಾವಣ್ಯ ಎನ್.ಎನ್.
85 %



ಪವಿತ್ರ ಯಾದವ್ ಜಿ.ಹೆಚ್.
84.14 %



ಶರತ್ ಹೆಚ್.ಎಂ.
84.28 %



ಅಕ್ಷಿತ
84 %



ಹರ್ಷಿತ್ ಕೆ.ಎಂ.
83.28 %



ಸ್ವಾತಿ ಹೆಚ್.ಎಸ್.
83.28 %



ದಿವ್ಯಪ್ರಿಯ ಎಂ.ಕೆ.
83.28 %



ಬಿಂದು ಸಿ.ಎಸ್.
82.71 %



ಸುಪ್ರಿಯ ಪಿ.ಎಸ್.
82.22 %



ಸಿಂಚನ ಎನ್.ಸ್ವಾಮಿ
82.14 %



ಮನೋಜ್ ಬಿ.ಜೆ.
82 %



ಪವಿತ್ರ ಕೆ.ಆರ್.
82 %



ಸುಮಂತ್ ಕೆ.ಎಸ್.
81.5 %



ಚೈತ್ರ ಎಂ.
80.71 %

# ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

## ಬಿ.ಕಾಂ. ಐದನೇ ಸೆಮಿಸ್ಟರ್



ಅಭಿಷೇಕ್ ಬಿ.ಕೆ.
80.14 %



ಸಚಿನ್ ಪಟೇಲ್
80 %



ಚಂದನ ಜಿ.ಎಸ್.
79 %



ಪೂರ್ವಿಕ ಎನ್.ಪಿ.
79 %



ನಿಖಿತ ಡಿ.ಎಸ್.
78.71 %



ಪ್ರಿಯಾ ಹೆಚ್.ಎಂ.
78.66 %



ಅಮರೇಂದ್ರ ಜಿ.
78.60 %



ಯಶಸ್ವಿನಿ ಬಿ.ಎಸ್
78.57 %



ಸಹನ ಎಸ್.
78.42 %



ಪ್ರೀತಿ ಎ.ಯು
77.14 %



ಹರ್ಷಿತ ಟಿ.ಬಿ.
76.42 %



ವಿಕಾಸ್ ಎಂ.ವಿ.
76.14 %



ಭಾವನ ಡಿ.ಆರ್.
75.42 %



ಶ್ರೇಯ ಎಂ.
75.4 %



ಅನುಪಮ. ಪಿ.
75.28 %

# ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

## ಎಂ.ಕಾಂ. ಎರಡನೇ ವರ್ಷ



ರೂಪಶ್ರೀ ಜಿ.
70.83 %



ಹರ್ಷಿತ ಎಂ.ಆರ್.
69.16 %



ಕಾವ್ಯ ಎಂ.
69.3 %



ಪ್ರೀತಿ ಎಸ್.ಆರ್.
69 %



ಭವಿತ ಜಿ.ಎಲ್.
64.3 %



ಚಂದನ ಕೆ.ಆರ್.
64 %



ಯಶಸ್ವಿನಿ ಜಿ
64 %



ರಂಜಿತ ಕೆ.ಪಿ.
63.16 %



ಲೀಲ ಕೆ.ಎನ್.
62.33 %



ಸಯೀದ ಬಾನು ಎಂ.
62.16 %



ನೀತು ಸಿಂಗ್ ಕೆ.ಎಂ.
61.83 %



ರಮ್ಯ ವಿ.ಎಸ್.
61.83 %



ಸ್ವಾಮಿ ಎಲ್.ಪಿ
61.66 %

# ನಿವೃತ್ತಿ ಹೊಂದಿದವರು



ಡಾ. ಉದಯರವಿ ಎಸ್.ವಿ.
(11-08-1987 ರಿಂದ 31-03-2024)
ಇಂಗ್ಲಿಷ್ ವಿಭಾಗ




ಡಾ. ಮಾಲತಿ. ವಿ
(12-10-1989 ರಿಂದ 30-04-2024)
ಮನೋವಿಜ್ಞಾನ ವಿಭಾಗ



ಪ್ರೊ. ನಿಂಗೇಗೌಡ
(04-07-1988 ರಿಂದ 31-05-2024)
ಭೂಗೋಳಶಾಸ್ತ್ರ ವಿಭಾಗ



ಕಾಂತರಾಜಯ್ಯ
(19-08-1991 ರಿಂದ 30-06-2024)
ಕನ್ನಡ ವಿಭಾಗ



ಪ್ರೊ. ಮಂಜುನಾಥಸ್ವಾಮಿ
(01-08-1991 ರಿಂದ 1-07-2024)
ಭೂಗೋಳಶಾಸ್ತ್ರ ವಿಭಾಗ

# ಸೈನಿಕ



Pruthvi B.H.,
1st B.A, 2 Sem,

ಪರ್ವತದ ಹಿಮದಲ್ಲಿ
ರಕ್ತ ಹೆಪ್ಪುಗಟ್ಟಿದೆ ದೇಹದಿ
ದೇಶ ರಕ್ಷಣೆಗೆ ಛಲ ಬಿಡದ
ವೀರ ಸೇನಾನಿಗಳಿಗೆ ನಮನ.
ಕಣ್ಣು ಮಿಟಕಿಸದೆ ದೃಷ್ಟಿಯನೆಟ್ಟು ದೂರದ ಶಬ್ದ ಗ್ರಹಿಸಿ
ಕಿರು ಬೆಳಕ ಬಣ್ಣ ನೋಡಿ
ಮದ್ದು ಗುಂಡುಗಳ ಮೂಸಿ
ದೇಶ ರಕ್ಷಿಸುವ ಸೇನಾನಿಗೆ ನಮನ.
ತಾಯಿಗೆ ದ್ರೋಹ ಬಗೆವ
ನೀಚರ ಕೊಂದು
ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿ
ಭಾರತಾಂಬೆಯನ್ನು ಸಂಕೋಲೆಯಿಂದ
ರಕ್ಷಣೆ ಮಾಡಿದ
ವೀರ ಸೇನಾನಿಗೆ ನಮನ.

# ಓ... ಶಿಕ್ಷಕ



Vishwas k.N.,
B.A. 1st year ,

"ಪುಸ್ತಕಗಳೇ ಆಸ್ತಿ
ಪ್ರಶ್ನೆಗಳೇ ಜಾಸ್ತಿ
ಪ್ರೀತಿಯ ವಿದ್ಯಾರ್ಥಿಗಳೇ ಭಗವಂತನ ಆಕೃತಿ
ಪಾಠ ಬೋಧನೆಗಳೇ ನಿರಂತರ ಬೆಳಗುವ ಜ್ಯೋತಿ
ಪರಿಶುದ್ಧ ಮಾತುಗಳೇ ಸ್ಫೂರ್ತಿ
ಪ್ರತಿದಿನ ಜ್ಞಾನ ಪಡೆಯುವುದೇ ಭಕ್ತಿ
ಪ್ರಪಂಚದೆಲ್ಲೆಡೆ ಅವ ಖ್ಯಾತಿ
ಪ್ರಕೃತಿಯಲ್ಲಿ ಅವನೊಬ್ಬ ವಿಶೇಷ ವ್ಯಕ್ತಿ".
ಲಾಯರ್ ಇಲ್ಲದಿದ್ದರೆ ನ್ಯಾಯವಿಲ್ಲ
ಡಾಕ್ಟರ್ ಇಲ್ಲದಿದ್ದರೆ ಆರೋಗ್ಯವಿಲ್ಲ
ಪೋಲಿಸ್ ಇಲ್ಲದಿದ್ದರೆ ಭದ್ರತೆ ಇಲ್ಲ
ಎಂಜಿನಿಯರ್ ಇಲ್ಲದಿದ್ದರೆ ಟೆಕ್ನಾಲಜಿ ಇಲ್ಲ
ಆದರೆ ಶಿಕ್ಷಕರು ಇಲ್ಲದಿದ್ದರೆ ಮೇಲಿನ
ಯಾರೂ ಇಲ್ಲ.

**ಮನದಾಳದ ಮಾತು :**

ಮನಸ್ಸೆಂಬ ಕೊಠಡಿಯಲಿ ಅಡಗಿವೆ ಭಾವನೆಗಳ ಭಂಡಾರ.
ಹೊರಹಾಕಲಾರದೆ ಹುಡುಕುತ್ತಿರುವೆ ಈ ಕೊರಗಿಗೆ ಪರಿಹಾರ.
ಭಾವನೆಗಳ ಅಲೆಯಲ್ಲಿ ಮುಳುಗಿ ದೂರವಾಗುತ್ತಿರುವೆ ತನ್ನಿಂದ
ಕಳೆದುಹೋದ ನನ್ನ ವ್ಯಕ್ತಿತ್ವವನ್ನು ಹುಡುಕುತ್ತಿರುವೆ ಸ್ವಾಭಿಮಾನದಿಂದ.
ನನ್ನವರೇ ಸೃಷ್ಟಿಸಿದ ಭಾವನೆಗಳ ಚಕವ್ಯೂಹದಲ್ಲಿ ಸಿಲುಕಿರುವ.
ಅಭಿಮನ್ಯುವಿನಂತೆ ಸೋಲದೇ ಬೇಧಿಸಿ–ಅರ್ಜುನನಾಗುವೆ.
ಭಾವನೆಗಳಿಗೆ ಸೋತು ಸರಿಯನ್ನು ತಪ್ಪು ತಪ್ಪನ್ನು ಸರಿ ಎಂದೆ
ಭಾವನೆಗಳಿಗೆ ಬೆಲೆಸಿಗದೆ ತಪ್ಪಿನ ಅರಿವಾಗಿ ಪಶ್ಚಾತಾಪದಲಿ ನೊಂದು ಬೆಂದೆ.
ಭಾವನೆಗಳ ಜೊತೆ ಮನುಷ್ಯನ ವ್ಯಕ್ತಿತ್ವವು ದೊಡ್ಡದೆಂದು ತಿಳಿದೆ
ಕಳೆದುಹೋದ ವ್ಯಕ್ತಿತ್ವವನ್ನು ಅದೆ ಭಾವನೆಗಳಿಂದ ಮರುಸೃಷ್ಟಿಸಿದೆ.

– **ಅಸ್ಗರ್ ಆಲಿ ಸಿ.ಬಿ**
B.Com 3rd year,

## ಕಾದಿಹೆನು ನಿನಗಾಗಿ



Spoorthi .R
1st year B.A

ಹೇ ಹೃದಯವೇ ಎಲ್ಲಿರುವೆ
ನಿನಗಾಗಿ ಚಡಪಡಿಸುತ್ತಿದೆ ಮನ
ನಿನ್ನ ನೆನಪೇ ಪ್ರತಿಕ್ಷಣ
ನೀನು ನನಗಾಗಿ ತೋರಿದ ಪ್ರೀತಿ
ನೀನು ನನಗಾಗಿ ತೋರಿದ ಕಾಳಜಿ
ನೀನು ನನಗಾಗಿ ತೋರಿದ ವಾತ್ಸಲ್ಯ
ಎಂದಿಗೂ ಮರೆಯಲಾರೆನು
ನಿನ್ನ ಜೊತೆ ಕಳೆದ ಆ ಕ್ಷಣವ
ಕಾದಿಹೆನು ನಿನಗಾಗಿ
ಬಂದು ಸೇರು ಬಾ ಈ ಜೀವವ
ಇಷ್ಟವಾಗಿ ಕಾಡಿಸದೆ
ಇಷ್ಟು ನನ್ನ ಕಾಯಿಸಿದೆ
ಕಾಡಬಾರದೆ ನನ್ನ ಸೇರಬಾರದೆ.

## ಹೇಳಿ ಹೋಗು ಕಾರಣ

ಏ... ಹೃದಯವೇ ಎಲ್ಲಿರುವೆ
ನೀನು ತೋರುತ್ತಿದ್ದ ಪ್ರೀತಿಗೆ
ನನ್ನ ಮನಸ್ಸು ಸೋತಿತು
ಸದಾ ಪ್ರೀತಿಯನ್ನು ಉಣಬಡಿಸುವ
ನಿನ್ನ ಮನಸ್ಸಿಗೆ ಎಂದಿಗೂ ನಾ ಋಣಿ
ಇಷ್ಟೊಂದು ಪ್ರೀತಿ ಕೊಟ್ಟು
ಎಲ್ಲಿ ಹೋದೆ ನನ್ನ ಬಿಟ್ಟು
ಪ್ರತಿಕ್ಷಣ ನಿನ್ನ ಪ್ರೀತಿಯ
ಹಂಬಲಿಸುತ್ತಿರುವ ನನ್ನ ಜೀವಕ್ಕೆ
ಏನು ಹೇಳುವೆ
ಏನು ತಿಳಿಯದ ಈ ಮನಸ್ಸಿಗೆ
ಎಂದೂ ಬೆಲೆಕಟ್ಟಲಾಗದ ಪ್ರೀತಿ ತೋರಿದೆ
ಆದರೆ ಈ ಪ್ರೀತಿಯ ಏಕೆ ತೊರೆದೆ
ಸದಾ ಪ್ರೀತಿಯ ಉಣಿಸುತ್ತಿದ್ದ ಮನಸ್ಸು
ಎಲ್ಲಿ ಹೋಯಿತು
ಹೇಳಿ ಹೋಗು ಕಾರಣ
ಹೇಳಿ ಹೋಗು ಕಾರಣ

## ಜೀವನ ಶೈಲಿ



Meghana H.Y.
2nd M.Com.

ಹೊರಟಿದೆ ದಿಕ್ಕಿಲ್ಲದ ಕಡೆ ಜೀವನ
ಸುಖ ದುಃಖದ ಈ ಪಯಣ
ನನಗಿಲ್ಲ ನಾಳೆಯ ಕೊರಗು
ಉಳಿದಿರುವುದು ಬರಿ ನೆನ್ನೆಯ ಸೊಬಗು
ಏಕಾಂಗಿಯ ಸಂಚಲನ
ನಾ ಈ ಯಾತ್ರೆಯ ನಾವಿಕನ ಅಥವಾ ಸಂಚಾಲಕನ ?

## ದೇವರಲ್ಲಿ ಮನವಿ

ಕೂಗಿದರು ನನ್ನನ್ನು ಅನಾಥನೆಂದು
ಅಣುಕಿಸಿದರು ನಾ ಪಾಪಿಯೆಂದು
ನೀ ನೀಡಿದೆ ಜೀವವ ಬದುಕಲೆಂದು
ನಾನೆಂದು ಕೇಳಿಲಿಲ್ಲ ಜನ್ಮ ನೀಡೆಂದು !
ನೀ ನೀಡಿದ ಭಿಕ್ಷೆ ಈ ಉಸಿರು
ಯಾವ ತಾಯಿಯ ಕರ್ಮದ ಬಸಿರು
ಯಾರೂ ಇಡಲಿಲ್ಲ ನನಗೆ ಹೆಸರು
ಆಗಲಿಲ್ಲ ನನ್ನ ಬಾಳು ಹಸಿರು
ಹುಸಿಯಾಯಿತಲ್ಲ ನನ್ನ ಕನಸು!
ಕೇಳದೆ ತೋರಿದರು ಕರುಣೆಯ
ಕೇಳಿದರು ತೋರಲಿಲ್ಲ ಪ್ರೀತಿಯ
ಅರಿಯಲು ಸೋತೆನು ನಿನ್ನ ಚೌತುರ್ಯ
ಈ ನಿನ್ನ ಸೃಷ್ಟಿ ಎಂತ ಮಾಧುರ್ಯ !

ನನ್ನವರಿಲ್ಲ ಹೇಳಲು ನನಗೆ ಮೌಲ್ಯ
ನೋವಿನ ಕಡಲಲ್ಲಿ ಮುಳುಗಿದ ನನ್ನ ಜೀವನ ಅನನ್ಯ
ನನ್ನ ಆತಂಕ ಹಂಬಲ ರೋಧನೆ ಜಗತ್ತಿಗೆ ಗೌಪ್ಯ
ನನ್ನ ಬದುಕಿನ ಹೋರಾಟದ ಸಾಧನೆ ಪ್ರಪಂಚಕ್ಕೆ ವಿಸ್ಮಯ
ಇದರ ನಡುವೆ ಗೆದ್ದು ನಿತ್ತ ಭಾವನೆ ತನ್ಮಯ
ಹಾಗಾಗಿ ಸಲ್ಲಿಸಿದೆ ಈ ನನ್ನ ಪ್ರಾರ್ಥನೆ !

# ತೊರೆದಳಂದು ಮನವನು.. ಇಂದು ತನುವನು



- Jyothi R.K.
2nd B.A,

ಮಮತೆಯ ಮಡಿಲಲ್ಲಿ ಮಲಗಿಹ
ಮುದ್ದು ಕಂದಾನ ಮೊಗವ ನೋಡುತಾ ಮೌನಿಯಾಗಿಹಳು
ಹೊರ ಲೋಕದ ಪರಿವೆಯನೇ ಮರೆತು
ಚಿಂತನಾ ಲೋಕದಲ್ಲಿ ಕಳೆದೋಗಿಹಳು.
ಆ ಮಧ್ಯರಾತ್ರಿಯಲ್ಲಿ ಬೀಳುವ ಮಳೆ ಸದ್ದು
ಹೊರಗಿನಿಂದ ಬಾಗಿಲು ಬಡಿಯುವ ಸದ್ದಾದೊಡನೆ
ವಾಸ್ತವಕ್ಕೆ ಮರಳಿದಳು.
ಮನದ ಬಾಗಿಲ ಬೀಗವನ್ನು ಭದ್ರಗೊಳಿಸಿ
ಮನೆ ಬಾಗಿಲಾ ತೆರೆಯುವಳು.
ಬಸವಳಿದ ಮನಸಿನಾ ಜೊತೆ ಕಾಲೆಳೆಯುತ್ತ
ಮಂಚವನೇರುವಳು.
ಕರುಳ ಬಳ್ಳಿಯ ಆಕಳ ನೀಗಿಸಲು
ಕಾಮಾಂಧನ ಹಸಿವಿಗೆ ಹಲ್ಕಚ್ಚಿ ಆಹಾರವಾಗುವಳು
ಕಂಡ ಕನಸುಗಳ
ಬಯಕೆಯ ಬುತ್ತಿಗಳ
ಮಾನ ಮರ್ಯಾದೆಗಳ
ಕೊನೆಗೆ ತನ್ನ ಪರಿಶುದ್ಧ ಅಂತರಾತ್ಮವನೂ
ಹಳೆಯ ಸೀರೆಗಳಲ್ಲಿ ಕಟ್ಟಿ ಬೆಂಕಿಗೊಗೆದವಳು.
ಯಾವ ಕಾರಣಕ್ಕವಳು ಈ ಚಕ್ರವ್ಯೂಹದಲ್ಲಿ ಸಿಲುಕಿದಳು
ಅಗತ್ಯಕೊ...?
ಅನಿವಾರ್ಯತೆಗೋ...?
ವಿಧಿಯ ಚೆಲ್ಲಾಟಕೋ...?
ಅವಿವೇಕದ ನಡತೆಗೋ...?
ಯೌವನದ ಹುಮ್ಮಸ್ಸಿನ ಅಹಂಕಾರಕೋ...?
ಅಥವಾ ಮತ್ತಾರದೊ ಮೋಸದ ಬಲೆಗೆ ಬಿದ್ದಳೋ...?
ತಿಳಿಯದು... ಆದರೆ...
ತೊರೆದಳಂದು ಮನವನು.
ಬದುಕ ಬದುಕ ಬದುಕ ಬೇಕೆಂದಿದ್ದವಳು
ಜೀವಂತ ಶವವಾಗಿಹಳು
ಅವಳ ತನುವನರಸಿ ಬರುವವನೊರತು
ಮತ್ತಾರಿಗೂ ಬೇಡವಾದವಳು
ತನ್ನ ದಾಹ ತೀರಿದಾ ಬಳಿಕ
ಅವನಿಗೂ ಬೇಡದವಳಾಗುವಳು.

ಸಮಾಜದ ಚುಚ್ಚು ಮಾತಿನ ಹುಳಿ ಪೆಟ್ಟಿಗೆ ಕಲ್ಲಾದವಳು
ಕೇವಲ ಇಪತ್ತೆರಡರ ಹರೆಯದಲ್ಲಿ ತನ್ನ ಮಮತೆಯ
ಕುಡಿಯ ಉತ್ತಮ ಭವಿಷ್ಯವೊಂದನೊರತು
ಮತ್ತೇನನೂ ತನಗಾಗಿ ದೇವರಾ ಬಳಿ ಬೇಡದವಳು.

ಬಿಡಬೇಕೆಂದರು ಬಿಡಿಸಿಕೊಳಲಾಗದ
ಜೇಡನಾ ಬಲೆಗೆ ಸಿಲುಕ್ಕಿ ನರಳುತ್ತಿಹಳು
ತನ್ನ ಕರಾಳ ಜೀವನದ ಕರಿನೆರಳು ತನ್ನ
ಕಂದನಿಗೆ ಸೋಕದಂತೆ ಬೆಳಸಿದಳು.
ಇವಳು ಜನ್ಮವೃತಾಂತದ ಪ್ರಶ್ನೆಗಳು..!
ಕೇವಲ ಪ್ರಶ್ನೆಗಳಷ್ಟೇ...
ಯಾವುದಕ್ಕೂ ಉತ್ತರವಿಲ್ಲ.
ಭಾವನೆಗಳನು ಬಾಚಿ ಮೂಲೆಗೆಸೆದವಳು
ಬಯಸಿದೊಂದ್ದನು ಮಾತ್ರ
ಬೆಳೆದ ಕರುಳ ಬಳ್ಳಿಯೊಡನೆ
ನೆಮ್ಮದಿಯ ಬದುಕು ಕಳೆಯ ಬೇಕೆಂದು
ಅಂತಹ ದಿನಗಳಿಗಾಗಿ ಪ್ರತಿ ದಿನ
ಪ್ರತಿ ಕ್ಷಣ ಕಾಯುತ್ತಿದ್ದವಳು.
ಆದರೆ ವಿಧಿಲಿಖಿತವೇ ಬೇರೆ
ಅವಳ ಕನಸೇ....
ಅವಳ ಕನಸ ಕೊಂದಿತು...
ಸಮಾಜದವರಿಗೆ ಭಾವನೆಗಳಿಲ್ಲದ ಹೆಬ್ಬಂಡೆಯಂತ್ತಿದ್ದವಳು
ತನ್ನ ಕಂಡ ಒಂದೇ ಒಂದು ಸಿಡಿಲಂಥ ಪ್ರಶ್ನೆಗೆ
ಕುಗ್ಗಿದಳು... ನಲುಗಿದಳು...
ಉತ್ತರಿಸಲಾರದೆ ತತ್ತರಿಸಿದಳು...
ಬದುಕಲಿದ್ದ ಕೊನೆ ಒಂದೇ ಬಂದು
ಬೆಳಕಿನ ಕಿಡಿಯೇ ಉರಿವ ಜ್ವಾಲೆಯಾಗಿದೆ
ಬಚ್ಚಿಟ್ಟ ಭಾವನೆಗಳು ಒಮ್ಮೆಗೆ ಪ್ರವಾಹದಂತೆ ಉಮ್ಮಳಿಸಿವೆ
ಬೇಡವೀ ವಿಕೃತ ಬದುಕೆಂದು
ಬಿಗಿದಳಾ ಕುಣಿಕೆಯನು
ಬಂಧನದ ಬಿಡುಗಡೆಗಾಗಿ
ಸಾಕು ಸಾಕೆನಗೀ ಜನ್ಮವೆನುತ
ತಳ್ಳಿದಳು ಕಾಲಡಿಯ ಕುರ್ಚಿಯನು...
ತೊರೆದಳಂದು ಮನವನು ಇಂದು ತನುವನು.

# ಭಗವದ್ಗೀತೆ ಜ್ಞಾನೋದಯದ ಹಾದಿ



- Supriya .G.
3rd Year B.A.

**ಪರಿಚಯ :** ಭಗವದ್ಗೀತೆಯೆ ಹಿಂದೂ ಧರ್ಮದಲ್ಲಿನ ಮಹತ್ವದ ಪವಿತ್ರ ಗ್ರಂಥವಾಗಿದ್ದು ಅದು ನೈತಿಕ ಮತ್ತು ತಾತ್ವಿಕ ವಿಷಯಗಳ ವಿವರವಾದ ಖಾತೆಯನ್ನು ಒದಗಿಸುತ್ತದೆ. ಹೆಚ್ಚು ನಿರ್ದಿಷ್ಟವಾದ ರೀತಿಯಲ್ಲಿ ಈ ಗ್ರಂಥವು ಪ್ರಜ್ಞಾ ಪೂರ್ವಕ ಮತ್ತು ಪ್ರಬುದ್ಧ ಜೀವನಕ್ಕೆ ಮಾರ್ಗವಾಗಿ ಕೃಷ್ಣನಲ್ಲಿ ನಂಬಿಕೆಯ ವಿಶೇಷತೆಗಳ ಕುರಿತು ವಿವರಿಸಲಾಗಿದೆ.

ಗೀತೆ ಎಂದೂ ಕರೆಯಲ್ಪಡುವ ಭಗವದ್ಗೀತೆಯು 700 ಶ್ಲೋಕಗಳನ್ನು ಒಳಗೊಂಡಿರುವ ಗ್ರಂಥವಾಗಿದೆ. ಗೀತೆಯು ಮಹಾಭಾರತ ಯುದ್ಧದ ಪ್ರಾರಂಭದ ಸಮಯದಲ್ಲಿ ಭಗವಾನ್ ಶ್ರೀ ಕೃಷ್ಣ ಮತ್ತು ಪಾಂಡವ ರಾಜಕುಮಾರ ಅರ್ಜುನ ನಡುವಿನ ಸಂಭಾಷಣೆಯಾಗಿದೆ. ಶ್ರೀ ಕೃಷ್ಣನು ತನ್ನ ಸೋದರ ಸಂಬಂಧಗಳೊಡನೆ ಸೋಲಿನ ಕಾರಣದಿಂದಾಗಿ ಅರ್ಜುನನು ತೋರಿದ ನೈತಿಕ ಗೊಂದಲಕ್ಕೆ ಪ್ರತಿಕ್ರಿಯಿಸಲು ತನ್ನನ್ನು ತಾನೇ ತೆಗೆದು ಕೊಳ್ಳುತ್ತಾನೆ. ಸಾಂಖ್ಯ, ಕರ್ಮಯೋಗ, ಯೋಗ, ಮೋಕ್ಷದ ಬೋಧನೆಗಳನ್ನು ವಿವರಿಸುತ್ತಾ ರಾಜಕುಮಾರ ಮತ್ತು ಹೋರಾಟಗಾರನಾಗಿ ಅವನ ಆದೇಶಗಳು ಮತ್ತು ಪಾತ್ರಗಳನ್ನು ರಾಜಕುಮಾರ ಅರ್ಜುನನಿಗೆ ತಿಳಿಸುತ್ತಾನೆ.

ಭಗವದ್ಗೀತೆಯ ಬೋಧನೆಯಲ್ಲಿ 'ಜ್ಞಾನದ ಮಾರ್ಗ' ಮೊದಲ ಹಂತವಾಗಿದೆ. ಒಬ್ಬ ವ್ಯಕ್ತಿಯ ಆಲೋಚನೆ ಮತ್ತು ಮೌಲ್ಯಮಾಪನದ ಮೂಲಕ ಸ್ವಯಂ ಜ್ಞಾನವನ್ನು ಪಡೆಯುತ್ತಾನೆ. ಮೋಕ್ಷವನ್ನು ಸಾಧಿಸುವ ಮತ್ತು ತಮ್ಮನ್ನು ಕಂಡುಕೊಳ್ಳುವ ಮಹತ್ವದ ಜ್ಞಾನವನ್ನು ಪಡೆಯುತ್ತಾನೆ. ಒಬ್ಬ ವ್ಯಕ್ತಿಯು ಧರ್ಮಗ್ರಂಥ ಮತ್ತು ಆಂತರಿಕ ಆತ್ಮಕ್ಕೆ ಸಂಬಂಧಿಸಿದ ವಿಷಯದ ಜ್ಞಾನವನ್ನು ಪಡೆದ ನಂತರ ಅವನು ಅಥವಾ ಅವಳು ಕ್ರಿಯೆಯ ಹಾದಿಗೆ ತಿರುಗುತ್ತಾರೆ. ಇದು ಒಬ್ಬ ವ್ಯಕ್ತಿಯ ತನ್ನ ಕುಟುಂಬ ತನ್ನ ಮತ್ತು ಸಮಾಜದ ಜವಾಬ್ದಾರಿಯನ್ನು ನಿರ್ವಹಿಸುವ ಮೂಲಕ ತನ್ನ ಕರ್ತವ್ಯವನ್ನು ಹೇಗೆ ಪೂರೈಸಬಹುದು ಎಂಬುದನ್ನು ಕಲಿಸುತ್ತದೆ.

ಆಳವಾದ ಬದ್ಧತೆ ಮತ್ತು ದೇವರ ಮೇಲಿನ ಸಂಪೂರ್ಣ ಪ್ರೀತಿಯನ್ನು ಅನುಭವಿಸಲು ದೈವಿಕ ಗುಣಗಳು ಮತ್ತು ಪರಿಶುದ್ಧತೆಯನ್ನು ಪಡೆದುಕೊಳ್ಳಲು ಭಗವದ್ಗೀತೆ ಜನರಿಗೆ ಕಲಿಸುತ್ತದೆ. ಧರ್ಮಗ್ರಂಥವು ಕಲಿಸಿದಂತೆ ದೇವರ ಸೇವೆಯ ಒಬ್ಬನು ತನ್ನ ಜೀವನ ಮತ್ತು ಸಮಯವನ್ನು ಅವನ ಅಥವಾ ದೇವರು ಮತ್ತು ಮಾನವಕುಲದ ಸೇವೆಯಲ್ಲಿ ಅರ್ಪಿಸಲು ಪ್ರೋತ್ಸಾಹಿಸುತ್ತದೆ. ಒಬ್ಬರ ಭಕ್ತಿಯ ಅದರ ಉತ್ತುಂಗವನ್ನು ತಲುಪಿದಾಗ ಧರ್ಮಗ್ರಂಥದಲ್ಲಿ ವಾಗ್ದಾನ ಮಾಡಿದಂತೆ ಮಹಾನ್ ಪ್ರೀತಿಯನ್ನು ನೀಡುವ ಮೂಲಕ ದೇವರು ಪ್ರತಿಕ್ರಿಯಿಸುತ್ತಾನೆ.

ಭಗವದ್ಗೀತೆಯ ಮೊದಲ ವಿಭಾಗವು ಅರ್ಜುನನ ನಿರಾಶೆಯ ಬಗ್ಗೆ. ಇದು ಭಕ್ತರ ಆಧ್ಯಾತಿಕತೆಗೆ ಸಂಬಂಧಿಸಿದೆ. ಶ್ರೀಮದ್ ಭಗವದ್ಗೀತೆ ಒಂದು ಯೋಗಶಾಸ್ತ್ರ. ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ಕೊನೆಗೆ "ಓಂ ತತ್ಸತ್ ಇತಿ ಶ್ರೀಮದ್ಭಗವದ್ಗೀತಾ ಸುಪನಿಷತ್ಸು ಬಹ್ಮಾವಿದ್ಯಾಯೊಂ ಯೋಗಶಾಸ್ತೇ ಶ್ರೀ ಕೃಷ್ಣಾರ್ಜುನ ಸಂವಾದೇ... ಯೋಗೋನಾಮ (ಪ್ರಥಮದಿಂದ ಅಷ್ಟಾದಶ) ಅಧ್ಯಾಯಃ" ಎಂದು ಹೇಳಲಾಗಿದೆ.

(ಮೊದಲನೆಯ ಅಧ್ಯಾಯ, ಅರ್ಜುನ ವಿಷಾದಯೋಗವಾದರೆ, ಎರಡನೆಯದು ಸಾಂಖ್ಯಯೋಗ, ಮೂರನೆಯದು ಕರ್ಮಯೋಗ, ನಾಲ್ಕನೆಯದು ಜ್ಞಾನಯೋಗ, ಐದನೆಯದು ಸನ್ಯಾಸ ಯೋಗ. ಆರನೆಯದು ಆತ್ಮ ಸಂಯಮ ಯೋಗ. ಏಳನೆಯದು ಜ್ಞಾನ– ವಿಜ್ಞಾನಯೋಗ. ಎಂಟನೆಯದು ಅಕ್ಷರ ಬ್ರಹ್ಮ ಯೋಗ. ಒಂಬತ್ತನೆಯದು ರಾಜವಿದ್ಯಾ ರಾಜಗುಹ್ಯ ಯೋಗ. ಹತ್ತನೆಯದು ವಿಭೂತಿಯೋಗ. ಹನ್ನೊಂದೆಯದು ವಿಶ್ವರೂಪದರ್ಶನ ಯೋಗ. ಹನ್ನೆರಡನೇಯದು ಭಕ್ತಿಯೋಗ. ಹದಿಮೂರನೆಯದು ಕ್ಷೇತ್ರ ಕ್ಷೇತ್ರಜ್ಞನ ವಿಭಾಗಯೋಗ. ಹದಿನಾಲ್ಕನೆಯದು ಗುಣತ್ರಯ ವಿಭಾಗಯೋಗ. ಹದಿನೈದನೆಯದು ಪುರುಷೋತ್ತಮ ಯೋಗ. ಹದಿನಾರನೆಯದು ದೈವಾಸುರ ಸಂಪದ್ ವಿಭಾಗಯೋಗ. ಹದಿನೇಳನೆಯದು ಶ್ರದ್ಧಾತ್ರಯ ವಿಭಾಗಯೋಗ. ಹದಿನೆಂಟನೆಯದು ಮೋಕ್ಷ ಸನ್ಯಾಸಯೋಗ.)

**ಭಗವದ್ಗೀತೆಯ ಸಾರಾಂಶ :**

ಭಗವದ್ಗೀತೆ ಅಂದರೆ ಭಗವಂತನ ಹಾಡು. ಮಹಾಭಾರತದ ಒಂದು ಭಾಗ. ಇದು ರಾಜಕುಮಾರನಾದ ಅರ್ಜುನ ಮತ್ತು ಎಲ್ಲಾ ದೈವಿಕತೆಯ ಅತ್ಯುನ್ನತ ಅವತಾರ. ಇಡೀ ಬ್ರಹ್ಮಾಂಡದ ಸೃಷ್ಟಿಕರ್ತ ಶ್ರೀ ಕೃಷ್ಣನ ನಡುವಿನ ಸಂಭಾಷಣೆಯ ಕುರಿತಾದ ಕಥೆಯಾಗಿದೆ. ಪುಸ್ತಕದಲ್ಲಿ ಅರ್ಜುನನು ತನ್ನ ಕರ್ತವ್ಯ, ಧರ್ಮ, ಗುಣ, ಯೋಧನೆ ಮತ್ತು ರಕ್ತಸಂಬಂಧದ ಕಾನೂನಿನ ಬಗ್ಗೆ ಗೊಂದಲಕ್ಕೊಳಗಾಗಿದ್ದಾನೆ. ಅವನ ನಿಜವಾದ ಮಾರ್ಗವಾದ ಸ್ವಧರ್ಮವನ್ನು ಅನುಸರಿಸಲು ಅರ್ಜುನನಿಗೆ ಮಾರ್ಗದರ್ಶನ ನೀಡಲು ಮತ್ತು ಪ್ರೋತ್ಸಾಹಿಸಲು ಕೃಷ್ಣ ಸಹಾಯ ಮಾಡುತ್ತಾನೆ. ಪುಸ್ತಕವು ಬದುಕಲು ಮೂರು ವಿಶಾಲ ಮಾರ್ಗಗಳನ್ನು ಚರ್ಚಿಸುತ್ತದೆ.

**ಭಗವದ್ಗೀತೆ ಧರ್ಮ :**

ಭಗವದ್ಗೀತೆಯು ಪ್ರಾಥಮಿಕವಾಗಿ 'ಕೃಷ್ಣ' ಎಂಬ ದೇವರು ಮತ್ತು ಅವನ ಮರ್ತ್ಯ ಸೋದರ ಸಂಬಂಧಿ ಅರ್ಜುನನ ನಡುವಿನ ಸಂಭಾಷಣೆಯ ಮೇಲೆ ಕೇಂದ್ರೀಕರಿಸುತ್ತದೆ. ಈ ಸಂಭಾಷಣೆಯ ಅರ್ಜುನ ಮತ್ತು ಅವನ ಸಹೋದರರಾದ ಪಾಂಡವರು ಮತ್ತು ಅವರ ಸೋದರ ಸಂಬಂಧಿಗಳಾದ ಕುರುಗಳ ನಡುವಿನ ಯುದ್ಧಕ್ಕೆ ಮುಂಚೆಯೇ ನಡೆಯುತ್ತದೆ. ಯಾರು ಸಾಮ್ರಾಜ್ಯದ ಉಸ್ತುವಾರಿ ವಹಿಸಬೇಕು. ಅರ್ಜುನನು ತನ್ನ ಕುಟುಂಬವನ್ನು ಕೊಲ್ಲಲು ಬಯಸುವುದಿಲ್ಲ ಮತ್ತು ಏನು ಮಾಡಬೇಕೆಂದು ಕೃಷ್ಣನಿಂದ ಮಾರ್ಗದರ್ಶನ ಪಡೆಯುತ್ತಾನೆ. ಈ ಅವಧಿಯ ಧಾರ್ಮಿಕತೆಯ ಪ್ರಾಥಮಿಕ ಗುರಿಯಾದ ತಿಳುವಳಿಕೆಗೆ ಹಲವು ಮಾರ್ಗಗಳ ಬಗ್ಗೆ ಇಬ್ಬರೂ ಸುದೀರ್ಘ ಸಂಭಾಷಣೆಯನ್ನು ನಡೆಸುತ್ತಾರೆ.

**ಭಗವದ್ಗೀತೆಯ ವಿಶ್ಲೇಷಣೆ :**

ಭಗವದ್ಗೀತೆಯು ಪ್ರಾಚಿನ ಭಾರತೀಯ ಪಠ್ಯವಾಗಿದ್ದು ಅದು ಹಿಂದೂ ಧರ್ಮದ ಐತಿಹಾಸಿಕ ಹಿನ್ನೆಲೆಗೆ ಬಹಳ ಮಹತ್ವದ್ದಾಗಿದೆ. ಹಿಂದೂ ಧರ್ಮ, ಭಾರತದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಧರ್ಮವಾಗಿದೆ ಮತ್ತು ಭಗವದ್ಗೀತೆಯು ಸಂಸ್ಕೃತಿಗೆ ಪ್ರಿಯವಾದ ಮಹಾಕಾವ್ಯವಾಗಿದೆ. ಭಗವದ್ಗೀತೆಯು ಮಹಾಭಾರತ ಎಂಬ ದೊಡ್ಡ ಭಾರತೀಯ ಮಹಾಕಾವ್ಯದ ಒಂದು ವಿಭಾಗವಾಗಿದೆ. ಇದು ಮೂಲಭೂತವಾಗಿ ಭಾರತೀಯ ಸಂಸ್ಕೃತಿಗೆ ಪ್ರಮುಖವಾದ ದೀರ್ಘ ಮಹಾಕಾವ್ಯವಾಗಿದೆ. ಹೆಚ್ಚಿನ ಧಾರ್ಮಿಕ ಗ್ರಂಥಗಳಂತೆ ಭಗವದ್ಗೀತೆಯು ಬಹು ನೈತಿಕತೆ ಮತ್ತು ಸಾಂಕೇತಿಕ ಸನ್ನಿವೇಶಗಳನ್ನು ಹೊಂದಿರುವ ಕಥೆಯಾಗಿದೆ.

**ಧ್ಯಾನಮ್ :**

ಪಾರ್ಥಯ ಪ್ರತಿಬೋಧಿತಾಂ ಭಗವತಾ ನಾರಾಯಣೇನ ಸ್ವಯಂ। ವ್ಯಾಸೇನ ಗ್ರಥಿತಾಂ ಪುರಾಣಮುನಿನಾ ಮಧ್ಯೇ ಮಹಾಭಾರತಮ್। ಅದ್ವೈತಾಮೃತ ವರ್ಷಿಣಿಂ ಭಗವತೀಂ ಅಷ್ಟಾದಶಾಧ್ಯಾಯಿನೀಂ।
ಅಂಬ ತ್ವಾಮನುಸಂದಧಾಮಿ ಭಗವದ್ಗೀತೆ ಭವದ್ವೇಷಿಣೀಮ್॥

**ಅರ್ಥ :**

ಅಮ್ಮ, ಭಗವದ್ಗೀತೆ ಭಗವಂತನಾದ ಶ್ರೀಮನ್ನಾರಾಯಣನಿಂದ ಪಾರ್ಥನಿಗೆ ಸ್ವತಃ ಉಪದೇಶಿಸ್ವಲ್ಪಟ್ಟ ಪ್ರಾಚೀನ ಮಹರ್ಷಿಗಳಾದ ವ್ಯಾಸರಿಂದ ಮಹಾಭಾರತದ ಮಧ್ಯದಲ್ಲಿ ಸೇರಿಸಲ್ಪಟ್ಟ ಅದ್ವೈತಾಮೃತವನ್ನು ವರ್ಷಿಸುತ್ತಿರುವ ಸಂಸಾರ ನಾಶಿನಿಯಾದ ಅಷ್ಟ ಅಧ್ಯಾಯಗಳುಳ್ಳ ಭಗವತಿಯಾದ ನಿನ್ನನ್ನು ಧ್ಯಾನಿಸುತ್ತೇನೆ.

# ರಾಜಕೀಯ :



- Asgar Ali C.B.
3rd B.¨Com.

ಏನೆಂದು ವರ್ಣಿಸಲಿ !
ನಮ್ಮ ಜನರ ದೇಶಭಕ್ತಿ ವರ್ಣಿಸಲು ಪದಗಳೇ ಸಾಲದು, ಮಹಾತ್ಮರೆಲ್ಲರೂ ಹೋರಾಡಿ ಸ್ವಾತಂತ್ರ ದೊರಕಿಸಿಕೊಟ್ಟರು.
ಸ್ವಾತಂತ್ರವನ್ನು ದುರುಪಯೋಗಿಸಿಕೊಂಡು ಜಾತಿಯ ವಿಷಬೀಜ ಬಿತ್ತಿದರು.
ಇವರು ಯೋಗ್ಯತೆ ಅರಿತು ಬಾಬಾಸಾಹೇಬ ಸಂವಿಧಾನ ಸೃಷ್ಟಿಸಿದರು.
ರಾಜಕಾರಣಿಗಳು ಸಂವಿಧಾನವ ಮರೆತು ತಮ್ಮ ನಿಯಮ ಮುಂದುವರೆಸಿದರು.
ಕೊಳಕು ರಾಜಕೀಯದಲ್ಲಿ ಸ್ವಾರ್ಥಕ್ಕಾಗಿ ಜಾತಿ–ಧರ್ಮ ಮಧ್ಯ ಎಳೆದರು.
ಅಣ್ಣ–ತಮ್ಮಂದಿರಂತಿದ್ದ ಜನರೆಲ್ಲ ಒಬ್ಬರನ್ನೊಬ್ಬರು ದ್ವೇಷಿಸುವಂತಾದರು.
ಹಿಂದೂ, ಮುಸ್ಲಿಂ, ಸಿಖ್, ಇಸಾಯಿ ಸಬ್ಜೋಸಬ್ ಹೈ ಬಾಯೀ ಬಾಯಿ ಎಂಬ ಪಾಠ ಮರೆಯುವಂತಾಯಿತು.
ಮಧ್ಯಾಹ್ನದ ಊಟ ಹಂಚಿಕೊಂಡು ತಿನ್ನುತ್ತಿದ್ದ ವಿದ್ಯಾರ್ಥಿಗಳಲ್ಲಿ ದ್ವೇಷ ಹುಟ್ಟಿಸಿದರು.
ಯುವಕರು ದೇಶದ ಭವಿಷ್ಯ ಎಂದು ಪಾಠ ಕಲಿಯತ್ತಿದ್ದ ವಿದ್ಯಾರ್ಥಿಗಳು.
ತಮ್ಮ ಭವಿಷ್ಯವನ್ನೆ ಮರೆತು ಜಾತಿ–ಧರ್ಮದ ವಿಚಾರವಾಗಿ ಹೊಡೆದಾಡುವಂತಾಯಿತು.

## ಮನದಾಳದ ಮಾತುಗಳು



- ಶ್ರೇಯ .ಎಂ.
3rd B.Com.

ಕಳೆದು ಹೋದ ಆ ದಿನಗಳ ನೆನಪುಗಳನ್ನೆಲಾ ಕಲೆಹಾಕಿ
ತೆಗೆಯುವ ಒಂದು ಕಿರುಚಿತ್ರವ
ಮನದ ಗೂಡೆಯಲ್ಲಿರುವ ಭಾವಗಳನ್ನೆಲಾ ಹೊರಹಾಕಿ
ಬಿಡಿಸುವ ಒಂದು ಮುದ್ದಾದ ಬಂಧವ.

ಜೊತೆಯಾಗಿ ಯಾರಿಲ್ಲವೆಂದು ಕೊರಗದಿರು
ಮನವೆ ನಿನಗಾಗಿ ನಿ ಸದಾ ಇರುವೆ.

ನಿನ್ನ ಸಾಧನೆಯ ಜೊತೆಗಿರುವೆ ಎಂದ ಸ್ನೇಹಿತೆ
ಸುಖ ದುಃಖಗಳಲ್ಲಿಯು ಬಾಗಿಯಾಗಿದ್ದ
ನನ್ನ ಪ್ರೀತಿಯ ಹಿತ ಇತ್ತೀಚಿನ ದಿನಗಳಲ್ಲಿ
ನಿನ್ನನ್ನು ಕಳೆದು ಕೊಳ್ಳುತ್ತಿರುವೆನಾ ಎಂಬ ವ್ಯಥೆ.
ಇದು ನನ್ನ ಮನದಾಳದ ಕವಿತೆ.

ಯಾವುದೊ ಯೊಚನೆಯಲ್ಲಿ ಕಳೆದು ಹೋಗಿರುವೆಯೇಕೆ
ಬಾರದಿರಲಿ ಯಾವ ಕೆಟ್ಟ ಯೋಚನೆ ಮನಕೆ ಏಳು ಬೀಳುಗಳಿರುವ
ಜೀವನದಲ್ಲಿ ಸಾಧಿಸುವೆ ಎಂಬ ಛಲವಿರಲಿ
ನಂಬಿಕೆ ನಿನ್ನ ಜೊತೆಗಿರಲಿ ಕಾಣದ ಕೈಗಳಿಂದ ಕಾಪಾಡುತ
ಸದಾ ಜೊತೆಗಿರುವ ಪವನ ಸುತ.

## ನುಡಿ ಮುತ್ತುಗಳು

- ಜ್ಞಾನವನ್ನು ಇತರರೊಂದಿಗೆ ಹಂಚಿಕೊಂಡಷ್ಟೂ ಹೆಚ್ಚುತ್ತದೆ.
- ಅನುಭವದಿಂದ ನಮಗೆ ಗೊತ್ತಾಗಿದ್ದೇನೆಂದರೆ, ಅನುಭವದಿಂದ ಯಾರೂ ಪಾಠ ಕಲಿಯುವುದಿಲ್ಲ.
- ವಿದ್ಯೆ ಸುಲಭವಾಗಿ ದಕ್ಕದು : ಅದಕ್ಕೆ ತಪಸ್ಸೇ ಅಗತ್ಯ
- ಗಂಟೆಗಟ್ಟಲೆ ಅರ್ಥಹೀನ ಮಾತು ಸಾಧಿಸಲಾಗದ್ದನ್ನು ಕ್ಷಣಕಾಲದ ಮೌನ ಸಾಧಿಸುವುದು.
- ಉತ್ತಮ ವ್ಯಕ್ತಿ ಮಾತಿನಿಂದ ಬಳಲುತ್ತಾನೆ, ಶುದ್ಧ ಚಾರಿತ್ರ್ಯದಿಂದ ಕಂಗೊಳಿಸುತ್ತಾನೆ.

# A Report on industrial visit to JK tyres



-Brundshree R.
3rd Year B.Com.

On 25th June 2024 final year B com and M.Com students of our college have visited Vikranth plant, JK tyre, Metagalli, Mysuru as a part of the curriculum.

JK tyres and industries Ltd is one of the prominent tyre manufacturing industries in India. It was established in the year 1981by two prominent entrepreneurs of Mirzapur namelyLalaJuggilalSinghania and LalaKamlapatSinghania. It's headquarter is at New Delhi and has 9 branches in India (Mysuru-3,Banmore-MP,Kankroli-RJ, Chennai-TN, Haridwar-3 UKD )and 3 branches in Mexico.

It employs around 5000 employees in India. In earlier days they employedonly men workers but now they are also employing women workers. At present around 200 women workers are working in all over India. Collectively it produces around 35 million tyres annually. It has achieved the highest ever revenue of 14681 crore rupees during the financial year 2023, registering a growth of 22% this is an account of growth in domestic witnessed in key segments wise commercial & passenger vehicle tyres.

JK tyres has acquired Vikranth plant on 14th February 1951.Dr. Raghupathi Singhania is the present chairman and managing director of JK tyres and industries Ltd. Sathish Kumar is the CEO of Vikranth plant. The company has produced the revolutionary OTR tyres which cost upto Rs.2 lakhs each and will be available in three sizes of 18.00-33, 21.00-35, 24.00-35. They are the major player in off-the-road tyres segment and have presence across India in almost all applications like Mining, Rock Excavating, Quarrying, Dam Building and Port operations.

When we visited to the Vikranth plant, JK tyres of Metagalli Mysuru,they warmly welcomed us and gave a PPT presentation regarding their industryalmost more than an hour and later took us to the manufacturing unitand explainedthe tyre manufacturing process step by step. Their hospitality was very nice, we spent more than 3 hours and understood all those processes of manufacturing tyres,felt very happy and enjoyed a lot.






*On 25th June 2024 final year B.Com and M.Com students of our college have visited Vikranthplant, JK tyre, Metagalli, Mysuru as a part of the curriculum.*

# An Industrial Report on TVS motor Manufacturing plant at Mysore



- **Nandana G S**
3rd B.Com.

A total of 43 final year BComstudents of PallagattiAdavappa College, Tiptur of 2023-24year batch visited the TVS plant Mysore on 25th June 2024. Departed from PAAC campus at 5 a.m and reached TVS motors Plant at 9:30 a.m. Initially the TVS personnel gave safety instructions and disciplines to be followed inside the plant.

Access to the plant was granted under full supervision by a competent team of Plant Managers . The manager initially briefed about the history of the company TVS stands for ThirukkurungudiVengaramSundram who was also the founder of TVS group. It is one of the largest manufacturers of motor cycles, mopheds and auto rickshaws in indiaand its legacy. A short video clip was played detailing the company's achievements over the years.

Post a break over tea and biscuits, the students were divided into two teams and were guided through the plant. After that we went to container gate to watch the live process that how a product is taken in container, movement of container by cranes , and placing them in ship during which the students were introduced to various kinds of machines like robotic, automatic, and semi automatic, process, efficiency and productivity improvement techniques and employee / worker management.

The students have understood the importance of a culture of innovation where in continuous improvement and TQM techniques such as Kaizen, PDCA, SDCA and 5S have been successfully implemented. The various types of plant layouts like Product, Process and Hybrid, has been explained accompanied by visual evidence.

The Importance of worker safety and satisfaction and the students have observed the whole scale implementation of worker oriented policies across the plant such as the use of PPE (Personal Protective Equipment), Andon, Preventive Maintenance, Signage, Life and Medical Insurance schemes etc. The students have also observed ancillary systems of inventory management, packaging, transporting, warehousing and cost management. Customer oriented product design has been described to them in great detail.




***Final Year B.Com students visited TVS Motor Manufacturing plant Mysore on 25th June 2024.***

Robotic assembly lines are used for painting and welding. 85% of the on site handling is automated. Go Green initiatives such as Solid Waste Management, Rainwater Harvesting, Artificial Ponds and Zero Liquid Discharge have been implemented. 62% of the energy requirements is met by Solar Power. A bird sanctuary with more than 30 unique species has been constructed in the campus.

The students were then assembled for a Question & Answer session. After a heartfelt vote of thanks and a photograph session, We gained knowledge regarding the production process and its Importance in the industry. We came to know more about practical And theoretical aspects as well as we got a chance to view the process involved in the Production.

## ನುಡಿ ಮುತ್ತುಗಳು

- ನಮಗೆ ಜನ್ಮ ನೀಡಿದವಳು,
  ನಮಗಾಗಿ ಜನ್ಮವೆತ್ತಿದವಳು
  ಹಾಗೂ ನಮ್ಮಿಂದ ಜನ್ಮ ಪಡೆದವಳು
  ಈ ಮೂವರನ್ನು ಗೌರವದಿಂದ ಕಾಣೋಣ

- ನಮ್ಮ ಮುಂದಿರುವ ಸವಾಲುಗಳು
  ಯಾವಾಗಲೂ ನಮ್ಮೊಳಗಿನ ಶಕ್ತಿಗಿಂತ
  ದುರ್ಬಲವಾಗಿರುತ್ತದೆ.
  ಸವಾಲುಗಳನ್ನು ಸಮರ್ಥವಾಗಿ ಎದುರಿಸೋಣ

## बेटी

- जब – जब जन्म लेती है बेटी ।
  खुशियाँ साथ लाती है बेटी ।

- ईश्वर की सौगात ही बेटी ।
  सुबह की पहली किरण है बेटी ।

- तरों की शीतल छाया है बेटी ;
  आँगन की चिडिया है बेटी ।

- त्याग और समपर्ण सिखाती है बेटी,
  नये – नये रिश्ते बनाती है बेटी ।

- जिस घर जाए, उजाला चाति है बेटी,
  बार – बार याद आती है बेटी ।

- बेटी की कीमत उनसे पूछो,
  जिनके पास नही है बेटी

Iqra Tabassum

## ಬದುಕಿನ ಅಷ್ಟ ಸೂತ್ರಗಳು

| | | |
|---|---|---|
| ► ಉತ್ಸಾಹಿಗಳಾಗಿರಿ | – | ಸೋಮಾರಿಗಳಾಗಬೇಡಿ |
| ► ತಾಳ್ಮೆ ಇರಲಿ | – | ದುಡುಕಬೇಡಿ |
| ► ಮಿತವ್ಯಯಿಗಳಾಗಿರಿ | – | ಜಿಪುಣರಾಗಬೇಡಿ |
| ► ಮೃದುವಾಗಿರಿ | – | ಗುಲಾಮರಾಗಬೇಡಿ |
| ► ಕರುಣೆ ಇರಲಿ | – | ಮೋಸ ಹೋಗಬೇಡಿ |
| ► ದಾನಿಗಳಾಗಿರಿ | – | ದರಿದ್ರರಾಗಬೇಡಿ |
| ► ಶೂರರಾಗಿರಿ | – | ಕಟುಕರಾಗಬೇಡಿ |
| ► ತ್ಯಾಗಿಗಳಾಗಿರಿ | – | ಆಡವಿಗೆ ಹೋಗಬೇಡಿ |

**लडकी होना आसान नही होता**

लडकी होना आसान नही होता
हजारो ख्वाहिशों को मारना पडता है ,
जिने के लिए ।

लडकी होना आसान नही होता,
सारी उम्र बीत जाती है,
दूसरों की खुशी के लिए,
अपनी खुशियो को दफनाने मे ।

लडकी होना आसान नही होता,
लडकी के हजारो सपने होते है ,
अपनो की खुशियों के लिए,
अपने सपनो को भूलना पडता है ।

लडकिया खुद से पहले
अपने परिवार के बारे मे सोचती है
लडकी होना आसान नही होता.

अपने अंदर कितना भी दुःख हो, पर
दुनिया के सामने अपने दुःख,
नही दिखाएँगी लडकिया
लडकी होना आसान नही होता ---

**Mamatha A II M.Com**

**मेरा मन**

यहां में कुत्तों के दिल का प्रतिनिधित्व कर रही हूँ ।
ना दुख में कुछ कहता हूं
में बेजुबान ही अच्छा हूं ।

यूं पिंजरे के पीछे गुमसुम सा रेहेता हूं
ना आज़ादी है और ना ही जुबान
ना ही कुछ कह सकता हूं
ना ही कुछ समझा सकता हूं
में बेजुबान ही अच्छा हूं ।

पर मैं बुरा नही हूँ
अपनेण बस मुझे अच्छा
बनना नही सिखाया

अपनी गलतियों के लिए
मुझ सज़ा मत दो ।

हमें भी इंसांनो की तरह
समय प्यार और धैर्य
की ज़सरत है ।

" पैसों से मिली खुशी कुछ समय
के लिए साथ रहती है
लेकिन
अपनों से मिली खुशी जिवन भर
साथ रहती है" ।

**अनुश्री पी**

**लोग है ना ...?**

तू अपनी खूबियाँ ढुंढ
खामियां निकलने के लिए लोग है ना ..

अगर रखना है कदम
हो आगे रख पीछे खींचने के लिए लोग है ना ..

सपने देखने है तो ऊँचा देख
नीया दिखाने के लिए लोग है ना ..

प्यार करना है हो खुद से कर
नफरत करने के लिए लोग है ना ..

तू कुछ करके दिखा दुनिया को
तालियां बजाने के लिए लोग है ना ..
हर बान का कोई जवाब नही होता ..
हर इश्क का नाम खराब नही होता ..

यू तो झूम लेते है नशे में पिनेवाले .. !
मगर हर नशे का नाम शराब नही हिता ..

खामोश चेहरे पर हजारों पहरे होते है .. !
हंसती आखो मे भी जख्म गहरे होते है
जिनसे अक्सर रूठ जाने है हम,
असल में उनसे ही रिश्ते गहरे होतेहै .. !

किसी ने खुदा से दुआ मांगी .. !
दुआ में अपनी मौत मांगी,
खुदा ने कहा, मौत तो तुजो दे दूँ मगर ..!
उसे क्या कहु जिसने तेरी जिदगी मांगी .. !

हर इंन्सान का दिल बुरा नही होता .. !
हर एक इंन्सान बुरा नही होता,
बुझ जाने है दीये कभी तेल की कमी से ..
हर बार कुसुर हवा का नही होता ...!!

# ವಿದ್ಯಾರ್ಥಿಗಳ ಚಿತ್ರ ರಚನೆ





**ಸೌಂದರ್ಯ ಟಿ.ಎನ್.**
ಬಿ.ಎ. 3ನೇ ಸೆಮಿಸ್ಟರ್



**ಡೇನಿಯಲ್ ಡಿ.ಎಂ.**
ಬಿ.ಎ. 3ನೇ ಸೆಮಿಸ್ಟರ್

# ವಿದ್ಯಾರ್ಥಿಗಳ ಚಿತ್ರ ರಚನೆ




**ಶಿಲ್ಪ ಎಂ.ಎಸ್.**
ಬಿ.ಎ. 2ನೇ ವರ್ಷ






**ಮೇಘನ ಹೆಚ್.ವೈ**
ಎಂ.ಕಾಂ. 2ನೇ ವರ್ಷ


PALLAGATTI ADAVAPPA ARTS AND
COMMERCE FIRST GRADE COLLEGE
DEPARTMENT OF PSYCHOLOGY
Workshop
On
Psychodrama
Tuesday 7th November 2023
Medini Kelamane
theater artist &drama
therapist


GPS Map Camera
Tiptur, Karnataka, India
7F65+RJH, Vidya Nagar, Tiptur, Karnataka 572201, India
Lat 13.262484°
Long 76.458297°
07/11/23 01:08 PM GMT +05:30
Google




ತುಮಕೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ 2024ನೇ ಸಾಲಿನ ಅಥ್ಲೆಟಿಕ್ಸ್ ಕ್ರೀಡಾಕೂಟದ
ಪುರುಷರ ವಿಭಾಗದಲ್ಲಿ(ಗುಂಪು ಚಾಂಪಿಯನ್‌ಷಿಪ್) ಪಡೆದ ನಮ್ಮ ಕಾಲೇಜಿನ ಕ್ರೀಡಾಪಟುಗಳು




ತುಮಕೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ 2024ನೇ ಸಾಲಿನ ಅಥ್ಲೆಟಿಕ್ಸ್ ಕ್ರೀಡಾಕೂಟದ
ಪುರುಷರ ವಿಭಾಗದಲ್ಲಿ ವೈಯಕ್ತಿಕ ಚಾಂಪಿಯನ್‌ಷಿಪ್ ಪಡೆದ ನಮ್ಮ ಕಾಲೇಜಿನ ಶಶಾಂಕ್‌ವರ್ಮ ಎಸ್.




ತುಮಕೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ 2023–24ನೇ ಸಾಲಿನ ಪುರುಷರ
ಥ್ರೋಬಾಲ್ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದ ನಮ್ಮ ಕಾಲೇಜಿನ ಕ್ರೀಡಾಪಟುಗಳು




ತುಮಕೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ 2024ನೇ ಸಾಲಿನ ಅಥ್ಲೆಟಿಕ್ಸ್ ಕ್ರೀಡಾಕೂಟದ
ಮಹಿಳೆಯರ ವಿಭಾಗದಲ್ಲಿ ವೈಯಕ್ತಿಕ ಚಾಂಪಿಯನ್‌ಶಿಪ್ ಪಡೆದ ನಮ್ಮ ಕಾಲೇಜಿನ ಶ್ರೇಯ ಎಂ.




ತುಮಕೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ 2023–24ನೇ ಸಾಲಿನ ಪುರುಷರ
ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದ ನಮ್ಮ ಕಾಲೇಜಿನ ಕ್ರೀಡಾಪಟುಗಳು

# ವಾರ್ಷಿಕ ಅಥ್ಲೆಟಿಕ್ಸ್ ಕ್ರೀಡಾಕೂಟ 2023-24








ವಾರ್ಷಿಕ ಅಥ್ಲೆಟಿಕ್ಸ್ ಕ್ರೀಡಾಕೂಟ 2023-24
ಉದ್ಘಾಟಿಸಿದ ಕಲ್ಪತರು ವಿದ್ಯಾಸಂಸ್ಥೆಯ ಪದಾಧಿಕಾರಿಗಳು




ಗ್ರಂಥಾಲಯ



ಪ್ರಯೋಗಾಲಯ
ಮನಃಶಾಸ್ತ್ರ ವಿಭಾಗ

## 2022-23ನೇ ಸಾಲಿನಲ್ಲಿ ವಿಷಯವಾರು/ವಿಭಾಗವಾರು ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

### ಬಿ.ಎ.



**ಅಮೂಲ್ಯ ಜಿ.ಎಂ. (HPG)**
ಭೂಗೋಳಶಾಸ್ತ್ರ (92.14%)



**ಪ್ರಿಯಾಂಕ (HPG)**
ಕಿಇತಿಹಾಸ (91.5%)



**ಉಷಾ ಹೆಚ್.ಎಂ. (HEP)**
ಅರ್ಥಶಾಸ್ತ್ರ (90.5%)
ರಾಜ್ಯಶಾಸ್ತ್ರ (85%)



**ಭೂಮಿಕ ಟಿ.ಎನ್. (HEK)**
ಐಚ್ಛಿಕ ಕನ್ನಡ (87.5%)

### ಬಿ.ಎ.



**ಚಿತ್ರಬಾಲ (EEPSY)**
ಐಚ್ಛಿಕ ಇಂಗ್ಲೀಷ್(79.5%)
ಮನಃಶಾಸ್ತ್ರ(84.5%)

### ಬಿ.ಎ.



**ರಾಕೇಶ್ ವಿ.ಆರ್. (HSK)**
ಸಮಾಜಶಾಸ್ತ್ರ (89.5%)

### ಬಿ.ಕಾಂ.



**ಹರೀಶ್. ವೈ**
ವಾಣಿಜ್ಯಶಾಸ್ತ್ರ (92.%)

### ಬಿ.ಕಾಂ.



**ಗಿರೀಶ್. ಕೆ.ಎಂ.**
ವಾಣಿಜ್ಯಶಾಸ್ತ್ರ (90%)

### ಎಂ.ಕಾಂ.



**ರಂಜಿತ ಜೆ.ಎಲ್.**
(70%)



ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮದರ್ಜೆ ಕಾಲೇಜು ಒಳಾಂಗಣದ ಒಂದು ನೋಟ




ಕಲ್ಪತರು ವಿದ್ಯಾಸಂಸ್ಥೆಯ ಆಡಳಿತ ಕಛೇರಿ